ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 8 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 144 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ

● ಜೆಡಿಎಸ್ ಶಾಸಕರು, ಮಾಜಿ ಸಚಿವರು, ಮುಖಂಡರ ಸಭೆಯಲ್ಲಿ ಮೈತ್ರಿ ತೀರ್ಮಾನ
● ಈಗಾಗಲೇ ದೆಹಲಿಯಲ್ಲಿ ಮಾಜಿ ಪ್ರಧಾನಿ ದೇವೇಗೌಡರಿಂದ ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ




ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ನಡೆದ ಜೆಡಿಎಸ್ ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಮುಖಂಡರ ಮಹತ್ವದ ಸಭೆ.

ಬೆಂಗಳೂರು, ಸೆ.7(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡು ಚುನಾವಣಾ ಕಣಕ್ಕಿಳಿಯಲು ತೀರ್ಮಾನಿಸಿವೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎರಡು ದಿನಗಳ ಹಿಂದೆ ದೆಹಲಿಗೆ ಭೇಟಿ ನೀಡಿದ್ದ ಸಂದರ್ಭದಲ್ಲೇ ಮೈತ್ರಿ ಸಂಬಂಧ ಚರ್ಚೆ ನಡೆಸಲಾಗಿದೆ ಎನ್ನಲಾಗಿದೆ.

ದೆಹಲಿ ಮಾತುಕತೆ ಯಶಸ್ವಿಯಾದ ಬೆನ್ನಲ್ಲೇ ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಜೆಪಿ ನಗರದ ತಮ್ಮ ನಿವಾಸದಲ್ಲಿ ಪಕ್ಷದ ಪ್ರಮುಖ ಶಾಸಕರು ಹಾಗೂ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದರಲ್ಲದೆ, ಚುನಾವಣಾ ಮೈತ್ರಿ ವಿಚಾರ ಬಹಿರಂಗಪಡಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ದೇವೇಗೌಡರು, ಇಂಡಿಯಾ ಮೈತ್ರಿಕೂಟದಲ್ಲಿರುವ ನಾಯಕರೇ ಈ ಹಿಂದೆ ಬಿಜೆಪಿ ಜತೆ ಕೈ ಜೋಡಿಸಿ ಅಧಿಕಾರ ನಡೆಸಿದ್ದಾರೆ ಆದರೆ, ಅವರೇ ಇಂದು ನೀತಿಪಾಠ ಹೇಳುತ್ತಿದ್ದಾರೆ.




ಕುಮಾರಸ್ವಾಮಿ ಅವರನ್ನು ಬಸ್ಸಿನಲ್ಲಿ ಕೂರಿಸಿಕೊಂಡು ರಾಜಭವನಕ್ಕೆ ತೆರಳಿದ್ದ ಪ್ರಮುಖ ನಾಯಕರೇ ಕಾಂಗ್ರೆಸ್‌ಗೆ ಜೋತು ಬಿದ್ದು ನಮ್ಮ ಬಗ್ಗೆ ಮಾತನಾಡುತ್ತಾರೆ. ಇವರೆಲ್ಲರ ಬಗ್ಗೆ ನನಗೆ ಎಲ್ಲವೂ ತಿಳಿದಿದೆ. ಪಕ್ಷ ಸಂಘಟನೆ ಮತ್ತು ಪ್ರಾದೇಶಿಕ ಪಕ್ಷದ ಉಳಿವಿಗಾಗಿ ಕಠಿಣ ತೀರ್ಮಾನ ಕೈಗೊಳ್ಳೋಣ. ನಮ್ಮ ಮೇಲೆ ಸವಾರಿ ಮಾಡಿ ರಾಜಕೀಯ ಮಾಡಲು ಹೊರಟಿದ್ದಾರೆ. ನಾವು ಹೋರಾಟ ಮಾಡೋಣ ಎಂದಾಗ ಸಭೆಯಲ್ಲಿದ್ದವರು ಯಾರೂ ಚಕಾರ ವೆತ್ತದೆ, ಮೈತ್ರಿಗೆ ಒಗ್ಗಟ್ಟಿನ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕುಮಾರಸ್ವಾಮಿ ಅವರು ಅನಾರೋಗ್ಯದಿಂದ ಚೇತರಿಸಿಕೊಂಡಿದ್ದು, ವಿಶೇಷ ತುರ್ತು ಸಭೆ ನಡೆಸಿ ಶಾಸಕರು ಮತ್ತು ಮುಖಂಡರ ವಿಶ್ವಾಸ ಪಡೆದುಕೊಂಡಿದ್ದಾರೆ.

ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ಬಿಜೆಪಿ ನಾಯಕರು ಜೆಡಿಎಸ್ ಜತೆ ಕೈ ಜೋಡಿಸಲು ಮುಂದಾಗಿದ್ದರು. ಇದಾದ ನಂತರ ಕುಮಾರಸ್ವಾಮಿ ತೆರೆಮರೆಯಲ್ಲಿ ಬಿಜೆಪಿ ನಾಯಕರೊಂದಿಗೆ ಮಾತುಕತೆ ನಡೆಸಿರುವುದನ್ನು ಇಲ್ಲಿ ಸ್ಮರಿಸಬಹುದು. ಅಂತಿಮವಾಗಿ ದೇವೇಗೌಡರು, ದೆಹಲಿಯಲ್ಲಿ ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ನಡೆಸಿದ ನಂತರ ಮೈತ್ರಿ ಮಾಡಿಕೊಳ್ಳಲು ಹಸಿರು ನಿಶಾನೆ ತೋರಿದ್ದಾರೆ.

ದೆಹಲಿ ಭೇಟಿ ಸಂದರ್ಭದಲ್ಲಿ ಗೌಡರು, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಜತೆ ಈ ಸಂಬಂಧ ಚರ್ಚೆ ಮಾಡಿದ್ದಲ್ಲದೆ, ಪ್ರಧಾನಿ ಮೋದಿ ಅವರ ಜತೆಗೂ ದೂರವಾಣಿ ಮೂಲಕ ಚರ್ಚೆ ಮಾಡಿದ್ದಾರೆ. ಅಮಿತ್ ಷಾ ಜತೆಗಿನ ಮಾತುಕತೆ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ರಾಜ್ಯದ ದೆಹಲಿ ನಾಯಕರೊಬ್ಬರು ಉಪಸ್ಥಿತರಿದ್ದರು. ● 9ನೇ ಪುಟಕ್ಕೆ

ನದಿ ನೀರು ಹಂಚಿಕೆ, ಬರ ಪರಿಹಾರ ಮಾರ್ಗಸೂಚಿ ಬದಲಾವಣೆ ಸಂಬಂಧ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ

● ಸಂಪುಟ ಸಭೆಯಲ್ಲಿ ನಿರ್ಧಾರ ● ಶಕ್ತಿ ಯೋಜನೆಗೆ ಸ್ಮಾರ್ಟ್‌ಕಾರ್ಡ್ ಪಡೆಯಲು ಮತ್ತೆ 3 ತಿಂಗಳ ಕಾಲಾವಕಾಶ ● 500 ಕೋಟಿಯಲ್ಲಿ ಸಾವಿರ ಬಸ್ ಖರೀದಿಸಲು ತೀರ್ಮಾನ ● ಕೆಪಿಎಸ್‌ಸಿ ಎರಡು ಸದಸ್ಯ ಸ್ಥಾನ ತುಂಬಲು ಸಿಎಂ ಅಧಿಕಾರ

ಬೆಂಗಳೂರು, ಸೆ.7– ನದಿ ನೀರು ಹಂಚಿಕೆ ಹಾಗೂ ರಾಜ್ಯದಲ್ಲಿ ತಲೆದೋರಿರುವ ಬರ ಪರಿಹಾರಕ್ಕೆ ಮಾರ್ಗಸೂಚಿ ಬದಲಾವಣೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಸರ್ವಪಕ್ಷ ನಿಯೋಗ ಕೊಂಡೊಯ್ಯಲು ಸಂಪುಟ ಸಭೆ ತೀರ್ಮಾನಿಸಿದೆ.

ಆದರೆ, ಯಾವಾಗ ಕೊಂಡೊಯ್ಯಬೇಕು ಎಂಬ ರೂಪುರೇಷೆ ನಿರ್ಧರಿಸುವುದನ್ನು ಮುಖ್ಯಮಂತ್ರಿ ವಿವೇಚನೆಗೆ ಬಿಡಲಾಗಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್, ಕಾವೇರಿ ಜಲಾನಯನ ಪ್ರದೇಶದ ರೈತರ ಹಿತ ಕಾಪಾಡಲು ಬದ್ಧವಾಗಿದ್ದು, ಈಗ ಉಂಟಾಗಿರುವ ಸಂಕಷ್ಟದಿಂದ ಪಾರಾಗುವುದು. ಯಾವ ಕಾನೂನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಜಲ ಸಂಪನ್ಮೂಲ ಸಚಿವರು ಸಭೆಯ ಗಮನಕ್ಕೆ ತಂದಿದ್ದಾರೆ ಎಂದರು.



ಕಾವೇರಿ ಜಲಾನಯನ ಭಾಗದಲ್ಲಿ ಉತ್ತಮ ಮಳೆಯಾಗಲಿದೆ ಎಂಬ ವರದಿ ಬಂದಿದೆ. ಈ ವರದಿಯಿಂದ ಸರ್ಕಾರ ಆಶಾದಾಯಕವಾಗಿದ್ದು, ಮುಂದಿನ ದಿನಗಳಲ್ಲಿ ಒಳ್ಳೆಯ ಪರಿಸ್ಥಿತಿ ಬರಬಹುದು ಎಂದು ಆಶಾಭಾವನೆ ವ್ಯಕ್ತಪಡಿಸಿದರು.

'ಶಕ್ತಿಗೆ ಸ್ಮಾರ್ಟ್‌ಕಾರ್ಡ್: ಶಕ್ತಿ ಯೋಜನೆಯಡಿ ಸ್ಮಾರ್ಟ್‌ಕಾರ್ಡ್ ● 9ನೇ ಪುಟಕ್ಕೆ

ಜಾತಿ ದೌರ್ಜನ್ಯ, ಕೊಲೆ ಪ್ರಕರಣಗಳಲ್ಲಿ ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಳ್ಳದಿದ್ದರೆ ಎಸ್‌ಪಿ, ಡಿಸಿಪಿಗಳ ವಿರುದ್ಧ ಶಿಸ್ತು ಕ್ರಮ

● ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ● ರಾಜ್ಯ ಮಟ್ಟದ ಜಾಗೃತ, ಉಸ್ತುವಾರಿ ಸಮಿತಿ ಸಭೆ ● 60 ದಿನದಲ್ಲಿ ಪ್ರಕರಣದ ಆರೋಪ ಪಟ್ಟಿ ದಾಖಲಾಗಬೇಕು ● ಕಾನೂನಿನನ್ವಯ ಸಂತ್ರಸ್ತರಿಗೆ ರಕ್ಷಣೆ ಕಲ್ಪಿಸಲು ಕಟ್ಟಾಜ್ಞೆ ● ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಲು ಸಲಹೆ ● ಕೆಡಿಪಿ ಸಭೆಯಲ್ಲಿ ದೌರ್ಜನ್ಯ ಪ್ರಕರಣಗಳ ಬಗ್ಗೆ ಪರಿಶೀಲಿಸಲು ಸುತ್ತೋಲೆ

ಬೆಂಗಳೂರು, ಸೆ.7–(ಕೆಎಂಶಿ) ಜಾತಿ ದೌರ್ಜನ್ಯ, ಕೊಲೆ ಪ್ರಕರಣಗಳನ್ನು ನಿಗದಿತ ಸಮಯದಲ್ಲಿ ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸದಿದ್ದರೆ, ಜಿಲ್ಲಾ ವರಿಷ್ಠಾಧಿಕಾರಿ (ಎಸ್‌ಪಿ)ಗಳು ಹಾಗೂ ನಗರ ಪ್ರದೇಶಗಳಲ್ಲಿ ಡಿಸಿಪಿಗಳನ್ನು ಹೊಣೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ದೌರ್ಜನ್ಯ ಪ್ರಕರಣಗಳ ಸಮರ್ಥವಾಗಿ ನಿರ್ವಹಿಸಲು ಪೊಲೀಸ್, ಕಾನೂನು, ಸಮಾಜ ಕಲ್ಯಾಣ ಹಾಗೂ ಕಂದಾಯ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಅಂಕಿ ಅಂಶಗಳನ್ನು ಮುಂದಿಟ್ಟು ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಕಳೆದ 5 ವರ್ಷಗಳಲ್ಲಿ ದಾಖಲಾದ 10893 ಪ್ರಕರಣಗಳಲ್ಲಿ 1100 ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸದೆ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಅಧಿಕಾರಿಗಳು ಅಸಡ್ಡೆ ತೋರುತ್ತಿದ್ದೀರಿ ಎಂದು ಅವರು ಕಿಡಿಕಾರಿದರು. ಭಾರತದ ದಂಡ ಸಂಹಿತೆಯಡಿ ಜಾತಿ ದೌರ್ಜನ್ಯ ಪ್ರಕರಣಗಳಿಗೆ ಸೂಕ್ತ ನ್ಯಾಯ ಒದಗಿಸಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ, ನಾಗರಿಕ ಹಕ್ಕು ರಕ್ಷಣಾ ● 9ನೇ ಪುಟಕ್ಕೆ



ಇಂದು ಕೆಆರ್‌ಎಸ್‌ಗೆ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ನಿಯೋಗ

ಜಲಾಶಯದ ವಾಸ್ತವ ಸ್ಥಿತಿ ಅಧ್ಯಯನ

ಮಂಡ್ಯ, ಸೆ.7– ಕೃಷ್ಣರಾಜಸಾಗರ ಜಲಾಶಯದ ವಾಸ್ತವ ಸ್ಥಿತಿ ಅರಿಯಲು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಚಿವರಾದ ಗೋವಿಂದ ಕಾರಜೋಳ, ಗೋಪಾಲಯ್ಯ, ಸಂಸದರಾದ ಪ್ರತಾಪ್ ಸಿಂಹ, ಸುಮಲತಾ ಅಂಬರೀಶ್ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಅಶ್ವಥ್ ನಾರಾಯಣ್ ತಿಳಿಸಿದರು.

ಗುರುವಾರ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಲಾಶಯದ ನೀರಿನ ಸಂಗ್ರಹಣೆ ವಾಸ್ತವ ಪರಿಸ್ಥಿತಿಯನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡುವಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ರೈತರ ಹಿತ ಕಾಪಾಡುವುದನ್ನು ಬಿಟ್ಟು ತಮಿಳುನಾಡಿನ ರೈತರ ಹಿತ ಕಾಪಾಡಲು ಟೊಂಕಕಟ್ಟಿ ನಿಂತಿರುವಂತೆ ಕಾಣುತ್ತಿದೆ. ತಮಿಳುನಾಡು, ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಸಲ್ಲಿಸಿ ನಿತ್ಯ 25 ಸಾವಿರ ಕ್ಯುಸೆಕ್ ನೀರು ಹರಿಸಬೇಕೆಂದು ಅರ್ಜಿ ಸಲ್ಲಿಸಿದ ತಕ್ಷಣ ಯಾವುದೇ ಆಲೋಚನೆ ಮಾಡದೆ ನೀರಾವರಿ ಸಲಹಾ ಸಮಿತಿ ಸಭೆ ಕರೆಯದೆ ಸಂಕಷ್ಟದ ಪರಿಸ್ಥಿತಿಯಲ್ಲೂ ತಮಿಳುನಾಡಿಗೆ ನೀರು ಹರಿಸಿದ್ದಾರೆ ಎಂದು ಹರಿಹಾಯ್ದರು.





ಇದನ್ನು ಪ್ರಶ್ನಿಸಿದರೆ ನ್ಯಾಯಾಲಯದ ಆದೇಶದ ವಿರುದ್ಧ ಹೋಗಲು ತಯಾರಿಲ್ಲ. ಬೇಕಿದ್ದರೆ ರೈತರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿ ಎಂದು ಉಡಾಫೆಯ ಮಾತುಗಳನ್ನು ಆಡಿದ್ದಾರೆ. ಕಾವೇರಿ ಕೊಳ್ಳದ ರೈತರಿಗೆ ಬಿತ್ತನೆ ಮಾಡುವುದು ಬೇಡ ಎಂದು ಹೇಳಿರುವಂತೆ, ತಮಿಳುನಾಡು ಸರ್ಕಾರ ತಮಿಳುನಾಡಿನ ರೈತರಿಗೆ ಹೇಳಬೇಕು ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಇವರಿಗೆ ನಾಚಿಕೆಯಾಗಬೇಕು. ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವರು ಸಹ ಬಿತ್ತನೆ ಮಾಡಬೇಡಿ ಎಂದು ಹೇಳುತ್ತಿರುವುದು ದುರ್ದೈವ ಎಂದು ಲೇವಡಿ ಮಾಡಿದರು. ಈಗಾಗಲೇ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ಅಲ್ಲದೇ ಕಾವೇರಿ ನೀರಾವರಿ ಸಲಹಾ ಸಮಿತಿ ಸೂಚನೆ ಮೇರೆಗೆ ಸೆ.12 ರವರೆಗೆ ನೀರು ಹರಿಸುತ್ತೇವೆ ನಂತರ ನಿಲ್ಲಿಸಲಾಗುವುದು ● 9ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿ ವಿರುದ್ಧ ಇಂದು ಬಿಜೆಪಿ ಪ್ರತಿಭಟನೆ



ಬೆಂಗಳೂರು, ಸೆ.7– ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಶುಕ್ರವಾರ ರಾಜ್ಯಾದ್ಯಂತ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಗುರುವಾರ ಹೇಳಿದ್ದಾರೆ.

ಬೆಂಗಳೂರು ಮತ್ತು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ಧರಣಿ ನಡೆಸಲಾಗುವುದು ಎಂದು ಯಡಿಯೂರಪ್ಪ ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ನಾಳೆ ನಮ್ಮ ಶಾಸಕರು, ಸಂಸದರು ಸೇರಿ 15ರಿಂದ 20 ಸಾವಿರಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸರ್ಕಾರ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಆಡಳಿತ ಸಂಪೂರ್ಣ ಕುಸಿದಿದೆ ಎಂದು ಮಾಜಿ ಸಿಎಂ ಆರೋಪಿಸಿದ್ದಾರೆ.



ಬರಗಾಲದಿಂದ ಜನ ತತ್ತರಿಸುತ್ತಿದ್ದಾರೆ. ವಿದ್ಯುತ್ ಕಡಿತ ಮಾಡಲಾಗುತ್ತಿದೆ ಮತ್ತು ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಹೀಗಾಗಿ ಬೆಂಗಳೂರು, ತಾಲೂಕು ಕೇಂದ್ರ ಸೇರಿದಂತೆ ರಾಜ್ಯಾದ್ಯಂತ ಪ್ರತಿಭಟನಾ ರ್‍ಯಾಲಿ ನಡೆಸುತ್ತಿದ್ದೇವೆ. ನಾಳೆಯಿಂದ ನಮ್ಮ ಹೋರಾಟದ ಆರಂಭ ವಷ್ಟೇ. ಈ ಹೋರಾಟ ರಾಜ್ಯಾದ್ಯಂತ ನಡೆಯಲಿದೆ. ಇದು ಭವಿಷ್ಯದಲ್ಲಿ ಯಾವ ರೂಪ ಪಡೆದುಕೊಳ್ಳುತ್ತದೆ ಎಂದು ನಮಗೇ ಗೊತ್ತಿಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ. ನಮಗೆ ಕುಡಿಯಲು ನೀರು ಇಲ್ಲದಿದ್ದರೂ ತಮಿಳುನಾಡಿಗೆ ಪ್ರತಿದಿನ 5,000 ಕ್ಯೂಸೆಕ್ ಕಾವೇರಿ ನೀರನ್ನು ಬಿಡಲಾಗುತ್ತಿದೆ ಎಂದು ಯಡಿಯೂರಪ್ಪ ಆರೋಪಿಸಿದರು.

ಅರಣ್ಯ ಇಲಾಖೆಯಿಂದ ದಸರಾ ಗಜಪಡೆಯ 14 ಆನೆಗಳಿಗೂ ವಿಮೆ

● ಗಂಡಾನೆಗಳಿಗೆ ತಲಾ 5 ಲಕ್ಷ, ಹೆಣ್ಣಾನೆಗಳಿಗೆ ತಲಾ 4.50 ಲಕ್ಷ ರೂ ● ಮಾವುತ, ಕಾವಾಡಿ, ಉಸ್ತುವಾರಿ ಸಿಬ್ಬಂದಿಗೆ ತಲಾ 2 ಲಕ್ಷ ರೂ. ವಿಮೆ; ಆಸ್ತಿ, ಜೀವಹಾನಿಗೆ 50 ಲಕ್ಷ ರೂ. ವಿಮೆ ● ಸೆ.1ರಿಂದ ಅಕ್ಟೋಬರ್ ಅಂತ್ಯದವರೆಗೂ ವಿಮಾ ಅವಧಿ ಚಾಲ್ತಿ

ಮೈಸೂರು,ಸೆ.7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಎಲ್ಲಾ 14 ಆನೆ, ಮಾವುತರು, ಕಾವಾಡಿಗಳು ಹಾಗೂ ಉಸ್ತುವಾರಿ ಸಿಬ್ಬಂದಿಗೆ ಅರಣ್ಯ ಇಲಾಖೆ ಮುಂಜಾಗ್ರತಾ ಕ್ರಮವಾಗಿ ವಿಮೆ ಮಾಡಿಸಿದೆ.

ಕೆಲವು ವರ್ಷಗಳಿಂದ ದಸರಾ ಗಜಪಡೆಗೆ ವಿಮೆ ಮಾಡಿಸುವ ಪದ್ಧತಿ ಅನುಸರಿಸಲಾಗುತ್ತಿದ್ದು, ಈ ಬಾರಿ 14 ಆನೆ, 14 ಮಾವುತರು, 14 ಮಂದಿ ಕಾವಾಡಿಗಳು, 6 ಮಂದಿ ವಿಶೇಷ ಮಾವುತರು, ಆರ್‌ಎಫ್‌ಓ, ಡಿಆರ್‌ಎಫ್‌ಓ, ಪಶುವೈದ್ಯ, ಸಹಾಯಕರು ಹಾಗೂ ಆನೆಗಳ ಉಸ್ತುವಾರಿ ನೋಡಿಕೊಳ್ಳುವ ಸಿಬ್ಬಂದಿ ಮಾತ್ರವಲ್ಲದೆ, ಸಂಭವಿಸಬಹುದಾದ ಆಸ್ತಿ ಹಾನಿಗೂ ವಿಮೆ ಮಾಡಿಸಲಾಗಿದೆ. ಯುನೈಟೆಡ್ ಇಂಡಿಯಾ ಇನ್ಷೂರೆನ್ಸ್ ಸಂಸ್ಥೆಯಿಂದ ಪಾಲಿಸಿ ಮಾಡಿಸಲಾಗಿದ್ದು, ಸೆ.1ರಿಂದ ಚಾಲ್ತಿಗೆ ಬರುವಂತೆ ಅಕ್ಟೋಬರ್ ಅಂತ್ಯದವರೆಗೆ ವಿಮಾ ಅವಧಿ ಇರುವಂತೆ ವಿಮೆ ಮಾಡಿಸಲಾಗಿದೆ.

ಈ ಬಾರಿ ದಸರಾ ಮಹೋತ್ಸವದಲ್ಲಿ ಎರಡೂ ತಂಡಗಳಿಂದ ಒಟ್ಟು 14 ಆನೆಗಳು ಪಾಲ್ಗೊಳ್ಳುತ್ತಿವೆ. ಅದರಲ್ಲಿ 10 ಗಂಡಾನೆ, 4 ಹೆಣ್ಣಾನೆಗಳು. ಗಂಡಾನೆ ಗಳಿಗೆ ತಲಾ 5 ಲಕ್ಷ ರೂ. ಮೊತ್ತದ ವಿಮೆ, ಹೆಣ್ಣಾನೆಗಳಿಗೆ ತಲಾ 4.50 ಲಕ್ಷ ರೂ., 14 ಆನೆಗಳನ್ನು ಪಾಲನೆ ಮಾಡುವ 14 ಮಂದಿ ಮಾವುತರು, 14 ಮಂದಿ ಕಾವಾಡಿಗಳು, 6 ಮಂದಿ ವಿಶೇಷ ಮಾವುತರು, ಆನೆಗಳಿಗೆ ವಿಶೇಷ ಆಹಾರ ತಯಾರಿಸುವ ಸಿಬ್ಬಂದಿ, ಅರಣ್ಯ ಸಿಬ್ಬಂದಿ ಹಾಗೂ ಉಸ್ತುವಾರಿ ನೋಡಿಕೊಳ್ಳುವ ಸಿಬ್ಬಂದಿಗಳಿಗೆ ತಲಾ ಎರಡು ಲಕ್ಷ ರೂ. ಮೊತ್ತದ ವಿಮೆ ಮಾಡಿಸಲಾಗಿದೆ. ಆನೆಗಳಿಂದ ಆಸ್ತಿ–ಪಾಸ್ತಿಗೆ ಹಾನಿ ಉಂಟಾದರೆ ಅದಕ್ಕೆ ಪರಿಹಾರ ನೀಡುವುದಕ್ಕಾಗಿ 50 ಲಕ್ಷ ರೂ. ಮೊತ್ತದ ವಿಮೆ ಮಾಡಿಸಲಾಗಿದೆ. ಅ.25ರಂದು ಜರುಗುವ ಜಂಬೂಸವಾರಿಯಲ್ಲಿ ಪಾಲ್ಗೊಂಡು ಮರಳಿ ಕ್ಯಾಂಪ್ ಸೇರುವವರೆಗೂ ವಿಮೆ ಚಾಲ್ತಿಯಲ್ಲಿರುತ್ತದೆ.

10 ಗಂಡಾನೆಗಳಿಂದ 50 ಲಕ್ಷ ರೂ., 4 ಹೆಣ್ಣಾನೆಗಳಿಂದ 18 ಲಕ್ಷ ರೂ, ಆಸ್ತಿ ಹಾನಿಗಾಗಿ 50 ಲಕ್ಷ ರೂ., ಮಾವುತ, ಕಾವಾಡಿ, ವಿಶೇಷ ಮಾವುತರು, ಆಹಾರ ತಯಾರಿಸುವ ಸಿಬ್ಬಂದಿ, ಮೇಲುಸ್ತುವಾರಿ ಸಿಬ್ಬಂದಿ ಸೇರಿದಂತೆ 42 ಮಂದಿಗೆ ತಲಾ 2 ಲಕ್ಷ ರೂ.ನಂತೆ 84 ಲಕ್ಷ ರೂ ಸೇರಿದಂತೆ ಈ ಬಾರಿ ಅಂದಾಜು 2.02 ಕೋಟಿ ಮೊತ್ತದ ವಿಮೆ ಮಾಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಅರಮನೆ ಆವರಣದಲ್ಲೇ ದಸರಾ ಗಜಪಡೆ ತಾಲೀಮು

ಮೈಸೂರು,ಸೆ.7(ಎಂಟಿವೈ)–ದಸರಾಗೆ ಆಗಮಿಸಿರುವ ಗಜಪಡೆಗೆ ಗುರುವಾರ ಮೈಸೂರು ಅರಮನೆ ಆವರಣದಲ್ಲಿಯೇ ತಾಲೀಮು ನಡೆಸಲಾಯಿತು.

ಸೆ.1ರಂದು ವಿವಿಧ ಕ್ಯಾಂಪ್‌ಗಳಿಂದ ಮೈಸೂರಿಗೆ ಆಗಮಿಸಿ ಅರಣ್ಯ ಭವನದಲ್ಲಿ ಬೀಡುಬಿಟ್ಟಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ, ಸೆ.5ರಂದು ಅರಮನೆ ಆವರಣ ಪ್ರವೇಶಿಸಿದ್ದವು. ಸೆ.6ರಂದು ಧನ್ವಂತರಿ ರಸ್ತೆಯಲ್ಲಿರುವ ವೇ–ಬ್ರಿಡ್ಜ್‌ಗೆ ಕರೆತಂದು ತೂಕ ಮಾಡಿಸಲಾಗಿತ್ತು. ನಗರ ವಾತಾವರಣಕ್ಕೆ ಹೊಂದಿಕೊಳ್ಳಲೆಂಬ ಕಾರಣದಿಂದ ಗುರುವಾರ ಗಜಪಡೆಯನ್ನು ಅರಮನೆಯಿಂದ ಹೊರಗೆ ಕರೆತರದೆ ಅರಮನೆ ಆವರಣದಲ್ಲೇ ಬೆಳಗ್ಗೆ ಹಾಗೂ ಸಂಜೆ ಎರಡು ಬಾರಿ ತಾಲೀಮು ನಡೆಸಲಾಯಿತು.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಿಂದ ತ್ರಿನೇಶ್ವರಸ್ವಾಮಿ ದೇವಾಲಯ, ಗಾಯತ್ರಿ ದೇವಿ, ವರಹಸ್ವಾಮಿ ದೇವಾಲಯ, ಕರಿಕಲ್ಲು ತೊಟ್ಟಿ, ಬ್ರಹ್ಮಪುರಿ ಗೇಟ್, ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಗೇಟ್‌ಗೆ ಹೊಂದಿಕೊಂಡಂತೆ ಅರಮನೆ ಸುತ್ತಲೂ ಇರುವ ರಸ್ತೆಯಲ್ಲಿ ನಾಲ್ಕು ಸುತ್ತು ತಾಲೀಮು ನಡೆಸಲಾಯಿತು. ಆನೆಗಳ ವರ್ತನೆಯ ಗಮನಿಸಿ ನಾಳೆಯಿಂದ ಜಂಬೂಸವಾರಿ ಮಾರ್ಗದಲ್ಲಿ ತಾಲೀಮು ನಡೆಸಲು ಉದ್ದೇಶಿಸಲಾಗಿದೆ. ನಾಳೆ ಆಯುರ್ವೇದ ಸರ್ಕಲ್ ಅಥವಾ ಆರ್‌ಎಂಸಿ ಸರ್ಕಲ್‌ವರೆಗೆ ತಾಲೀಮಿಗೆ ಕರೆತರಲಾಗುತ್ತದೆ. ಮುಂದಿನ 3–4 ದಿನದ ಬಳಿಕ ತಾಲೀಮನ್ನು ಹೈವೆ ವೃತ್ತ ಹಾಗೂ ಪಂಜಿನ ಕವಾಯತು ಮೈದಾನದವರೆಗೂ ವಿಸ್ತರಿಸಲಾಗುತ್ತದೆ. ತಾಲೀಮಿಗೆ ಬಿಗಿ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಮಿತ್ರ

ಇಹಲೋಕದ ಸಂಬಂಧಗಳಿಗೆ ನ್ಯಾಯ ಸಲ್ಲಿಸುವುದೇ ಧರ್ಮ



ಮೈಸೂರು, ಸೆ.7– ಇಹಲೋಕದ ಸಂಬಂಧಗಳಿಗೆ ನ್ಯಾಯ ಸಲ್ಲಿಸುವುದೇ ಧರ್ಮ ಎಂದು ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ. ಅನಂತರಾಮು, ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ 20 ದಿನದ ಪ್ರವಚನ ನೀಡುತ್ತಾ ತಿಳಿಸಿದರು.

ನಾಲ್ಕು ಪುರುಷಾರ್ಥಗಳಲ್ಲಿ ಮೊದಲ ಮೂರರ ಆಚರಣೆಯ ಗುರಿಯು 4ನೇ ಪುರುಷಾರ್ಥವಾದ ಮೋಕ್ಷವನ್ನು ಪಡೆಯುವುದೇ ಆಗಿದೆ. ಎಲ್ಲಾ ಸಂಬಂಧಗಳ ನಿಗದಿತ ಕರ್ತವ್ಯ ಪಾಲಿಸುವುದೇ ಧರ್ಮ. ಅಂತಹ ಧರ್ಮದ ಪಾಲನೆಗೆ ಸಂಪತ್ತು ಅತ್ಯಗತ್ಯ. ಆದ್ದರಿಂದ ಹಣದ ಗಳಿಕೆ ಅನಿವಾರ್ಯ. ಅದುವೆ ಅರ್ಥ. ಜೀವನದ ಪ್ರತಿ ಹಂತದಲ್ಲಿಯೂ ವಿವಿಧ ಆಸೆಗಳಿಗೆ ತೆರೆದುಕೊಳ್ಳುವ ಮನುಜ ಅನೇಕ ಬಯಕೆಗಳಿಗೆ ಸಿಲುಕುತ್ತಾನೆ. ಅದನ್ನು ಆತ ಪೂರೈಸಿಕೊಳ್ಳಲೇಬೇಕು. ಅದರ ಅನುಭವದ ನಂತರ ಆತ ಮೋಕ್ಷದ ಮಾರ್ಗ ಬಯಸುತ್ತಾನೆ. ಶಿವತತ್ತ್ವ ಚಿಂತಾಮಣಿಯ ದಕ್ಷಶಾಪ ಪ್ರಸಂಗದಲ್ಲಿ ಭಸ್ಮವಾಗಿದ್ದ ಸತಿದೇವಿ ಮುಂದೆ ಗಿರಿರಾಜ ದಂಪತಿಯ ಪುತ್ರಿ ಗಿರಿಜೆಯಾಗಿ ಜನ್ಮತಾಳುತ್ತಾಳೆ. ನಾರದರು ಗಿರಿಜೆಯ ಜನನದ ನಂತರ ಗಿರಿ ರಾಜನಿಗೆ ಪುತ್ರಿಯ ಜನ್ಮರಹಸ್ಯ ತಿಳಿಸಿ, ಯೋಗೀಶ್ವರನಾದ ಪರಶಿವನು ಗಿರಿಜೆಯನ್ನು ವರಿಸಲಿದ್ದಾನೆ. ಸಾಗರದಲ್ಲಿ ರತ್ನಗಳು ದೊರೆಯುವಂತೆ, ಗಿರಿಜೆಯು ನಿಮ್ಮ ಉದರದಲ್ಲಿ ಜನಿಸಿದ್ದಾಳೆ ಎಂದು ನಾರದರು ವರ್ಣಿಸುತ್ತಾರೆ ಎಂದು ತಿಳಿಸಿದರು.

ವಿದ್ವಾನ್ ಕೃ.ರಾಮಚಂದ್ರ ಕಾವ್ಯ ವಾಚನ ಮಾಡಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಕೇಂದ್ರದ ಸ್ವದೇಶ್ ದರ್ಶನ್ 2.0 ಯೋಜನೆಯಡಿ
ಮೈಸೂರು ಪ್ರವಾಸಿ ತಾಣಗಳ ಅಭಿವೃದ್ಧಿ ಸಂಬಂಧ ಸಭೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ಮೈಸೂರು ಜಿಲ್ಲಾ ವ್ಯಾಪ್ತಿ ಪ್ರವಾಸಿ ತಾಣಗಳ ಅಭಿವೃದ್ಧಿ ಸಂಬಂಧ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಸೆ.7(ಆರ್‌ಕೆ)–ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಕೇಂದ್ರ ಪುರಸ್ಕೃತ ಸ್ವದೇಶ್ ದರ್ಶನ್ 2.0 ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಗುರುವಾರ ಜಲದರ್ಶಿನಿ ಅತಿಥಿ ಗೃಹದಲ್ಲಿ ಡೆಸ್ಟಿನೇಷನ್ ಮ್ಯಾನೇಜ್‌ಮೆಂಟ್ ಕಮಿಟಿ ಸಭೆ ನಡೆಸಿದರು.

ಕೇಂದ್ರ ಸರ್ಕಾರವು ಸ್ವದೇಶ್ ದರ್ಶನ್ 2.0 ಯೋಜನೆಯಡಿ 80 ಕೋಟಿ ರೂ. ಅನುದಾನ ಮೀಸಲಿರಿಸಿದ್ದು, ಅದರಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಮತ್ತು ಹಂಪಿ ಪ್ರವಾಸಿ ತಾಣ ಅಭಿವೃದ್ಧಿಪಡಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಇಂದಿನ ಡೆಸ್ಟಿನೇಷನ್ ಮ್ಯಾನೇಜ್‌ಮೆಂಟ್ ಕಮಿಟಿ ಸಭೆಯು ಮಹತ್ವ ಪಡೆದುಕೊಂಡಿದೆ.

ಐತಿಹಾಸಿಕ ಪ್ರವಾಸಿ ಕೇಂದ್ರಗಳಾಗಿರುವ ಕರ್ನಾಟಕದ ಹಂಪಿ ಮತ್ತು ಮೈಸೂರನ್ನು ಈ ಯೋಜನೆಯಡಿ ಅಭಿವೃದ್ಧಿಗೊಳಿಸಲು ಆಯ್ಕೆ ಮಾಡಲಾಗಿದ್ದು, ಮೈಸೂರು ಮೃಗಾಲಯ, ಟಾಂಗಾ ರೈಡ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ದಸರಾ ವಸ್ತುಪ್ರದರ್ಶನ ಆವರಣ, ಕಾರಂಜಿ ಕೆರೆ ಉದ್ಯಾನವನ, ರಾಷ್ಟ್ರೀಯ ಪ್ರಾಕೃತಿಕ ಸಂಗ್ರಹಾಲಯಗಳಲ್ಲಿ ಪ್ರವಾಸಿಗರಿಗೆ ಮೂಲಸೌಕರ್ಯ ಕಲ್ಪಿಸಲು ಸಂಸದ ಪ್ರತಾಪ್ ಸಿಂಹ ಆಸಕ್ತಿ ತೋರಿರುವುದರಿಂದ ನಾಳೆ(ಸೆ.8) ಅಧಿಕಾರಿಗಳು ಸ್ಥಳಗಳಿಗೆ ಭೇಟಿ ನೀಡಿ ಯಾವ ಯಾವ ಅಭಿವೃದ್ಧಿ ಕೆಲಸಗಳಾಗಬೇಕು ಎಂಬುದನ್ನು ಖುದ್ದು ಪರಿಶೀಲನೆ ನಡೆಸಿ ಮೊದಲ ಹಂತದ ಯೋಜನೆ ಕೈಗೊಳ್ಳಲು ಸಮಗ್ರ ವರದಿ ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಮೃಗಾಲಯದಲ್ಲಿ ಪಾರ್ಕಿಂಗ್, ಶೌಚಾಲಯ, ಮಕ್ಕಳಿಗೆ ಆಟದ ರೈಲು, ಹ್ಯಾಂಗಿಂಗ್ ಬ್ರಿಡ್ಜ್, ವಸ್ತುಪ್ರದರ್ಶನ ಆವರಣದಲ್ಲಿ ವರ್ಷ ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮ, ಕ್ರಾಫ್ಟ್ ಬಜಾರ್, ಆಹಾರ, ಮಕ್ಕಳಿಗಾಗಿ ಆಟಿಕೆ ಸೇರಿದಂತೆ ದೆಹಲಿ ಹಾತ್ ಮಾದರಿಯ ಚಟುವಟಿಕೆಗಳಿಗೆ ಆದ್ಯತೆ ನೀಡಿ ಮೈಸೂರಿಗೆ ಕೇವಲ ದಸರಾ ಮಹೋತ್ಸವದಲ್ಲಿ ಮಾತ್ರವಲ್ಲದೇ ವರ್ಷದ 365 ದಿನವೂ ದೇಶ–ವಿದೇಶಗಳ ಪ್ರವಾಸಿಗರನ್ನು ಸೆಳೆಯಲು ಪ್ರಯತ್ನಿಸಬೇಕೆಂದು ಡಾ.ರಾಜೇಂದ್ರ ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು.

ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದ ಅಭಿವೃದ್ಧಿ, ಆರ್ಥಿಕ ಸಬಲೀಕರಣ, ಉದ್ಯೋಗ ಸೃಷ್ಟಿ, ಕೈಗಾರಿಕೆ, ಸ್ಥಳೀಯ ಸಂಘ–ಸಂಸ್ಥೆಗಳು, ಹೋಟೆಲ್ ಉದ್ಯಮಗಳಿಗೆ ಪ್ರೋತ್ಸಾಹ ನೀಡುವ ಹಿನ್ನೆಲೆಯಲ್ಲಿ ಸ್ವದೇಶ್ ದರ್ಶನ್ ಯೋಜನೆಯ ಅನುದಾನವನ್ನು ಸದ್ಬಳಕೆ ಮಾಡಲು ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಡೆಸ್ಟಿನೇಷನ್ ಮ್ಯಾನೇಜ್‌ಮೆಂಟ್ ಕಮಿಟಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಇದೇ ಸಂದರ್ಭ ನಿರ್ದೇಶನ ನೀಡಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಕಾರ್ಯ ನಿರ್ವಹಣಾಧಿಕಾರಿ ರಾಜೇಶ್, ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತ ಸೋಮಶೇಖರ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ವಾರ್ತಾ ಮತ್ತು ಪ್ರಸಾರ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ರಾಘವೇಂದ್ರ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ದೇಶದ ಪ್ರಮುಖ 75 ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು 2015ರಲ್ಲಿ ಸ್ವದೇಶ್ ದರ್ಶನ್ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಆದರೆ 2022ರ ಜುಲೈ ಮಾಹೆಯಲ್ಲಿ ಸ್ವದೇಶ್ ದರ್ಶನ್ 2.0 ಎಂದು ಮರು ನಾಮಕರಣ ಮಾಡಿ ಕೆಲ ಮಾರ್ಪಾಡುಗಳೊಂದಿಗೆ ಅನುಷ್ಠಾನಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕೇಂದ್ರ ಕಾರಾಗೃಹದಲ್ಲಿ ವಿಶ್ವ ಭ್ರಾತೃತ್ವ ಸ್ನೇಹ ಸೂಚಕ ರಕ್ಷಾಬಂಧನ ಆಚರಣೆ



ಮೈಸೂರು, ಸೆ.7– ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಕೇಂದ್ರ ಕಾರಾಗೃಹ, ಸಾಧನಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಕೇಂದ್ರ ಕಾರಾಗೃಹದಲ್ಲಿ ವಿಶ್ವ ಭ್ರಾತೃತ್ವ ಸ್ನೇಹ ಸೂಚಕ ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಮಾತನಾಡಿ, ರಕ್ಷಾಬಂಧನವು ಬಂಧನವಲ್ಲ. ಅದು ವಿಶ್ವ ಭ್ರಾತೃತ್ವದ ಸ್ನೇಹದ ಬಂಧನದಲ್ಲಿ ಬಂಧಿಸುವಂತದ್ದಾಗಿದೆ. ಇದು ಕೇವಲ ದಾರವಲ್ಲ. ಪವಿತ್ರತೆಯ ಸೂಚಕ. ದೃಢ ಪ್ರತಿಜ್ಞೆಯ ಪ್ರತೀಕ. ಇದು ನಮ್ಮನ್ನು ನಕಾರಾತ್ಮಕತೆಯಿಂದ ಸಕಾರಾತ್ಮಕತೆ ಕಡೆ ಕೊಂಡೊಯ್ಯುವ ಸಾಧನವಾಗಿದೆ ಎಂದರು. ಇಂದಿನ ದಿನಗಳಲ್ಲಿ ಎಲ್ಲೆಲ್ಲೂ ಅಸುರಕ್ಷತೆ ತಾಂಡವವಾಡುತ್ತಿದೆ. ಎಲ್ಲರ ಮನಸ್ಸು ದುರ್ಬಲವಾಗುತ್ತಿದೆ. ದುರ್ಬಲ ಮನಸ್ಸನ್ನು ಸಬಲ ಮಾಡುವ ನಿಟ್ಟಿನಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯವು ಇಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಿಲ್ಲಾ ಕಾರಾಗೃಹದ ಅಧೀಕ್ಷಕ ಶಿವಕುಮಾರ್ ಮಾತನಾಡಿ, ರಕ್ಷಾಬಂಧನದಿಂದ ಸಂಬಂಧಗಳನ್ನು ಗಟ್ಟಿಗೊಳಿಸಬೇಕು. ಸಹೋದರತೆಯ ಸಂಬಂಧಗಳನ್ನು ಗುರುತಿಸುವಂತಹ ಕೆಲಸವಾಗಬೇಕು ಎಂದರು. ಸಾಧನ ಸಂಸ್ಥೆಯ ಟಿಜೆ ಸುರೇಶ್, ಮಕ್ಕಳ ಸಂರಕ್ಷಣಾಧಿಕಾರಿ ಪ್ರಸನ್ನ, ಬಿ.ಕೆ. ಆರಾಧ್ಯ, ಪ್ರಮೀಳ, ಆಶಾ, ಜಯಲಕ್ಷ್ಮಿ, ತಳ್ಳಿಮನಿ, ರಾಜೀವ್, ಸಿದ್ದೇಗೌಡ, ರಮೇಶ್, ಅನಿಲ್‌ಕುಮಾರ್, ಮಾರುತಿ, ರೋಜಾ, ಅರ್ಪಿತ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ರೋಟರಿ ಮೈಸೂರು ಸೌತ್ ಈಸ್ಟ್ ಕ್ಲಬ್‌ನಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಶಿಕ್ಷಕರಾದ ಭೀಮಾಶಂಕರ ಬಿದನೂರು, ಟಿ.ನಾಗಲಕ್ಷ್ಮಿ, ಜಯಂತಿ, ಪಿ.ಎಲ್. ಶಿವಕುಮಾರ್, ಪುನೀತ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಇನ್ನರ್‌ವೀಲ್ ಅಧ್ಯಕ್ಷೆ ಮೇಘನಾ ಗುರುರಾಜ್, ಕಾರ್ಯದರ್ಶಿ ಶ್ರೀಲಕ್ಷ್ಮಿ, ರೋಟರಿ ಮೈಸೂರು ಆಗ್ನೇಯ ಅಧ್ಯಕ್ಷ ಕೆ.ಎನ್.ಮುರಳೀಧರ, ಕಾರ್ಯದರ್ಶಿ ಎನ್.ಟಿ.ಗಿರೀಶ್, ಅಧ್ಯಕ್ಷ ವಿನೋದ್‌ಕುಮಾರ್, ವೃತ್ತಿ ಸೇವಾ ನಿರ್ದೇಶಕ ವಾಸುದೇವನ್ ಉಪಸ್ಥಿತರಿದ್ದರು.

ಶ್ರೀರಾಮನೊಂದಿಗೆ ಸೀತಾಮಾತೆ ಕಾಡಿಗೆ ಹೊರಟ ಸನ್ನಿವೇಶ
ಗಂಡ–ಹೆಂಡತಿ ಅನ್ಯೋನ್ಯತೆ ಸಾಕ್ಷಿ



ಮೈಸೂರು, ಸೆ.7(ಎಸ್‌ಪಿಎನ್)–ಶ್ರೀರಾಮಚಂದ್ರ ಕಾಡಿಗೆ ಹೊರಡಲು ಸಿದ್ಧನಾಗಿದ್ದ ಸಂದರ್ಭದಲ್ಲಿ ತನ್ನ ಗಂಡನೊಂದಿಗೆ ಸೀತಾದೇವಿಯೂ ಹೊರಡಲು ಸಿದ್ಧರಾಗುತ್ತಾಳೆ. ಈ ಸಂಗತಿ ಇಂದಿಗೂ ಗಂಡ–ಹೆಂಡತಿ ಅನ್ಯೋನ್ಯ ಸಂಬಂಧಕ್ಕೆ ಉತ್ತಮ ಉದಾಹರಣೆಯಾಗಿದೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ತಿಳಿಸಿದರು.

ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಮಾಲೆಯಲ್ಲಿ ಶ್ರೀಗಳು ತಿಳಿಸಿದರು.

ಶ್ರೀರಾಮಚಂದ್ರ, ತಮ್ಮ ಲಕ್ಷ್ಮಣನೊಂದಿಗೆ ಕಾಡಿಗೆ ಹೊರಡಲು ಸಿದ್ಧನಾಗಿರುವಾಗ, ಸೀತಾದೇವಿ ತನ್ನನ್ನು ಕಾಡಿಗೆ ಕರೆದುಕೊಂಡು ಹೋಗುವಂತೆ ಪರಿಪರಿಯಾಗಿ ಶ್ರೀರಾಮಚಂದ್ರನನ್ನು ಕೋರುತ್ತಾಳೆ. ಆದರೆ, ಶ್ರೀರಾಮ, ಸೀತಾದೇವಿಗೆ ಕಾಡಿನ ಪರಿಸ್ಥಿತಿಯನ್ನು ವಿವರಿಸಿದರೂ ಸೀತಾದೇವಿ ಅರಮನೆಯಲ್ಲಿರಲು ಒಪ್ಪದ ಪ್ರಸಂಗವನ್ನು ಶ್ರೀಗಳು ಮನೋಜ್ಞವಾಗಿ ವಿವರಿಸಿದರು.

ಸೀತಾದೇವಿ ತನ್ನ ಮನಸ್ಸಿನೊಳಗೆ ಶ್ರೀರಾಮಚಂದ್ರ ತನ್ನನ್ನು ವನವಾಸಕ್ಕೆ ಕರೆದುಕೊಂಡು ಹೋಗಲು ಹಿಂದು–ಮುಂದು ನೋಡುತ್ತಿರುವುದಾದರು ಏಕೆ? ಗಂಡನನ್ನು ಬಿಟ್ಟು ಅರಮನೆಯಲ್ಲಿರುವುದು ಎಷ್ಟು ಕಷ್ಟ ಎಂಬುದು ತನ್ನ ಗಂಡ ಶ್ರೀರಾಮಚಂದ್ರನಿಗೆ ಏಕೆ ತಿಳಿಯುತ್ತಿಲ್ಲ. ಆದರೆ ಪಟ್ಟು ಬಿಡದೇ ಗಂಡನೊಂದಿಗೆ ಕಾಡಿಗೆ ಹೋಗಲು ಶ್ರೀರಾಮಚಂದ್ರನನ್ನು, ಸೀತಾದೇವಿ ಒಪ್ಪಿಸಿದ ಪ್ರಸಂಗವನ್ನು ಎಳೆಎಳೆಯಾಗಿ ಶ್ರೀಗಳು ಬಿಡಿಸಿಟ್ಟರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಹುಣಸೂರಲ್ಲಿ ಮಹಿಳಾ ವಕೀಲೆಗೆ ಡಿವೈಎಸ್‌ಪಿ, ಇನ್ಸ್‌ಪೆಕ್ಟರ್ ನಿಂದನೆ ಆರೋಪ
ಮೈಸೂರಲ್ಲಿ ವಕೀಲರು ದಿಢೀರ್ ಪ್ರತಿಭಟನೆ

ಮೈಸೂರು,ಸೆ.7(ಜಿಎ)–ಮಹಿಳಾ ವಕೀಲೆಯನ್ನು ನಿಂದಿಸಿರುವ ಹುಣಸೂರು ಡಿವೈಎಸ್‌ಪಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಅಮಾನತುಗೊಳಿಸಿ, ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಮೈಸೂರು ವಕೀಲರು ಗುರುವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಹುಣಸೂರಿನಲ್ಲಿ ಪ್ರಕರಣವೊಂದರ ಸಂಬಂಧ ವಕೀಲೆ ಕೆ.ಪಿ.ಆಶಾ ಅವರನ್ನು ನಿಂದಿಸಿರುವ ಡಿವೈಎಸ್‌ಪಿ ಮಹೇಶ್ ಮತ್ತು ಇನ್ಸ್‌ಪೆಕ್ಟರ್ ರವಿ ವಿರುದ್ಧ ಕ್ರಮ ಜರುಗಿಸಬೇಕೆಂದು ಗುರುವಾರ ಬೆಳಗ್ಗೆ ಮೈಸೂರು ವಕೀಲರು ದಿಢೀರ್ ನ್ಯಾಯಾಲಯದ ಕಲಾಪಗಳಿಂದ ಹೊರಗುಳಿದಿದ್ದು, ಮೈಸೂರು ಜಿಲ್ಲಾ ನ್ಯಾಯಾಲಯದ ಮುಂಭಾಗದಲ್ಲಿರುವ ಗಾಂಧೀಜಿ ಪುತ್ಥಳಿ ಮುಂದೆ ಮಾನವ ಸರಪಳಿ ನಿರ್ಮಿಸಿ, ಪೊಲೀಸ್ ಇಲಾಖೆ ವಿರುದ್ಧ ವಿವಿಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ನ್ಯಾಯಾಲಯದ ಮುಂಭಾಗದ ಕೃಷ್ಣರಾಜ ಬುಲೇವಾರ್ಡ್ ರಸ್ತೆ ಸೇರಿದಂತೆ ಅಕ್ಕ–ಪಕ್ಕದ ರಸ್ತೆಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಾಹನಗಳ ಸಂಚಾರ ನಿರ್ಬಂಧಿಸಿ, ಡಿಸಿಪಿ ಮುತ್ತುರಾಜ್ ನೇತೃತ್ವದಲ್ಲಿ ನೂರಾರು ಪೊಲೀಸರ ನಿಯೋಜಿಸಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಬಂದು ಇಬ್ಬರ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡುವವರೆಗೂ ನಾವು ಪ್ರತಿಭಟನೆಯನ್ನು ಕೈ ಬಿಡುವುದಿಲ್ಲವೆಂದು ವಕೀಲರು ಪಟ್ಟು ಹಿಡಿದರು. ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದರು. ಅವರಿಗೆ ವಕೀಲರ ಸಂಘದ ಅಧ್ಯಕ್ಷ ಮಹಾದೇವಸ್ವಾಮಿ ಮನವಿ ಸಲ್ಲಿಸಿ, ಈ ಪ್ರಕರಣದಲ್ಲಿ ಈವರೆಗೂ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸೀಮಾ ಲಟ್ಕರ್ ಅವರು, ಈ ಸಂಬಂಧ ಸರ್ಕಾರವೇ ಕ್ರಮ ತೆಗೆದುಕೊಳ್ಳಬೇಕಿದೆ. ಅದಕ್ಕಾಗಿ ತನಿಖಾಧಿಕಾರಿಯನ್ನು ನಿಯೋಜನೆ ಮಾಡಲಾಗಿದ್ದು, ಅವರು ಎರಡು ಅಥವಾ ಹತ್ತು ದಿನದೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸುತ್ತಾರೆ. ಅದರ ಆಧಾರದ ಮೇಲೆ ಅವರ ಮೇಲೆ ಕ್ರಮ ವಹಿಸಲಾಗುತ್ತದೆ ಎಂದರು. ವರಿಷ್ಠಾಧಿಕಾರಿಗಳ ಮಾಹಿತಿ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಟ್ಟು, ಸಂಘದ ಪದಾಧಿಕಾರಿಗಳು ಮುಂದೆ ಏನು ಕ್ರಮ ಕೈಗೊಳ್ಳಬೇಕೆಂದು ಚರ್ಚಿಸಿ, ನಿರ್ಧಾರ ಕೈಗೊಳ್ಳುತ್ತೇವೆ ಎಂದು ಅಧ್ಯಕ್ಷರು ತಿಳಿಸಿದರು. ಪ್ರತಿಭಟನೆಯಲ್ಲಿ ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಉಮೇಶ್ ಸೇರಿದಂತೆ ನೂರಾರು ವಕೀಲರು ಪಾಲ್ಗೊಂಡಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾಹಿತಿ ಹಿನ್ನೆಲೆ; ಪ್ರತಿಭಟನೆ ಅಂತ್ಯ



ಮೈಸೂರು ವಕೀಲರು ಜಿಲ್ಲಾ ನ್ಯಾಯಾಲಯದ ಮುಂಭಾಗದ ಗಾಂಧೀಜಿ ಪುತ್ಥಳಿ ಮುಂದೆ ಮಾನವ ಸರಪಳಿ ನಿರ್ಮಿಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಸ್ಮರಣಾರ್ಥ 18ನೇ ಧ್ವನಿ ಸಂಗೀತ



ಮೈಸೂರು,ಸೆ.7–ಪಂಡಿತ್ ಹಿಂದೂಸ್ತಾನಿ ಸಂಗೀತ ದಿಗ್ಗಜ ಮಲ್ಲಿಕಾರ್ಜುನ ಮನ್ಸೂರ್ ಅವರ ಸ್ಮರಣಾರ್ಥ ಬೆಂಗಳೂರು ಕಿಡ್ನಿ ಫೌಂಡೇಷನ್ ವತಿಯಿಂದ 18ನೇ ಧ್ವನಿ ಸಂಗೀತ ಸಂಭ್ರಮವನ್ನು 2 ದಿನಗಳ ಕಾಲ ಬೆಂಗಳೂರಿನ ಜೆಎಸ್‌ಎಸ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಂಗೀತ ವಿದುಷಿ ಪದ್ಮ ತಲ್ವಾಲ್ಕರ್ ಅವರಿಗೆ ಹಿಂದೂಸ್ತಾನಿ ಸಂಗೀತ ದಿಗ್ಗಜ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಸ್ಮಾರಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಿರಿಯ ನಿವೃತ್ತ ಪೊಲೀಸ್ ಅಧಿಕಾರಿ ಗೋಪಾಲ್ ಹೊಸೂರ್, ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ಬಿಕೆಎಫ್ ಫೌಂಡೇಷನ್‌ನ ಅಧ್ಯಕ್ಷ ಸುಧೀರ್ ಶೆಣೈ, ಡಾ.ಪಿ. ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು. ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಗೋಪಾಲ್ ಹೊಸೂರ್, ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆ ವೇಳೆ ಗಾಯಗೊಂಡು 6 ತಿಂಗಳ ಕಾಲ ಚಿಕಿತ್ಸೆ ಪಡೆಯುತ್ತಿದ್ದಾಗ ದಿನ ಮಲ್ಲಿಕಾರ್ಜುನ್ ಮನ್ಸೂರ್ ಅವರ ಹಿಂದೂಸ್ತಾನಿ ಸಂಗೀತ ಕೇಳುತ್ತಿದ್ದೆ. ಇದರಿಂದ ಬೇಗ ಹುಷಾರಾದೆ ಅಂತಹ ಶಕ್ತಿ ಹಿಂದೂಸ್ತಾನಿ ಸಂಗೀತಕ್ಕಿದೆ. ವಿಶೇಷವಾಗಿ ಕಿಡ್ನಿ ತೊಂದರೆ ರೋಗಿಗಳ ಆರೈಕೆಗೆ ನಿಧಿ ಸಂಗ್ರಹಕ್ಕಾಗಿ ಇಂತಹ ಸಂಗೀತ ಕಾರ್ಯಕ್ರಮ ಆಯೋ ಜಿಸುತ್ತಿರುವುದು ಅತ್ಯಂತ ಖುಷಿ ತಂದಿದೆ ಎಂದರು.

ಪ್ರವೀಣ್ ಗೋಡ್ಖಿಂಡಿ ಅವರು ಮಾತನಾಡಿ, ಬೆಂಗಳೂರು ಕಿಡ್ನಿ ಫೌಂಡೇಷನ್ ಮಲ್ಲಿಕಾರ್ಜುನ ಮನ್ಸೂರ್ ಅವರ ಸ್ಮರಣಾರ್ಥ ಪ್ರತಿವರ್ಷ ಇಂತಹ ಸಂಗೀತ ಕಾರ್ಯಕ್ರಮ ಆಯೋಜಿಸುತ್ತಿರುವುದು ಸಮಾಜದ ಅನೇಕ ಬಡರೋಗಿಗಳಿಗೆ ಹೆಚ್ಚು ಅನುಕೂಲಕರವಾಗಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪಂಡಿತ ಸಂಜೀವ್ ಶಂಕರ್, ಪಂಡಿತ್ ಆಶ್ವಿನಿ ಶಂಕರ್ ಅವರ ಶಹನಾಯಿ ಸಂಗೀತ ಕಛೇರಿ ಮನಸೂರೆಗೊಂಡಿತು. ಪಂಡಿತ್ ಜಯತೀರ್ಥ ಮೇವುಂಡಿ ಅವರ ಗಾಯನ, ವಿದುಷಿ ದಿವ್ಯ ಶೆಣೈ ಅವರ ಗಾಯನ, ಸರ್ಫ್‌ರಾಜ್ ಖಾನ್ ಅವರಿಂದ ಸಾರಂಗಿ ವಾದನದೊಂದಿಗೆ ಸಂಪನ್ನಗೊಂಡಿತು.

ಕೃಷಿ ಸಿಂಚಾಯಿ ಯೋಜನೆಗೆ ಅರ್ಜಿ

ಮೈಸೂರು, ಸೆ.7– 2023–24ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದು ಸಂಬಂಧಿಸಿದ ತಾಲೂಕಿನ ತೋಟಗಾರಿಕೆ ಕಚೇರಿಯನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ.

ಹನಿ ನೀರಾವರಿ ಮತ್ತು ತುಂತುರು ನೀರಾವರಿ ಅಳವಡಿಸಿದ ಪರಿಶಿಷ್ಟ ಜಾತಿ ಹಾಗೂ ವರ್ಗದ ರೈತರಿಗೆ (RD ಸಂಖ್ಯೆ ಇರುವ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯ) ಗರಿಷ್ಠ 2 ಎಕರೆ ಪ್ರದೇಶದವರೆಗೆ ಶೇ.90ರಷ್ಟು ಸಹಾಯ ಧನ ಹಾಗೂ ಇತರೆ ರೈತರಿಗೆ ಗರಿಷ್ಠ 2 ಎಕರೆ ಪ್ರದೇಶದವರೆಗೆ ಶೇ.75ರಷ್ಟು ಸಹಾಯಧನ ಹಾಗೂ ಎಲ್ಲಾ ವರ್ಗದ ರೈತರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ 2 ಎಕರೆ ಮೇಲ್ಪಟ್ಟು ಗರಿಷ್ಠ 5 ಎಕರೆ ಪ್ರದೇಶದವರೆಗೆ ಶೇ.45ರಷ್ಟು ಸಹಾಯಧನ ನೀಡಲಾಗುವುದು. ಮಾಹಿತಿಗಾಗಿ ಹಾಗೂ ಅರ್ಜಿ ಮತ್ತು ದಾಖಲಾತಿಗಳ ವಿವರಗಳಿಗಾಗಿ ಮೈಸೂರು ಜಿಲ್ಲಾ ಪಂಚಾಯತ್, ಮೈಸೂರು ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 0821–2430450, ಹೆಚ್.ಡಿ.ಕೋಟೆ: ದೂ.ಸಂ: 08228–255261, ಹುಣಸೂರು ತಾಲೂಕು: ದೂ.ಸಂ: 08222–252447, ಕೆ.ಆರ್.ನಗರ ತಾಲೂಕು: ದೂ.ಸಂ: 08223–262791, ನಂಜನಗೂಡು ತಾಲೂಕು: ದೂ.ಸಂ: 08221–226201, ಪಿರಿಯಾಪಟ್ಟಣ ತಾಲೂಕು: ದೂ.ಸಂ: 08223–273535, ಟಿ.ನರಸೀಪುರ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.ಸಂ: 08227–260086 ಅನ್ನು ಸಂಪರ್ಕಿಸಬಹುದು.

ಪರಿಸರಕ್ಕೆ ಹಾನಿಯಾಗದಂತೆ ಗೌರಿ–ಗಣೇಶ ಹಬ್ಬ ಆಚರಿಸಿ

ತಹಸೀಲ್ದಾರ್ ಬಿ.ಎನ್.ಗಿರೀಶ್ ಮನವಿ



ಮೈಸೂರು, ಸೆ.7(ಎಸ್‌ಪಿಎನ್)–ತಾಲೂಕು ವ್ಯಾಪ್ತಿಯಲ್ಲಿ ಈ ಬಾರಿ ಗೌರಿ ಗಣೇಶ ಹಬ್ಬದಂದು ಯಾವುದೇ ಕಾರಣಕ್ಕೂ ಪ್ಲಾಸ್ಟರ್ ಆಫ್ ಪ್ಯಾರಿಸ್(ಪಿಓಪಿ) ಇರುವ ಗೌರಿ– ಗಣೇಶನ ವಿಗ್ರಹವನ್ನು ತಯಾರಿಸದಂತೆ ಹಾಗೂ ಅಂತಹ ವಿಗ್ರಹಗಳನ್ನು ಸಾರ್ವಜನಿಕರು ಖರೀದಿಸದಂತೆ ತಹಸೀಲ್ದಾರ್ ಬಿ.ಎನ್.ಗಿರೀಶ್ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕು ಕಚೇರಿಯಲ್ಲಿ ಗೌರಿ–ಗಣೇಶ ಹಬ್ಬದ ಆಚರಣೆ ಕುರಿತಂತೆ ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈ ಸೂಚನೆ ನೀಡಿದ್ದಾರೆ.

ಮಣ್ಣಿನಿಂದ ಮಾಡಿದ ಗೌರಿ–ಗಣೇಶ ವಿಗ್ರಹಗಳನ್ನು ಮಾತ್ರ ತಯಾರಿಸಿ, ಮಾರಾಟ ಮಾಡಬೇಕು. ಸಾರ್ವಜನಿಕರು ಮಣ್ಣಿನಿಂದ ಮಾಡಿದ ವಿಗ್ರಹಗಳನ್ನು ಮಾತ್ರ ಖರೀದಿಸಿ, ಸಂಪ್ರದಾಯದಂತೆ ಗೌರಿ ಗಣೇಶ ಹಬ್ಬವನ್ನು ಆಚರಿಸಬೇಕು. ಪಿಓಪಿ ವಿಗ್ರಹಗಳನ್ನು ತಯಾರಿಸುವುದು ಕಾನೂನುಬಾಹಿರ. ಹಾಗಾಗಿ ತಾಲೂಕು ವ್ಯಾಪ್ತಿಯಲ್ಲಿ ಪಿಓಪಿ ವಿಗ್ರಹಗಳನ್ನು ತಯಾರಿಸುತ್ತಿರುವುದರ ಬಗ್ಗೆ ಸಾರ್ವಜನಿಕರಿಂದ ದೂರು ಬಂದಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಪಂಚಾಯತ್ ರಾಜ್ ಮತ್ತು ಗ್ರಾಪಂ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ತಹಸೀಲ್ದಾರ್ ಸೂಚಿಸಿದ್ದಾರೆ. ಈ ಬಾರಿಯ ಗೌರಿ–ಗಣೇಶ ಹಬ್ಬವನ್ನು ಪರಿಸರಕ್ಕೆ ಹಾನಿಯಾಗದಂತೆ ಹಾಗೂ ಕೆರೆ ಕಟ್ಟೆಯಲ್ಲಿನ ನೀರು ಕಲುಷಿತಗೊಳಿಸದಂತೆ ಅರ್ಥಪೂರ್ಣವಾಗಿ ಮಣ್ಣಿನಿಂದ ಮಾಡಿದ ವಿಗ್ರಹಗಳನ್ನು ಖರೀದಿಸಿ ಹಬ್ಬವನ್ನು ಆಚರಿಸಬೇಕೆಂದು ಮನವಿ ಮಾಡಿದ್ದಾರೆ.

ಈ ಸಭೆಯಲ್ಲಿ ಪಂಚಾಯತ್ ಇಓ ಗಿರಿಧರ್, ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮಮತ ಹಾಗೂ ಪಿಡಿಓ, ಉಪತಹಸೀಲ್ದಾರ್, ರಾಜಸ್ವ ನಿರೀಕ್ಷಕರು ಸಭೆಯಲ್ಲಿ ಹಾಜರಿದ್ದರು.

ಕೌಟಿಲ್ಯ ವಿದ್ಯಾಲಯದಲ್ಲಿ ನಾಳೆ ಕ್ಯೂಟ್ ಕೃಷ್ಣ, ರ್‍ಯಾವಿಷಿಂಗ್ ರಾಧಾ ಸ್ಪರ್ಧೆ

ಮೈಸೂರು,ಸೆ.7–ಮೈಸೂರಿನ ಕೌಟಿಲ್ಯ ವಿದ್ಯಾಲಯದ ಆವರಣದಲ್ಲಿ ಸೆ.9ರಂದು ಬೆಳಗ್ಗೆ 9.30ಕ್ಕೆ ಪೂರ್ವ ಪ್ರಾಥಮಿಕ ವಿಭಾಗದ (3ರಿಂದ 7 ವರ್ಷ) ವಿದ್ಯಾರ್ಥಿಗಳಿಗಾಗಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿವಿಧ ಸ್ಪರ್ಧೆ ಏರ್ಪಡಿಸಲಾಗಿದೆ. ವೈಯಕ್ತಿಕ ವಿಭಾಗದಲ್ಲಿ ವೇಷಭೂಷಣ ಸ್ಪರ್ಧೆ, ಏಕಪಾತ್ರಾಭಿನಯ, ಕಥೆ ಹೇಳುವುದು, ಸಮೂಹ ನೃತ್ಯ ಮತ್ತು ಸಮೂಹ ಗಾಯನ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಮೊ. 9900038358ಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.9.2023 ಶುಕ್ರವಾರ, ಮಳೆ ನಕ್ಷತ್ರ: ಪುಬ್ಬ 31.08.2023 ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ–ಪರಮೇಶ್ವರ ವಿ.ಭಟ್, 7.15 ಭಾವಗೀತೆಗಳು–ಶಂಕರ್ ಶ್ಯಾನುಭೋಗ್, ಎ.ಎನ್. ಶಾಸ್ತ್ರಿ, ವೈ.ಕೆ.ಮುದ್ದುಕೃಷ್ಣ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಹೈದರಾಬಾದ್ ಸಹೋದರಿಯರು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಸಂಸ್ಥೆಯಲ್ಲಿ ಲಭ್ಯವಿರುವ ಅಧ್ಯಯನ, ವೃತ್ತಿಪರ ಅವಕಾಶಗಳು ಮತ್ತು ನೂತನ ಕೋರ್ಸ್‌ಗಳು ಕುರಿತು ಡಾ.ವಿಶಾಲ್ ಕುಮಾರ್ ಗುಪ್ತಾ ಮತ್ತು ಡಾ.ರವೀಶ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ಕೃಷಿಕ ದಂಪತಿ ಸುಧೀರ್ ಮತ್ತು ಎನ್. ಧಾತ್ರಿ, 8.00 ಕನ್ನಡ ಭಾರತಿ, 9.30 ಗಾಯಿತ್ರಿ ವೆಂಕಟರಾಘವನ್–ಹಾಡುಗಾರಿಕೆ, 10.30 ಸವಿನೆನಪು

- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತುಲದ ಬಗ್ಗೆ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9.30ರಿಂದ.
- **ಮಹಾಜನ ಪ್ರೌಢಶಾಲೆ:** ವಿದ್ಯಾರ್ಥಿ ಸಂಘದ ಉದ್ಘಾಟನೆ–ಪ್ರತಿಭಾ ಪ್ರದರ್ಶನ, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ. ಸರೋಜಮ್ಮ, ಮುಖ್ಯ ಅತಿಥಿಗಳು: ಜಿಪಂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಡಾ.ಕೃಷ್ಣರಾಜು, ಕು.ನಿಸರ್ಗ ಮತ್ತು ಕು.ವಿಸ್ಮಯ, ಸ್ಥಳ: ಸುಬ್ಬುಲಕ್ಷ್ಮಿ ಸಭಾಂಗಣ, ಬೆಳಗ್ಗೆ 10ಕ್ಕೆ
- **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್:** ಎಂ.ಎಲ್.ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.
- **ಬಾಸುದೇವ ಸೋಮಾನಿ ಕಾಲೇಜು:** ನೇತ್ರದಾನದ ಮಹತ್ವ ಹಾಗೂ ಅರಿವು ಕಾರ್ಯಕ್ರಮ, ಉದ್ಘಾಟನೆ: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಕುಬೇರ್ ಪಿ.ಗೌಡ, ಸಂಪನ್ಮೂಲ ವ್ಯಕ್ತಿ: ಕೆ.ಆರ್. ಆಸ್ಪತ್ರೆ ನೇತ್ರ ಸಂಗ್ರಹಣಾಧಿಕಾರಿ ಡಾ.ಚಂದ್ರಕಲಾ, ಮುಖ್ಯ ಅತಿಥಿಗಳು: ಆದಿತ್ಯ ಆಸ್ಪತ್ರೆ ಮುಖ್ಯಸ್ಥ ಡಾ. ಚಂದ್ರಶೇಖರ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಮಹದೇವಸ್ವಾಮಿ, ಉಪಸ್ಥಿತರು: ಸಕ್ಷಮ ಘಟಕ ಕಾರ್ಯದರ್ಶಿ ಅರುಣಾಚಲ ಶರ್ಮ, ಖಜಾಂಚಿ ಜಯರಾಮ್, ಸ್ಥಳ :ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಗಾನಸಭಾ:** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 11.30ಕ್ಕೆ ಶೇಷವಾಹನೋತ್ಸವ, ಅನ್ನಕೂಟೋತ್ಸವ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಗೋಧೂಳಿ ಉತ್ಸವ, ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ.
- **ರಾಜರಾಜೇಶ್ವರಿ ದೇವಸ್ಥಾನ :** ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಭೇಟಿ, ಶ್ರೀಗಳಿಗೆ ಪೂರ್ಣಕುಂಭ ಸ್ವಾಗತ, ವಿಶೇಷ ಪೂಜೆ, ಭಕ್ತಾದಿಗಳಿಗೆ ಶ್ರೀಗಳಿಂದ ಫಲ–ಮಂತ್ರಾಕ್ಷತೆ ವಿತರಣೆ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ, ಸಂಜೆ 5ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ:** ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಅಧ್ಯಕ್ಷತೆ: ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಸಾಹಿತಿ ನಗರ್ಲೆ ಶಿವಕುಮಾರ ಅವರಿಂದ ಕರಿಯಂಜುವುದು ಅಂಕುಶಕ್ಕಯ್ಯಾ ಕುರಿತು ಉಪನ್ಯಾಸ, ಸ್ಥಳ: ಜ್ಯೋತಿರ್ಗಮಯ ಸೇವಾ ಟ್ರಸ್ಟ್, ಸಂಜೆ 5.30ಕ್ಕೆ.
- **ಜೆಎಸ್‌ಎಸ್ ಸಂಗೀತಾ ಸಭಾ ಟ್ರಸ್ಟ್ :** ರಫೀಕ್ ಖಾನ್ ಅವರಿಂದ ಸಿತಾರ್ ವಾದನ, ರಾಜೇಂದ್ರ ನಾಕೋಡ್–ತಬಲ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 6ಕ್ಕೆ
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಉಪನ್ಯಾಸ, ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ ಅವರಿಂದ ವಾಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ

ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.7–ಮೈಸೂರಿನ ಆದರ್ಶ ಸೇವಾ ಸಂಘ ಮತ್ತು ಬೆಂಗಳೂರಿನ ವಿಶ್ವ ವಿಪ್ರತ್ರಯೀ ಪರಿಷತ್ ಸಹಯೋಗದಲ್ಲಿ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯು ಮೈಸೂರಿನ ವಿದ್ಯಾ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿದ್ದು, 2023ರ ಎಸ್‌ಎಸ್‌ಎಲ್‌ಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಕುಟುಂಬದ ಒಟ್ಟು ವಾರ್ಷಿಕ ವರಮಾನ 3 ಲಕ್ಷ ರೂಪಾಯಿಗಳ ಒಳಗಿರಬೇಕು. ಅರ್ಜಿಯನ್ನು ಸೆ.15ರೊಳಗೆ ಸಂಘದ ಕಚೇರಿಯಲ್ಲಿ ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಸಂಘದ ಕಚೇರಿ, ಮಧುವನ ಬಡಾವಣೆ, ಶ್ರೀರಾಂಪುರ 2ನೇ ಹಂತ, ಮೈಸೂರು ಇಲ್ಲಿಗೆ ಸೆ.20 ರೊಳಗೆ ಸಲ್ಲಿಸಲು ಕೋರಲಾಗಿದೆ ಅ.8ರಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಯದಲ್ಲಿ ನಡೆಸಲಾಗುವ ಸಮಾರಂಭದಲ್ಲಿ ವಿದ್ಯಾರ್ಥಿವೇತನ ವಿತರಣೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕ್ರೈಂ ಬಾಕ್ಸ್

ಲಕ್ಕಿ ಡ್ರಾ ಬಹುಮಾನದ ಆಸೆಗೆ 1.01 ಲಕ್ಷ ಕಳೆದುಕೊಂಡ ಗೃಹಿಣಿ!

ಮೈಸೂರು,ಸೆ.7–ಲಕ್ಕಿ ಡ್ರಾನಲ್ಲಿ ಬಹುಮಾನ ಬಂದಿದೆ ಎಂದು ಪೋಸ್ಟ್ ಕಳುಹಿಸಿ ಗೃಹಿಣಿಗೆ ಆನ್‌ಲೈನ್ ಮೂಲಕ 1.01 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ರಾಮಕೃಷ್ಣನಗರದ ವಾಸು ಲೇಔಟ್ ನಿವಾಸಿ ಎಸ್.ಶಿಲ್ಪ (40) ವಂಚನೆಗೊಳಗಾದವರಾಗಿದ್ದು, ರಿಜಿಸ್ಟರ್ ಪೋಸ್ಟ್ ಮೂಲಕ ಇವರಿಗೆ ಲಕ್ಕಿ ಡ್ರಾ ಕೂಪನ್ ರವಾನೆಯಾಗಿದೆ. ಅದನ್ನು ಸ್ಕ್ರ್ಯಾಚ್ ಮಾಡಿದಾಗ 12.50 ಲಕ್ಷ ರೂ. ಬಹುಮಾನ ಬಂದಿರುವುದಾಗಿ ನಮೂದಾಗಿದ್ದು, ಅದರಲ್ಲಿದ್ದ ವಾಟ್ಸಾಪ್ ನಂಬರ್ 8436370335ಗೆ ಅವರು ಕೂಪನ್ ಅನ್ನು ವಾಟ್ಸಾಪ್ ಮಾಡಿದಾಗ ಕರೆ ಮಾಡಿದ ವ್ಯಕ್ತಿ ಆರ್‌ಬಿಐನಿಂದ ಮೇಲ್ ಬರುತ್ತದೆ. ಅದರಂತೆ ನಾಲ್ಕು ಕಂತುಗಳಲ್ಲಿ ಹಣ ಕಟ್ಟಿದರೆ ನಿಮಗೆ 12.50 ಲಕ್ಷ ರೂ. ಬಹುಮಾನ ದೊರೆಯುತ್ತದೆ ಎಂದು ಹೇಳಿದ ಹಿನ್ನೆಲೆಯಲ್ಲಿ ಅವರು ಒಟ್ಟು 1,01,290 ರೂ.ಗಳನ್ನು ರವಾನಿಸಿ ವಂಚನೆಗೊಳಗಾಗಿದ್ದಾರೆ.

ಪಾರ್ಟ್ ಟೈಂ ಕೆಲಸಕ್ಕೆ ಆಸೆ ಇಟ್ಟು 5.61 ಲಕ್ಷ ನಾಮ ಹಾಕಿಸಿಕೊಂಡ ಶಿಕ್ಷಕ

ಮತ್ತೊಂದು ಪ್ರಕರಣದಲ್ಲಿ ಭೈರವೇಶ್ವರನಗರದ ನಿವಾಸಿ ಶಿಕ್ಷಕ ನಾಗರಾಜ (38) ಎಂಬುವರಿಗೆ ಪಾರ್ಟ್‌ಟೈಮ್ ಜಾಬ್ ವಿಚಾರವಾಗಿ ಸಂದೇಶ ಬಂದಿದ್ದು, ಸಂದೇಶ ಬಂದ ನಂಬರ್ ಅನ್ನು ಅವರು ಸಂಪರ್ಕಿಸಲಾಗಿ ಅವರಿಗೆ ಟೆಲಿಗ್ರಾಂ ಲಿಂಕ್‌ವೊಂದನ್ನು ರವಾನೆ ಮಾಡಲಾಗಿದೆ. ಲಿಂಕ್ ಅನ್ನು ಕ್ಲಿಕ್ ಮಾಡಿ ಸಂದೇಶಗಳನ್ನು ಪಾಲಿಸಿ ಒಟ್ಟು 5.61 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಕಮಿಷನ್ ಆಗಲೀ, ಅವರು ವರ್ಗಾವಣೆ ಮಾಡಿದ ಹಣವನ್ನಾಗಲೀ ಹಿಂತಿರುಗಿಸದೇ ವಂಚಿಸಲಾಗಿದೆ. ಇವೆರಡೂ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಬ್ಯಾಂಕ್ ಸಿಬ್ಬಂದಿಯಿಂದಲೇ 30.24 ಲಕ್ಷ ವಂಚನೆ; ಪ್ರಕರಣ ದಾಖಲು

ಮೈಸೂರು, ಸೆ.7–ಮೈಸೂರಿನ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗೆ ಅದರ ಗ್ರಾಹಕ ಸಂಪರ್ಕಾಧಿಕಾರಿಯಾಗಿದ್ದ ವ್ಯಕ್ತಿ 30.24 ಲಕ್ಷ ರೂ.ಗಳನ್ನು ವಂಚಿಸಿರುವುದಾಗಿ ಪ್ರಕರಣ ದಾಖಲಾಗಿದೆ.

ಗುಂಡ್ಲುಪೇಟೆ ತಾಲೂಕು ಮರಳಾಪುರ ಗ್ರಾಮದ ಎಂ.ಮಹದೇವಸ್ವಾಮಿ (34) ಆರೋಪಕ್ಕೆ ಗುರಿಯಾಗಿರುವವರಾಗಿದ್ದು, ಇವರು ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಗ್ರಾಹಕ ಸಂಪರ್ಕಾಧಿಕಾರಿಯಾಗಿದ್ದರು. ಗ್ರಾಹಕರಿಗೆ ಮೈಕ್ರೋ ಬ್ಯಾಂಕಿಂಗ್ ಸಾಲ ಕೊಡಿಸುವುದು ಹಾಗೂ ಸಾಲದ ಹಣವನ್ನು ಕಂತಿನ ರೂಪದಲ್ಲಿ ವಸೂಲಿ ಮಾಡಿ ಬ್ಯಾಂಕ್‌ಗೆ ಸಂದಾಯ ಮಾಡುವುದು ಇವರ ಕೆಲಸವಾಗಿತ್ತು.

ಕಳೆದ ಜುಲೈ 4ರಂದು ದಳದಹಳ್ಳಿ ಗ್ರಾಮದಲ್ಲಿ ಸಭೆ ನಡೆಸಿದ್ದ ಇವರು, 98 ಗ್ರಾಹಕರಿಂದ 2,37,511 ರೂ. ವಸೂಲಿ ಮಾಡಿದ್ದು, ಅದನ್ನು ಬ್ಯಾಂಕ್‌ಗೆ ಪಾವತಿಸಿರಲಿಲ್ಲ. ಅಲ್ಲದೇ ಅವರ ಮೊಬೈಲ್ ನಂಬರ್‌ಗಳು ಸ್ವಿಚ್ ಆಫ್ ಆಗಿದ್ದವು. ನಂತರ ಪರಿಶೀಲಿಸಲಾಗಿ 42 ಗ್ರಾಹಕರಿಗೆ 23.20 ಲಕ್ಷ ರೂ. ಸಾಲ ಮಂಜೂರು ಮಾಡಿಸಿ ಅವರ ಅರಿವಿಗೇ ಬಾರದಂತೆ ತಾವೇ ಆ ಹಣವನ್ನು ಪಡೆದುಕೊಂಡಿದ್ದರು. ಮತ್ತೊಂದು ಪ್ರಕರಣದಲ್ಲಿ 16 ಗ್ರಾಹಕರಿಂದ 3,82,998 ರೂ. ಸಾಲದ ತೀರುವಳಿ ಹಣವನ್ನು ಪಡೆದು ಬ್ಯಾಂಕ್‌ಗೆ ಸಂದಾಯ ಮಾಡಿರಲಿಲ್ಲ. ಇನ್ನೊಂದು ಪ್ರಕರಣದಲ್ಲಿ 11 ಗ್ರಾಹಕರಿಂದ ವಸೂಲಿ ಮಾಡಿದ್ದ 83,681 ರೂ.ಗಳನ್ನು ಬ್ಯಾಂಕ್‌ಗೆ ಪಾವತಿಸದೇ ವಂಚಿಸಿದ್ದರು. ಒಟ್ಟಾರೆ ಇವರು 2021ರ ಡಿಸೆಂಬರ್ 4ರಿಂದ 2023ರ ಜುಲೈ 4ರವರೆಗೆ ಬ್ಯಾಂಕ್‌ಗೆ 30,24,190 ರೂ.ಗಳನ್ನು ವಂಚಿಸಿದ್ದಾರೆ ಎಂದು ಬ್ಯಾಂಕ್‌ನ ವಿಶೇಷ ವ್ಯವಸ್ಥಾಪಕಿ ಹೇಮಲತಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರಲ್ಲಿ ಮಗು ಮಾರಾಟ ಪ್ರಕರಣ ಪತ್ತೆ; 7 ಮಂದಿ ವಿರುದ್ಧ ಕೇಸ್ ದಾಖಲು

ಮೈಸೂರು, ಸೆ.7–ಮೈಸೂರು ನಗರದಲ್ಲಿ ಮಗು ಮಾರಾಟ ಪ್ರಕರಣವೊಂದು ಪತ್ತೆಯಾಗಿದ್ದು, ದಂಪತಿಯ 15–20 ದಿನಗಳ ಮಗುವನ್ನು ಮಧ್ಯವರ್ತಿಗಳು ತಮಿಳುನಾಡಿನ ದಂಪತಿಗೆ ಮಾರಾಟ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಈ ಪ್ರಕರಣವನ್ನು ಪತ್ತೆ ಹಚ್ಚಿದ ಮೈಸೂರು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದ ಅಧಿಕಾರಿ ಎನ್.ಅಪೇಕ್ಷಿತ (37) ಅವರು ಮಗುವಿನ ತಂದೆ–ತಾಯಿ, ಮಗುವನ್ನು ಖರೀದಿಸಿದ ತಮಿಳುನಾಡು ದಂಪತಿ ಸೇರಿದಂತೆ 7 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಿವರ: ಕಳೆದ ಫೆಬ್ರವರಿಯಿಂದ ಮಾರ್ಚ್ ಒಳಗಿನ ದಿನಗಳಲ್ಲಿ ಮೈಸೂರಿನ ಕ್ಯಾತಮಾರನಹಳ್ಳಿ ದಂಪತಿಗೆ ಜನಿಸಿದ 15–20 ದಿನಗಳ ಗಂಡು ಮಗುವನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಕ್ಯಾತಮಾರನಹಳ್ಳಿಯ ಇಂಡಿಯನ್ ಬೇಕರಿಗೆ ತಂದ ಶಬೀರ್ ಎಂಬಾತ ದಂಪತಿಗೆ 1.20 ಲಕ್ಷ ರೂ.ಗಳನ್ನು ನೀಡಿ ಮಗುವನ್ನು ಖರೀದಿಸಿ, ಅದನ್ನು ಯಶವಂತ್ ಎಂಬಾತನಿಗೆ ಮಾರಾಟ ಮಾಡಿದ್ದಾನೆ. ಯಶವಂತ್ ಎಂಬಾತ ಕುಮರೇಶ್ ಎಂಬುವನಿಗೆ ಮಗುವನ್ನು ಮಾರಾಟ ಮಾಡಿದ್ದು, ಆತ ತಮಿಳುನಾಡಿನ ತಿರುಚಿನಾಪಳ್ಳಿಯ ರಾಜಮಾಣಿಕ್ಯಂ ಮತ್ತು ಶೋಭನಾ ದಂಪತಿಗೆ ಮಗುವನ್ನು ಮಾರಾಟ ಮಾಡಿದ್ದಾನೆ.

ಶಬೀರ್ ಎಂಬಾತ ನೋಟರಿಯೊಬ್ಬರಿಂದ ಮಗುವಿನ ತಂದೆ–ತಾಯಿಯಿಂದ ಪ್ರಮಾಣ ಪತ್ರ ಮಾಡಿಸಿದ್ದು, ಅದಕ್ಕೆ ಯಶವಂತ್ ಮತ್ತು ಕುಮರೇಶ್ ಸಾಕ್ಷಿಗಳಾಗಿ ಸಹಿ ಮಾಡಿದ್ದು, ಈ ಪ್ರಮಾಣ ಪತ್ರವನ್ನೇ ದತ್ತು ಸ್ವೀಕರಿಸಿದ ದಾಖಲೆ ಎಂದು ನಂಬಿಸಿ ತಮಿಳುನಾಡು ದಂಪತಿಗೆ ಮಗುವನ್ನು ಮಾರಾಟ ಮಾಡಲಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವರ್ತಕನಿಂದ ಫ್ಲಿಪ್ ಕಾರ್ಟ್‌ಗೆ 15.57 ಲಕ್ಷ ರೂ. ವಂಚನೆ

ಮೈಸೂರು, ಸೆ.7–ಫ್ಲಿಪ್ ಕಾರ್ಟ್‌ಗೆ ವರ್ತಕನೋರ್ವ 15.57 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ನಜರ್‌ಬಾದ್‌ನ ಪಾಪಣ್ಣ ರಸ್ತೆಯಲ್ಲಿರುವ ಪ್ರಕೃತಿ ಸ್ಟೋರ್ಸ್ ಉಸ್ತುವಾರಿ ಮಹದೇವಸ್ವಾಮಿ ಆರೋಪಕ್ಕೆ ಒಳಗಾದವರಾಗಿದ್ದು, ಇವರು ಫ್ಲಿಪ್ ಕಾರ್ಟ್‌ನ ವಸ್ತುಗಳನ್ನು ಮಾರಾಟ ಮಾಡಿ ಗ್ರಾಹಕರಿಂದ ಸಂಗ್ರಹಿಸಿದ ಹಣವನ್ನು ಪಾವತಿಸದೇ ಅಂಗಡಿ ಬಂದ್ ಮಾಡಿ ಹೋಗಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಫ್ಲಿಪ್ ಕಾರ್ಟ್‌ನ ಮೈಸೂರು ಶಾಖೆ ಕುವೆಂಪುನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಮೈಸೂರಿನ 5 ಉಪ ಶಾಖೆಗಳಿಗೆ ವಸ್ತುಗಳನ್ನು ವಿತರಿಸಿ ಅದರ ಮೂಲಕ ಗ್ರಾಹಕರಿಗೆ ಮಾರಾಟ ಮಾಡಲಾಗಿತ್ತು. ಉಪ ಶಾಖೆಯ ಉಸ್ತುವಾರಿಗಳು ಗ್ರಾಹಕರಿಗೆ ವಸ್ತುಗಳನ್ನು ನೀಡಿ ಹಣ ವಸೂಲಿ ಮಾಡಿ ಫ್ಲಿಪ್ ಕಾರ್ಟ್‌ನ ಖಾತೆಗೆ ಜಮಾ ಮಾಡುವುದು ವಾಡಿಕೆ. ಪ್ರಕೃತಿ ಸ್ಟೋರ್ ಉಸ್ತುವಾರಿ ಮಹದೇವಸ್ವಾಮಿಯವರು ಫ್ಲಿಪ್ ಕಾರ್ಟ್ ಜೊತೆ ಒಪ್ಪಂದ ಕರಾರು ಮಾಡಿಕೊಂಡು ಅದರ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಕಳೆದ ಮೇ 10ರಿಂದ ಜುಲೈ 31ರವರೆಗೆ ಫ್ಲಿಪ್ ಕಾರ್ಟ್‌ನಿಂದ ಕಳುಹಿಸಿದ ವಸ್ತುಗಳ ಮಾರಾಟದಿಂದ ಬಂದಿದ್ದ 15,57,957 ರೂ.ಗಳನ್ನು ಕಂಪನಿಯ ಖಾತೆಗೆ ಜಮೆ ಮಾಡದೇ ವಂಚಿಸಿದ್ದಾರೆ ಎಂದು ಕಂಪನಿಯ ಮ್ಯಾನೇಜರ್ ಪಿ.ಶ್ರೀಧರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾದರೆ ಮಾತ್ರವೇ ಸರ್ವಜನಾಂಗದ ಶಾಂತಿಯ ತೋಟ ನಿರ್ಮಾಣ

ಹಿರಿಯ ನ್ಯಾಯವಾದಿ, ಚಿಂತಕ ಓ.ಶ್ಯಾಂ ಭಟ್ ಅಭಿಮತ

ಮೈಸೂರು, ಸೆ.7(ಎಸ್‌ಬಿಡಿ)– ದೇಶದಲ್ಲಿ ತಾರತಮ್ಯ ಅಳಿಯಲು ಏಕರೂಪ ನಾಗರಿಕ ಸಂಹಿತೆ ಜಾರಿ ಅವಶ್ಯ ಎಂದು ಮೈಸೂರಿನ ಹಿರಿಯ ವಕೀಲ ಓ.ಶ್ಯಾಂ ಭಟ್ ಹೇಳಿದರು.

ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತದ ಮೈಸೂರು ಜಿಲ್ಲಾ ಘಟಕ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಹಯೋಗದಲ್ಲಿ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಗುರುವಾರ ಆಯೋಜಿಸಿದ್ದ ಏಕರೂಪ ನಾಗರಿಕ ಸಂಹಿತೆ–ಸಂವಾದ ಮತ್ತು ಅಧಿವಕ್ತಾ ಪರಿಷತ್ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತದ ಮೈಸೂರು ಜಿಲ್ಲಾ ಘಟಕ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಹಯೋಗದಲ್ಲಿ ನಡೆದ ಆಯೋಜಿಸಿದ್ದ ಏಕರೂಪ ನಾಗರಿಕ ಸಂಹಿತೆ–ಸಂವಾದ' ಮತ್ತು ಅಧಿವಕ್ತಾ ಪರಿಷತ್ ಸಂಸ್ಥಾಪನಾ ದಿನಾಚರಣೆಯಲ್ಲಿ ಗಣ್ಯರು ಭಾರತಾಂಬೆ ಫೋಟೋಗೆ ಪುಷ್ಪಾರ್ಚನೆ ಮಾಡಿದರು.

> ಭಾರತದ ಸಂಸ್ಕೃತಿಗೆ ಸಹಸ್ರಾರು ವರ್ಷಗಳ ಪರಂಪರೆಯಿದೆ. ಸ್ವಾತಂತ್ರ್ಯ ಎಂದರೆ ರಾಜಕೀಯ ಸ್ವಾತಂತ್ರ್ಯವಲ್ಲ. ಬ್ರಿಟಿಷರು ನಾಶ ಮಾಡಿದ ನಮ್ಮ ಶಿಕ್ಷಣ ವ್ಯವಸ್ಥೆಗೂ ಸ್ವಾತಂತ್ರ್ಯ ಬೇಕಲ್ಲವೇ?. ಮಠಮಾನ್ಯಗಳು ಹಾಗೂ ದೇವಾಲಯಗಳಿಗೆ ಸೇರಿದ ಆಸ್ತಿಯನ್ನು ಯಾವುದೇ ಪರಿಹಾರ ನೀಡದೆ ಸರ್ಕಾರದ ವಶಕ್ಕೆ ಪಡೆಯಲಾಯಿತು. ಆದರೆ ಈ ರೀತಿಯ ಧಾರ್ಮಿಕ ಆಸ್ತಿಯು ಬಗ್ಗೆ ನಿರ್ಧರಿಸಲು ಬೇರೊಂದು ಧರ್ಮದಲ್ಲಿ ಪ್ರತ್ಯೇಕ ಮಂಡಳಿಗೆ ವಹಿಸಲಾಗಿದೆ.
> –ಓ.ಶ್ಯಾಂ ಭಟ್, ನ್ಯಾಯವಾದಿ

ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಬಹುಸಂಖ್ಯಾತರು ಎರಡನೇ ದರ್ಜೆ ನಾಗರಿಕರಂತಿರುವುದು ಭಾರತದಲ್ಲಿ ಮಾತ್ರ. ಸಂವಿಧಾನ ರಚನೆಕಾರರು ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳನ್ನು ಆಳವಾಗಿ ಚರ್ಚಿಸಿ, ಉದಾತ್ತ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ ಹೇಗೋ ಏನೋ ಕಾನೂನಿನಲ್ಲಿ ತಾರತಮ್ಯತೆ ತೂರಿಕೊಂಡಿದೆ. 1955ರಲ್ಲಿ ಹಿಂದೂ ವಿವಾಹ ಕಾಯ್ದೆ ಜಾರಿಗೆ ಬಂದಿತು. ಅವರೆಗೆ ಹಿಂದೂಗಳಲ್ಲೂ ಬಹುಪತ್ನಿತ್ವ ಆಚರಣೆಯಲ್ಲಿತ್ತು. ವಿವಾಹ ಕಾಯ್ದೆ ಬಂದ ನಂತರ ಒಬ್ಬರೊಂದಿಗೆ ದಾಂಪತ್ಯ ಹೊಂದಿರುವಾಗಲೇ ಮತ್ತೊಬ್ಬರನ್ನು ವಿವಾಹವಾಗುವುದು ಶಿಕ್ಷಾರ್ಹವಾಯಿತು. ಆದರೆ ಇದು ಒಂದು ವರ್ಗಕ್ಕೆ ಮಾತ್ರ ಅನ್ವಯವಾಗುವ ಪರಿಸ್ಥಿತಿ ಇರುವುದು ವಿಷಾದನೀಯ ಎಂದರು.

ಎಲ್ಲಾ ಹೆಣ್ಣು ಮಕ್ಕಳಿಗೂ ಆಸ್ತಿ ಸಿಗಬೇಕು

> ಕಾನೂನಿನಲ್ಲಿ ತೂರಿಕೊಂಡಿರುವ ಈ ರೀತಿಯ ತಾರತಮ್ಯ ಸರಿಪಡಿಸಲು ಏಕರೂಪ ನಾಗರಿಕ ಸಂಹಿತೆ ಅಗತ್ಯ. ದೇಶದ ಪ್ರತಿಯೊಬ್ಬರಿಗೂ ಒಂದೇ ಕಾನೂನು ಇದ್ದಾಗ ಮಾತ್ರ ಸರ್ವಜನಾಂಗದ ಶಾಂತಿಯ ತೋಟ ನಿರ್ಮಾಣ ಸಾಧ್ಯ. ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸದಿದ್ದರೂ ಪರವಾಗಿಲ್ಲ ಆದರೆ ಜನಸಂಖ್ಯೆ ನಿಯಂತ್ರಣಕ್ಕೆ ಕಾನೂನು ತರಬೇಕು. ಹಿಂದೂ ವಿವಾಹ ಕಾಯ್ದೆಗೆ ಸರಿಸಮಾನವಾದ ಕಾನೂನು ಎಲ್ಲರಿಗೂ ಅನ್ವಯವಾಗಬೇಕು. ಎಲ್ಲಾ ಸಮುದಾಯದ ಹೆಣ್ಣು ಮಕ್ಕಳಿಗೂ ಆಸ್ತಿ ಹಕ್ಕು ಸಿಗಬೇಕು. ಬೇರೊಂದು ಧರ್ಮದಲ್ಲಿರುವಂತೆ ಧರ್ಮದಿಂದ ಹೊರಹೋದ ಹೆಣ್ಣು ಮಕ್ಕಳಿಂದ ಪಿತ್ರಾರ್ಜಿತ ಆಸ್ತಿ ಹಕ್ಕು ಹಿಂಪಡೆಯುವ ಅವಕಾಶ ಸಿಗಬೇಕು. –ಓ.ಶ್ಯಾಂ ಭಟ್, ನ್ಯಾಯವಾದಿ

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕು ನೀಡಿದ್ದಾರೆ. ಇದನ್ನು ಪೂರ್ವಾನ್ವಯ ಎಂದು ಒಂದು ಪ್ರಕರಣದಲ್ಲಿ ನ್ಯಾಯಾಲಯ ಸ್ಪಷ್ಟಪಡಿಸಿದೆ. ಹೆಣ್ಣು ಮಕ್ಕಳ ಹಕ್ಕನ್ನು ಭಾರತೀಯರು ಗೌರವಿಸುತ್ತೇವೆ. ಹಾಗಾಗಿ ಈ ಕಾನೂನನ್ನು ಮಠ ಮಾನ್ಯಗಳಾದಿಯಾಗಿ ಎಲ್ಲರೂ ಸ್ವಾಗತಿಸಿದರು. ಆದರೆ ಅನ್ಯ ಧರ್ಮದ ಕಾನೂನನ್ನು ಮುಟ್ಟಿದರೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಚಳವಳಿಯಾಗುತ್ತದೆ. ಒಂದು ಸಮುದಾಯದ ವ್ಯಕ್ತಿಯನ್ನು ವಿವಾಹವಾಗುವ ಹಿಂದೂ ಮಹಿಳೆಗೆ ತನ್ನ ತಂದೆಯ ಆಸ್ತಿ ಮೇಲೆ ಹಕ್ಕಿದೆ. ಆದರೆ ಹಿಂದು ವ್ಯಕ್ತಿಯನ್ನು ವಿವಾಹವಾದ ಆ ಸಮುದಾಯದ ಮಹಿಳೆಗೆ ಆಕೆಯ ತಂದೆ ಆಸ್ತಿಯಲ್ಲಿ ಹಕ್ಕಿಲ್ಲ. ಹಾಗಾದರೆ ಇದು ತಾರತಮ್ಯವಲ್ಲವೇ? ಎಂದು ಪ್ರಶ್ನಿಸಿದರು.

ಹಿಂದೂ ವಿವಾಹವನ್ನು ಎರಡು ಆತ್ಮಗಳ ಮಿಲನ ಎನ್ನಲಾಗುತ್ತದೆ. ವಿವಾಹವಾಗಲು ಯುವತಿಗೆ 18 ವರ್ಷ ಹಾಗೂ ಯುವಕನಿಗೆ 21 ವರ್ಷವಾಗಿರಬೇಕು ಎಂಬ ನಿಯಮವಿದೆ. 18 ವರ್ಷದೊಳಗಿನ ಹೆಣ್ಣನ್ನು ವಿವಾಹವಾದರೆ ಶಿಕ್ಷೆ ವಿಧಿಸಲಾಗುತ್ತದೆ. ಆದರೆ ಬೇರೊಂದು ಧರ್ಮದಲ್ಲಿ ಋತುಮತಿಯಾದರೆ ಸಾಕು. ವಯಸ್ಸನ್ನು ಪರಿಗಣಿಸುವುದಿಲ್ಲ. 1961ರಲ್ಲಿ ಭಾರತದಲ್ಲಿ ಕುಟುಂಬ ಯೋಜನೆ(ಫ್ಯಾಮಿಲಿ ಪ್ಲಾನಿಂಗ್) ಪ್ರಾರಂಭವಾದಾಗ ಕೇವಲ ಹಿಂದೂಗಳನ್ನು ಗುರಿಯಾಗಿಸಲಾಯಿತು ಎಂದು ತಿಳಿಸಿದರು.

ಅಲ್ಪಸಂಖ್ಯಾತರು(Minority) ಎನ್ನುವುದಕ್ಕೆ ಸಂವಿಧಾನದಲ್ಲಿ ಯಾವುದೇ ವ್ಯಾಖ್ಯಾನವಿಲ್ಲ. ಸರ್ಕಾರವನ್ನು ಅಸ್ಥಿರ ಮಾಡುವ ಶಕ್ತಿ ಇರುವ ಸಮುದಾಯವನ್ನು ಅಲ್ಪಸಂಖ್ಯಾತ ಎನ್ನಲಾಗದು. ಸಂಖ್ಯೆ ಆಧಾರದಲ್ಲಿ ನೋಡಿದರೆ ಕರ್ನಾಟಕದಲ್ಲಿ ಜೈನರು, ಪಾರ್ಸಿಗಳಿಗೆ ಅಲ್ಪಸಂಖ್ಯಾತರ ಸೌಲಭ್ಯ ಸಿಗಬೇಕಲ್ಲವೇ?. ಹಾಗಾಗಿ ಮೈನಾರಿಟಿ ಎನ್ನುವುದಕ್ಕೆ ಸರಿಯಾದ ವ್ಯಾಖ್ಯಾನ ನೀಡಬೇಕಿದೆ ಎಂದರು.

ಜಾರಿ ಸಾಧ್ಯವಿದೆ: ಏಕರೂಪ ನಾಗರಿಕ ಸಂಹಿತೆ ನಮ್ಮ ಹಕ್ಕು. ಯಾವ ನ್ಯಾಯಾಲಯವೂ ಇದರ ವಿರುದ್ಧ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ಕಾರಣ ಇದು ಸಮಾನತೆ ಪರವಾಗಿದೆ. ಏಕರೂಪ ನಾಗರಿಕ ಸಂಹಿತೆ ವಿರೋಧಿಸುವವರು ಸಂವಿಧಾನ ವಿರೋಧಿಗಳಾಗುತ್ತಾರೆ. ಈ ನಿಟ್ಟಿನಲ್ಲಿ ಎಲ್ಲರೂ ಚಿಂತನೆ ನಡೆಸಬೇಕು. 30 ವರ್ಷಗಳ ಹಿಂದೆ ಅಯೋಧ್ಯೆ ರಾಮ ಮಂದಿರ ಸಂಬಂಧ ಚಳವಳಿ ಆ ಸಂದರ್ಭಕ್ಕೆ ನಗು ತರಿಸುವಂತಿತ್ತು. ಆದರೆ ಈಗ ಸಾಕಾರವಾಗಿಲ್ಲವೇ?. ಹಾಗೆಯೇ ಏಕರೂಪ ನಾಗರಿಕ ಸಂಹಿತೆ ಸಂಬಂಧ ಆಳವಾದ ಚಿಂತನೆ ಜೊತೆಗೆ ಹೋರಾಟ ಅವಶ್ಯವಾಗಿದೆ. ವಕೀಲರು, ಸಮಾಜ ಮುಖಿ, ರಾಷ್ಟ್ರಬದ್ಧತೆಯುಳ್ಳವರೆಲ್ಲಾ ಸಂಘಟಿತರಾಗಬೇಕಿದೆ ಎಂದು ತಿಳಿಸಿದರು.

ಹಿಂದೆಯೇ ಆಗಬೇಕಿತ್ತು: ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ದೇಶದ ಅಭಿವೃದ್ಧಿಗಾಗಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು. ಒಂದು ದೇಶದಲ್ಲಿ ಒಂದು ಕಾನೂನು ತುಂಬಾ ಮುಖ್ಯ. ಇದು ಸ್ವಾತಂತ್ರ್ಯ ಬಂದ ದಿನವೇ ಜಾರಿಯಾಗಬೇಕಿತ್ತು. ಈಗಲಾದರೂ ಚರ್ಚೆ ಆರಂಭವಾಗಿ ಅನುಷ್ಠಾನವಾಗಬೇಕಿದೆ. ಎಲ್ಲವೂ ಬೇಕು ಆದರೆ ದೇಶದ ಕಾನೂನು ಬೇಡ ಎನ್ನುವುದು ಸರಿಯಲ್ಲ. ಕಾನೂನು ಎಂದರೆ ಯಾವುದು ಸರಿ ಅಥವಾ ತಪ್ಪು ಎಂಬ ಕಾಮನ್ ಸೆನ್ಸ್ (ಸಾಮಾನ್ಯ ಜ್ಞಾನ). ಶೀಘ್ರದಲ್ಲೇ ನಾಗರಿಕ ಸಂಹಿತೆ ಜಾರಿಯಾಗುವ ವಿಶ್ವಾಸವಿದೆ ಎಂದರು. ಕಾರ್ಯಕ್ರಮದಲ್ಲಿ ಅಧಿವಕ್ತಾ ಪರಿಷತ್ ಮೈಸೂರು ಘಟಕದ ಅಧ್ಯಕ್ಷೆಯಾದ ವಕೀಲೆ ವಿ.ಶಾರದ, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪಣಿಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನ ಸಂಪೂರ್ಣ ಬಳಸಿ

ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಡಾ.ಕೆ.ವಿ.ರಾಜೇಂದ್ರ ತಾಕೀತು



ಮೈಸೂರಿನ ಬಾಬು ಜಗಜೀವನರಾಮ್ ಭವನದಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು,ಸೆ.7(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಅನುದಾನವನ್ನು ಆರ್ಥಿಕ ವರ್ಷದಲ್ಲಿ ಸಂಪೂರ್ಣ ಬಳಕೆ ಮಾಡಬೇಕು. ಯಾವುದೇ ಕಾರಣಕ್ಕೂ ಅನುದಾನ ಬಳಕೆ ಆಗದೆ ವ್ಯರ್ಥವಾಗಬಾರದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮೈಸೂರಿನ ಬಾಬು ಜಗಜೀವನರಾಮ್ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನ ಸರ್ಕಾರದಿಂದ ಬಿಡುಗಡೆ ಆಗುವವರೆಗೆ ಕಾಯಬಾರದು. ಮುಂಗಡವಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಸಬೇಕು. ಇದರಿಂದ ಅನುದಾನ ಬಿಡುಗಡೆಯಾದ ತಕ್ಷಣ ಸೌಲಭ್ಯ ಒದಗಿಸಲು ಅನುಕೂಲವಾಗಲಿದೆ. ಅಲ್ಲದೆ, ಅನುದಾನ ವ್ಯರ್ಥವಾಗುವುದನ್ನು ತಡೆಯಬಹುದು. ಅರ್ಜಿಯೊಂದಿಗೆ ಸಣ್ಣಪುಟ್ಟ ದಾಖಲಾತಿಗಳನ್ನು ಸಲ್ಲಿಸದಿದ್ದರೆ, ಅವರಿಂದ ತಾವೇ ಮುತುವರ್ಜಿ ವಹಿಸಿ ದಾಖಲೆಗಳನ್ನು ಪಡೆದು ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಸೆ.15ರಂದು ಸಂವಿಧಾನ ಓದು ಕಾರ್ಯಕ್ರಮ

> ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಸಂವಿಧಾನ ಓದು ಕಾರ್ಯಕ್ರಮ ಜಾರಿಗೆ ತಂದಿದ್ದು, ಸೆ.15ರಂದು ವಿವಿಧ ಇಲಾಖೆಗಳ ಕಚೇರಿಗಳಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಹಾಗಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನೋಂದಣಿ ಮಾಡಿಕೊಳ್ಳಬೇಕು. –ಡಾ.ಕೆ.ವಿ. ರಾಜೇಂದ್ರ, ಮೈಸೂರು ಜಿಲ್ಲಾಧಿಕಾರಿ.

ಸಾಮಾಜಿಕ ಅರಣ್ಯ ಪ್ರದೇಶವನ್ನು ಹಾಸ್ಟೆಲ್ ನಿರ್ಮಾಣಕ್ಕೆ ನೀಡಲು ಯಾವುದೇ ಕಾಯ್ದೆಗಳು ಅಡ್ಡಿಯಾಗವು. ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳನ್ನು ಬುಡಕಟ್ಟು ಜನರು ಹೆಚ್ಚಿರುವ ಪ್ರದೇಶದಲ್ಲಿ ನಿರ್ಮಿಸಬೇಕು. ಇಂದು ಸಂಜೆಯೊಳಗೆ ಹಾಸ್ಟೆಲ್ ನಿರ್ಮಾಣಕ್ಕೆ ಗುರುತಿಸಿರುವ ಜಾಗಗಳನ್ನು ಸರ್ವೇ ಮಾಡಿ ಸಣ್ಣಪುಟ್ಟ ತೊಡಕುಗಳನ್ನು ನಿವಾರಿಸಬೇಕು ಎಂದು ತಹಸೀಲ್ದಾರ್‌ಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಭೂಮಿ ಇಲ್ಲದೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳನ್ನು ಗುರುತಿಸಿ ಅವರಿಗೆ ಸರ್ಕಾರದ ವತಿಯಿಂದ ಭೂಮಿ ಸೌಲಭ್ಯ ನೀಡಲು ಕ್ರಮವಹಿಸಬೇಕೆಂದು ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹಾಡಿಗಳಲ್ಲಿ ವಾಸಿಸುವ ಕೆಲವು ಜನರ ಬಳಿ ಪಡಿತರ ಚೀಟಿ, ಆಧಾರ್ ಕಾರ್ಡ್, ಜಾಬ್ ಕಾರ್ಡ್, ಬ್ಯಾಂಕ್ ಖಾತೆ ಇಲ್ಲ. ಈ ಬಗ್ಗೆ ಪರಿಶೀಲಿಸಿ, ಶಿಬಿರಗಳನ್ನು ನಡೆಸುವ ಮೂಲಕ ಈ ಎಲ್ಲಾ ದಾಖಲೆಗಳನ್ನು ಒದಗಿಸಲು ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ವಿವಿಧ ಇಲಾಖೆಗಳು ಹಾಗೂ ನಿಗಮಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ದೊರೆಯುವ ಸೌಲಭ್ಯಗಳ ಕುರಿತು ಅರಿವು ಮೂಡಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಜನರಿಗೆ ತಲುಪಿಸುವಲ್ಲಿ ಅಧಿಕಾರಿಗಳು ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಡಾ. ಕೆ. ಕೃಷ್ಣಮೂರ್ತಿ ಕಾವ್ಯ ಮೀಮಾಂಸಾ ಕೃತಿಗಳ ಸಮೀಕ್ಷೆ

ಮೈಸೂರು, ಸೆ. 7 –ಡಾ. ಕೆ. ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿಯು ಸೆ.11ರಂದು ಬೆಳಗ್ಗೆ 10ಕ್ಕೆ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಚನ್ನೇನಹಳ್ಳಿಯಲ್ಲಿರುವ ವೇದವಿಜ್ಞಾನ ಶೋಧ ಸಂಸ್ಥಾನದಲ್ಲಿ ಡಾ.ಕೆ. ಕೃಷ್ಣಮೂರ್ತಿ ಕಾವ್ಯ ಮೀಮಾಂಸಾ ಕೃತಿಗಳ ಸಮೀಕ್ಷೆ ಏರ್ಪಡಿಸಿದೆ.

ಡಾ.ಕೆ.ಕೃಷ್ಣಮೂರ್ತಿಯವರ ಆಂಗ್ಲ ಬರಹಗಳ ಬಗ್ಗೆ ಬಿ.ಎನ್. ಶಶಿಕಿರಣ್ ಅವರು ಹಾಗೂ ಧ್ವನಿ ಸಿದ್ಧಾಂತಕ್ಕೆ ಡಾ. ಕೆ. ಕೃಷ್ಣಮೂರ್ತಿಗಳ ಯೋಗದಾನದ ಬಗ್ಗೆ ಅರ್ಜುನ ಭಾರದ್ವಾಜ್ ಉಪನ್ಯಾಸ ನೀಡಲಿದ್ದಾರೆ. ವಿಶ್ರಾಂತ ಕುಲಪತಿ ಡಾ. ರಾಮಚಂದ್ರ ಭಟ್ಟ ಕೋಟೆಮನೆ ಅಧ್ಯಕ್ಷತೆ ವಹಿಸಲಿದ್ದಾರೆ. ಬಹುಶ್ರುತ ವಿದ್ವಾಂಸರಾದ ಶತಾವಧಾನಿ ಡಾ.ರಾ.ಗಣೇಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ವೇದವಿಜ್ಞಾನ ಶೋಧ ಸಂಸ್ಥಾನದ ನಿರ್ದೇಶಕ ಡಾ.ಮಹಾಬಲೇಶ್ವರ ಭಟ್ಟ ಆಗಮಿಸಲಿದ್ದಾರೆ ಎಂದು ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಮೈಸೂರು ನಿರ್ದೇಶಕಿ ಡಾ.ಕೆ.ಲೀಲಾ ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.25, ಸುತ್ತೂರಲ್ಲಿ ಸಾಮೂಹಿಕ ವಿವಾಹ

ಸುತ್ತೂರು,ಸೆ.7–ನಂಜನಗೂಡು ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಸೆ.25ರಂದು ಸೋಮವಾರ ಮಾಸಿಕ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶ ವಿರುವುದಿಲ್ಲ.

ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಸಂವಿಧಾನವೇ ನನ್ನ ಧರ್ಮ



ಬೆಂಗಳೂರು, ಸೆ.7– ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂಬ ಆರೋಪದ ಮೇಲೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಉತ್ತರಪ್ರದೇಶದ ರಾಮ್‌ಪುರದಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ ಆರೋಪದ ಮೇಲೆ ಉತ್ತರಪ್ರದೇಶದಲ್ಲಿ ನನ್ನ ವಿರುದ್ಧ ಭಕ್ತರು ಪ್ರಕರಣವನ್ನು ದಾಖಲಿಸಿದ್ದಾರೆ. ಪ್ರತಿಯೊಂದು ಧರ್ಮವು ಮನುಷ್ಯರ ನಡುವೆ ಭೇದಭಾವ ಇಲ್ಲದೇ ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಆ ಅರ್ಥದಲ್ಲಿ ಮಾತನಾಡಲಾಗಿದೆ. ನಾನು ಕಾನೂನು ಹಾಗೂ ಸಂವಿಧಾನವನ್ನು ನಂಬುತ್ತೇನೆ. ಸಂವಿಧಾನವೇ ನನ್ನ ಧರ್ಮ ಎಂದು ಪ್ರತಿಕ್ರಿಯಿಸಿದ್ದಾರೆ.

ಸನಾತನ ಧರ್ಮದ ಕುರಿತು ಹೇಳಿಕೆ ನೀಡಿ ವಿವಾದಕ್ಕೆ ಗುರಿಯಾಗಿರುವ ಸಚಿವ ಉದಯನಿಧಿ ಸ್ಟಾಲಿನ್ ಹಾಗೂ ಅವರ ಭಾಷಣವನ್ನು ಸಮರ್ಥಿಸಿಕೊಳ್ಳುವ ಮೂಲಕ ಸಚಿವ ಪ್ರಿಯಾಂಕ್ ಖರ್ಗೆ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂಬ ಆರೋಪಿಸಿ ವಕೀಲರಾದ ಹರ್ಷ್ ಗುಪ್ತಾ ಹಾಗೂ ರಾಮ್ ಸಿಂಗ್ ಲೋಧಿ ಎಂಬುವವರು ದೂರು ದಾಖಲಿಸಿದ್ದರು. ಸಚಿವರಾದ ಉದಯನಿಧಿ ಸ್ಟಾಲಿನ್ ಹಾಗೂ ಪ್ರಿಯಾಂಕ್ ಖರ್ಗೆ ವಿರುದ್ಧ ಭಾರತ ದಂಡ ಸಂಹಿತೆ 295ಎ, 153ಎ ಅಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಕೇಂದ್ರದ ಜನ, ಪ್ರಜಾಪ್ರಭುತ್ವ ವಿರೋಧಿ ನೀತಿ ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ಸೆ.7(ಜಿಎ)–ಒಕ್ಕೂಟ ಸರ್ಕಾರದ ಜನ ವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳನ್ನು ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.



2014ರಿಂದ ಒಕ್ಕೂಟ ಸರ್ಕಾರವನ್ನು ಮುನ್ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ದೇಶದ ಜನತೆಗೆ ರೈತರ ಆದಾಯ ದ್ವಿಗುಣ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ, ಬೆಲೆ ಏರಿಕೆ ನಿಯಂತ್ರಣ, ಕಪ್ಪು ಹಣ ವಾಪಸ್ ತರುವುದು ಸೇರಿದಂತೆ ಹಲವು ಭರವಸೆಗಳನ್ನು ನೀಡಿತ್ತು. ಆದರೆ, ಕಳೆದ 9 ವರ್ಷದಲ್ಲಿ ಯಾವ ಭರವಸೆಯನ್ನೂ ಈಡೇರಿಸಿಲ್ಲ. ಲೂಟಿಕೋರ ಕಾರ್ಪೊರೇಟ್ ಸಂಸ್ಥೆಗಳು ದೇಶದ ಸಂಪತ್ತು ದೋಚಲು ನೆರವು ನೀಡುತ್ತಿದೆ. ಇದರಿಂದ ಜನತೆ ಅಚ್ಛೇದಿನ್ ಬದಲಾಗಿ ದೌರ್ಜನ್ಯದ ದಿನಗಳನ್ನು ಎದುರಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಸ ನೀತಿಯಿಂದ ದೇಶದ ಬಡ ಜನತೆ ಬೆಲೆ ಏರಿಕೆಯ ಬಿಸಿಗೆ ತತ್ತರಿಸಿ ಹೋಗಿದ್ದಾರೆ. ಅಗತ್ಯ ವಸ್ತುಗಳು, ಕೃಷಿ ವಸ್ತುಗಳು ಗಗನಮುಖಿಯಾಗಿವೆ. ಇದಕ್ಕೆ ಮುಖ್ಯ ಕಾರಣ ಅಗತ್ಯ ವಸ್ತಗಳ ಬೆಲೆ ನಿಯಂತ್ರಣ ವಾಪಸ್, ಸಹಾಯಧನಗಳ ಕಡಿತ ಮಾಡಿರುವುದು, ಮುಕ್ತ ವ್ಯಾಪಾರಕ್ಕೆ ದೇಶವನ್ನು ತೆರೆದಿರುವುದು, ಡಾಲರ್ ಎದುರು ರೂಪಾಯಿ ಮೌಲ್ಯ ದಿನೇ ದಿನೆ ಕುಸಿಯುತ್ತಿರುವುದು, ಅಪ್ರತ್ಯಕ್ಷ ತೆರಿಗೆ ಭಾರ ವಿಸ್ತರಿಸುತ್ತಿರುವುದು, ಜಿಎಸ್‌ಟಿ ಕರ ಭಾರ ಕಡಿಮೆ ಮಾಡಲು ಕ್ರಮ ವಹಿಸದಿರುವುದು. ಕಾಳಸಂತೆ ಕೋರತನಕ್ಕೆ ಕುಮ್ಮಕ್ಕು ನೀಡುತ್ತಿರುವುದರಿಂದ ದೇಶದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ಕೂಡಲೇ ಬೆಲೆ ಏರಿಕೆ ನಿಯಂತ್ರಣ ಮಾಡಬೇಕು. ರಾಜ್ಯಕ್ಕೆ ಹೆಚ್ಚುವರಿ ಅಕ್ಕಿಯನ್ನು ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯ ದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಲ.ಜಗನ್ನಾಥ್, ಜಿ.ಜಯರಾಂ, ಎನ್.ವಿಜಯ್‌ಕುಮಾರ್, ಸ್ಥಳೀಯ ಸಮಿತಿ ಸದಸ್ಯ ಸುಬ್ರಹ್ಮಣ್ಯ, ಕಾರ್ಮಿಕ ಮುಖಂಡರಾದ ಬಾಲಾಜಿರಾವ್, ಬಂಡಾರಿ, ವರುಣಾ ನಾಗರಾಜ್, ಚಂದ್ರಶೇಖರ, ಕೃಷ್ಣಪ್ಪ, ಚಿಕ್ಕ ಮಂಚಯ್ಯ, ರಾಜೇಗೌಡ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ರಾಜ : "ಮಂತ್ರಿಯವರೇ ಯಾಕೆ ಅವನನ್ನು ಹೊಡೀತಿದ್ದೀರಾ?"
ಮಂತ್ರಿ : "ರಾಜರೇ ಇವನು ನಮ್ಮ ಸೇನಾ ರಹಸ್ಯವನ್ನು ಹೊರಗಡೆ ಹೇಳ್ಬಿಟ್ಟಿದ್ದಾನೆ"
ರಾಜ : "ನಮ್ಮತ್ರ ಸೇನೆಯೇ ಇಲ್ವಲ್ಲ!"
ಮಂತ್ರಿ : "ಅದನ್ನೇ ಹೇಳ್ಬಿಟ್ಟಿದ್ದಾನೆ ಮಹಾರಾಜ!"

ಮೈಸೂರು ಮಿತ್ರ

ಶುಕ್ರವಾರ, 8 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಭಯ ಎಲ್ಲಿ ಕೊನೆಯಾಗುತ್ತದೋ, ಅಲ್ಲಿಂದಲೇ ನಿಜವಾದ ಜೀವನ ಶುರುವಾಗುತ್ತದೆ.. – ಓಶೋ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಜ್ಜಿ ಇಲ್ಲದ ಮನೆ ಮಜ್ಜಿಗೆ ಇಲ್ಲದ ಊಟವಿದ್ದಂತೆ

ನಿಮ್ಮ ಪತ್ರಗಳು

■ ಐದು ಗ್ಯಾರಂಟಿ ತೋರಿಸಿ, ರೈತರ ಹಿತ ಬಲಿ

ಮಾನ್ಯರೆ,

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನರಿಗೆ ಐದು ಗ್ಯಾರಂಟಿಗಳನ್ನು ತೋರಿಸಿ ಇವೆಲ್ಲಕ್ಕೂ ಮಿಗಿಲಾದ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟು ಇಲ್ಲಿನ ರೈತರನ್ನು ಸಂಕಷ್ಟಕ್ಕೆ ದೂಡುತ್ತಿರುವುದು ಎಷ್ಟು ಸರಿ?

ಕಾವೇರಿ ನಮ್ಮ ರಾಜ್ಯದ ಜನತೆಯ ಜೀವನಾಡಿಯಾಗಿದ್ದು, ಮೈಸೂರು, ಮಂಡ್ಯ, ಮದ್ದೂರು, ರಾಮನಗರ, ಕೆಂಗೇರಿ ಹಾಗೂ ಬೆಂಗಳೂರಿಗರಿಗೆ ಕುಡಿಯುವ ನೀರನ್ನು ಒದಗಿಸುವ ಜೀವಜಲವಾಗಿದೆ. ಈ ವರ್ಷ ನಮ್ಮ ರಾಜ್ಯದಲ್ಲಿ ವಾಡಿಕೆಯಷ್ಟು ಮಳೆಯಾಗದೆ ಕೆಆರ್‌ಎಸ್ ಡ್ಯಾಂ ಕೂಡ ಭರ್ತಿಯಾಗಿಲ್ಲ. ಹೀಗಿರುವಾಗ ರಾಜ್ಯದ ಜನತೆಯ ಹಿತವನ್ನು ಕಾಪಾಡಬೇಕಾದ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ನಾಡಿನ ಜನತೆಗೆ ದ್ರೋಹವೆಸಗುತ್ತಿದೆ.

ರಾಜ್ಯದಲ್ಲಿ ಸರಿಯಾಗಿ ಮಳೆಯಾಗಿಲ್ಲದ ಕಾರಣ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಶೇಖರಣೆಯಾಗಿರುವ ನೀರು ಕುಡಿಯಲೂ ಸಾಕಾಗುವುದಿಲ್ಲ. ಹಾಗಾಗಿ ಈ ಬಾರಿ ಬೆಳೆಗೆ ನೀರು ಬಿಡುವುದಿಲ್ಲ. ದನ–ಕರುಗಳಿಗೆ ಹಾಗೂ ಕೆರೆಕಟ್ಟೆ ತುಂಬಿಸುವುದಕ್ಕೆ ಕಟ್ಟು ನೀರು ಬಿಡುವುದಾಗಿ ತಿಳಿಸಿ ಇದೀಗ ಕಾವೇರಿ ಪ್ರಾಧಿಕಾರದ ಆದೇಶದಂತೆ ಪ್ರತಿನಿತ್ಯ 5000 ಕ್ಯೂಸೆಕ್ ನೀರನ್ನು ಕೆಆರ್‌ಎಸ್ ಅಣೆಕಟ್ಟೆಯಿಂದ ಹರಿಸುತ್ತಿದ್ದು, ಇದರಿಂದ ಮಂಡ್ಯ ಮತ್ತು ಮೈಸೂರು ಭಾಗದ ರೈತ ಸಂಘಟನೆಗಳು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದರೂ ನೀರು ಬಿಡುತ್ತಿರುವುದು ಇವರ ಭಂಡತನಕ್ಕೆ ಸಾಕ್ಷಿಯಾಗಿದೆ.

ಕಳೆದ ಬಾರಿ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಸರ್ಕಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಾಜ್ಯದ ರೈತರಿಗಾಗಿ ಮೇಕೆದಾಟು ಯೋಜನೆಯನ್ನು ಶೀಘ್ರ ಜಾರಿಗೊಳಿಸಬೇಕೆಂದು ಮೇಕೆದಾಟುವಿನಿಂದ ಬೆಂಗಳೂರಿನವರೆಗೂ ಪಾದಯಾತ್ರೆ ಕೈಗೊಂಡು ಇದೀಗ ತಾವೇ ಅಧಿಕಾರಕ್ಕೆ ಬಂದಾಗ ರೈತರ ಕಷ್ಟ ಇವರಿಗೆ ಕಾಣುತ್ತಿಲ್ಲವೆ? ರಾಜ್ಯದ ರೈತರ ಹಿತದೃಷ್ಟಿಯಿಂದ ಕಾವೇರಿಯಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸದಿದ್ದರೆ ಮುಂದಿನ ದಿನಗಳಲ್ಲಿ ರೈತರ ಜೊತೆ ನಾಡಿನ ಜನತೆ ಹಾಗೂ ವಿದ್ಯಾರ್ಥಿಗಳು ಹೋರಾಟ ಮಾಡಬೇಕಾದ ಅನಿವಾರ್ಯವೂ ಬರಬಹುದು.

–ನಾರಾಯಣ ಲೋಲಪ್ಪ, ಬಿಜೆಪಿ ಮುಖಂಡರು, ಕ್ಯಾತಮಾರನಹಳ್ಳಿ, ಮೈಸೂರು

■ ರಜೆ ಪಡೆಯದ ಪ್ರಧಾನಿ ಮೋದಿ

ಮಾನ್ಯರೆ,

ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ತಮ್ಮ ಒಂಬತ್ತು ವರ್ಷಗಳ ಆಡಳಿತದಲ್ಲಿ ಒಂದು ದಿನವೂ ರಜೆ ಪಡೆಯದೆ ಇರುವುದು ಆರ್‌ಟಿಐನಲ್ಲಿ ಬಹಿರಂಗಗೊಂಡಿದೆ. ಭ್ರಷ್ಟಾಚಾರ ರಹಿತ, ಪಾರದರ್ಶಕ ಸರ್ಕಾರ, ಮೇಕ್ ಇನ್ ಇಂಡಿಯಾ, ಉದ್ಯೋಗ ಸೃಷ್ಟಿ, ರೈಲ್ವೆ ಉನ್ನತೀಕರಣ, ರೈಲ್ವೆ ನಿಲ್ದಾಣಗಳು, ವಂದೇ ಭಾರತ್, ಉಜ್ವಲ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆ, ಮುದ್ರ ಯೋಜನೆ, ಬೇರೆ ರಾಷ್ಟ್ರಗಳ ಜೊತೆ ಉತ್ತಮ ಸಂಬಂಧ, ಬಲಿಷ್ಠ ಸೇನೆ, 370ನೇ ವಿಧಿ ರದ್ದು, ಭಯೋತ್ಪಾದನೆ ನಿಗ್ರಹ, ಅಯೋಧ್ಯೆ ರಾಮಮಂದಿರ ನಿರ್ಮಾಣ, ಎಕ್ಸ್‌ಪ್ರೆಸ್ ವೇಗಳು, ವಿಮಾನ ನಿಲ್ದಾಣಗಳು, ಪಾಸ್‌ಪೋರ್ಟ್ ಸೇವಾಕೇಂದ್ರಗಳು, ಐಟಿ ಹಬ್, ಡಿಜಿಟಲ್ ಇಂಡಿಯಾ, ಕಿಸಾನ್ ಸಮ್ಮಾನ್ ಯೋಜನೆ ಮೂಲಕ ರೈತರಿಗೆ 6000 ಸಾವಿರ ಇನ್ನೂ ನೂರಾರು ಯೋಜನೆ ತಂದಿರುವ ನಮ್ಮ ಹೆಮ್ಮೆಯ ಪ್ರಧಾನಿಗಳು ಇನ್ನೂ ಸಾಕಷ್ಟು ಯೋಜನೆ ತರಲೆಂದು ಆಶಿಸುತ್ತೇವೆ.

–ಸಂತೋಷ, ಮೈಸೂರು

■ ಇಂಡಿಯಾ ಬದಲು ಭಾರತ ಸರಿಯಾಗಿ ಇದೆ

ಮಾನ್ಯರೆ,

ನಮ್ಮ ದೇಶದ ಹೆಸರನ್ನು ಇಂಡಿಯಾ ಎನ್ನುವುದರ ಬದಲು ಭಾರತ ಎಂದು ಬದಲಿಸಲು ಭಾರತ ಸರಕಾರ ಯೋಚಿಸುತ್ತಿರುವುದು ಸರಿಯಾಗಿಯೇ ಇದೆ. ಸಿಂಧೂ ಸಂಸ್ಕೃತಿಯನ್ನು ಇಂಡಸ್ ಎಂದು ಪಾಶ್ಚಾತ್ಯರು ಹೆಸರಿಸಿ ನಂತರ ಅದರ ಮುಂದುವರೆದ ಭಾಗವಾಗಿ ದೇಶಕ್ಕೆ ಇಂಡಿಯಾ ಎಂದು ಹೆಸರಿಸಿದ್ದು ನಾವು ಇಟ್ಟುಕೊಂಡಿದ್ದ ಹೆಸರಲ್ಲ. ಭಾರತಕ್ಕೆ ಆಂಗ್ಲರ ಆಡಳಿತ ಬರುವ ಮುನ್ನ ಈ ದೇಶವನ್ನು ಇಂಡಿಯಾ ಎಂದು ಕರೆಯುತ್ತಿದ್ದುದರ ಬಗೆಗೆ 5000 ವರ್ಷಗಳ ಇತಿಹಾಸವಿರುವ ಯಾವುದೇ ಸಾಹಿತ್ಯಿಕ ಗ್ರಂಥದಲ್ಲಾಗಲಿ ಯಾವುದೇ ಶಿಲಾ ಶಾಸನಗಳಲ್ಲಾಗಲೀ ಎಲ್ಲೂ ಉಲ್ಲೇಖವಿಲ್ಲ. ಆಂಗ್ಲರು ತಮ್ಮ ನಾಲಗೆ ಹೊರಳದ ಸಂಕಟಕ್ಕೆ ಭಾರತದ ಹಲವಾರು ರಾಜ್ಯ, ಜಿಲ್ಲೆ ಊರು ಮತ್ತು ಭಾಷೆಗಳ ಹೆಸರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಉಚ್ಚರಿಸಿ ಅದನ್ನು ನಮ್ಮ ಮೇಲೂ ಹೇರಿದರು. ಗುಲಾಮರಾಗಿದ್ದ ನಾವು ಅದನ್ನು ಭಯ, ಪ್ರತಿಭಟಿಸಲಾಗದ ಅಸಹಾಯಕತೆ ಕಾರಣಕ್ಕೆ ಪ್ರಸಾದವೆಂದೇ ಸ್ವೀಕರಿಸಿದೆವು. ಸಂಸ್ಕೃತವನ್ನು ಸಾನ್ಸ್ಕ್ರಿಟ್, ಕನ್ನಡವನ್ನು ಕೆನರಾ, ತಮಿಳನ್ನು ಟ್ಯಾಮಿಲ್, ಕೊಡಗನ್ನು ಕೂರ್ಗ್, ಮಡಿಕೇರಿಯನ್ನು ಮರ್ಕೆರಾ, ಕಲ್ಕತ್ತಾವನ್ನು ಕ್ಯಾಲ್ಕಟ್, ಕಲ್ಲಿಕೋಟೆಯನ್ನು ಕ್ಯಾಲಿಕಟ್, ತಿರುಚ್ಚೂರನ್ನು ಟ್ರಿಶೂರ್, ತಿರುವನಂತಪುರವನ್ನು ಟ್ರಿವೇಂಡ್ರಮ್, ದೆಹಲಿಯನ್ನು ಡೆಲ್ಲಿ ಎಂದರು. ನಮ್ಮ ಸುಂದರ ಬೆಂಗಳೂರು ಬ್ಯಾಂಗಲೂರ್ ಆಗಿತ್ತು. ಮಂಗಳೂರನ್ನು ಮ್ಯಾಂಗಲೋರ್ ಎಂದು, ಬೊಂಬಾಯಿಯನ್ನು ಬಾಂಬೆ ಎಂದೂ ಬದಲಿಸಿ ಅಧ್ವಾನ ಮಾಡಿದರು. ಸ್ವಾತಂತ್ರ್ಯ ಬಂದ ಮೇಲೂ ಆ ಶಬ್ದಗಳಿಗೆ ಹೊಂದಿಕೊಂಡಿದ್ದ ನಾವು ಬಹು ವರ್ಷಗಳು ಆ ಶಬ್ದಗಳನ್ನೇ ಮುಂದುವರೆಸಿದೆವು. ಆದರೆ ನಮ್ಮತನದ ಅರಿವು ತಡವಾಗಿ ಆಗಿ, ಹೆಚ್ಚಿನವು ಮುಂಚಿನ ಹೆಸರಿಗೆ ಬಂದಿವೆ. ಇನ್ನೂ ಕೆಲವು ಬರುತ್ತಿವೆ.

ಮತ್ತೆ ಕೆಲವು ರಾಜ್ಯ ಊರಿನ ಹೆಸರುಗಳನ್ನು ನಮ್ಮತನ ಇಲ್ಲ ಎಂಬ ಕಾರಣಕ್ಕೆ ನಾವು ಬದಲಿಸಿಕೊಂಡಿದ್ದೇವೆ. ಮದ್ರಾಸ್ ಈಗ ಚೆನ್ನೈ ಆಗಿದೆ. ಮದ್ರಾಸ್ ರಾಜ್ಯ ಈಗ ತಮಿಳುನಾಡು ಆಗಿದೆ. ಮೈಸೂರು ರಾಜ್ಯ ಕರ್ನಾಟಕವಾಗಿದೆ. ಬಾಂಬೆ ಈಗ ಮುಂಬಯಿಯಾಗಿದೆ. ಇತ್ತೀಚಿನ ಉದಾಹರಣೆ ಕೊಡುವುದಾದರೆ ಕೇರಳವನ್ನು ಕೇರಳಂ ಎಂದು ಬದಲಿಸಿಕೊಳ್ಳಲು ಆ ರಾಜ್ಯ ತಿದ್ದುಪಡಿ ತರುತ್ತಿದೆ. ಹೀಗಿರುವಾಗ ಇಂಡಿಯಾ ಎಂಬ ಸಂಬಂಧವಿಲ್ಲದ ಶಬ್ದವನ್ನು ತೆಗೆದು ಭಾರತ್ ಎಂದು ನಮ್ಮ ತಪ್ಪನ್ನು ಸರಿಪಡಿಸಿಕೊಳ್ಳುವುದರಲ್ಲಿ ತಪ್ಪೇನಿದೆ. ಇದಕ್ಕೆ ರಾಜಕೀಯ ಪಕ್ಷಗಳು ಕೆಂಡಾಮಂಡಲವಾಗಬೇಕಾದ ಪ್ರಸಂಗವೇನಿದೆ. ರಾಷ್ಟ್ರೀಯ ಹಬ್ಬಗಳಲ್ಲಿ ಜೈ ಭಾರತ್, ಭಾರತ್ ಮಾತಾಕಿ ಜೈ ಎಂದು ಹೇಳುವ ನಾವು ಎಂದಾದರು ಇಂಡಿಯಾ ಮಾತಾಕಿ ಜೈ ಎಂದು ಹೇಳುತ್ತಿದ್ದೇವೆಯೆ? ವಿಷಯ ಇಷ್ಟು ಸರಳವಾಗಿರುವಾಗ ಇಂಡಿಯಾ ಎಂಬ ಹೆಸರನ್ನು ಭಾರತವೆಂದು ಬದಲಿಸಲು ಸ್ವಾತಂತ್ರ್ಯ ಬಂದ 74 ವರ್ಷಗಳಷ್ಟು ದೀರ್ಘ ಅವಧಿಯನ್ನು ತೆಗೆದುಕೊಂಡ ನಮ್ಮ ಸರಕಾರಗಳನ್ನು ದೂಷಿಸಬೇಕೇ ಹೊರತು, ಸ್ವಾಭಿಮಾನವನ್ನು ಮರೆತು ಇಂಡಿಯಾ ಎಂದೇ ಇರಬೇಕು ಎಂಬ ಎಂಜಲು ಶಬ್ದಕ್ಕೆ ಅಂಟಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅಧಿಕಾರದಲ್ಲಿ ಯಾರೇ ಇರಲಿ ಈಗಲಾದರೂ ಸರಕಾರಕ್ಕೆ ಮತ್ತು ಭಾರತೀಯರಿಗೆ ಜ್ಞಾನೋದಯವಾಯಿತಲ್ಲ ಎಂದು ಸಂತೋಷ ಪಡಬೇಕಿದೆ. ಇದರಲ್ಲಿ ದಯಮಾಡಿ ರಾಜಕೀಯ ಬೇಡ. ಆದರೆ ಆತ್ಮವಿಮರ್ಶೆ ಇರಲಿ. ಜೈ ಕರ್ನಾಟಕ ಮಾತಾ, ಜೈ ಭಾರತ ಮಾತಾ.

–ದೊಡ್ಡಕಮರವಳ್ಳಿ ಸಿದ್ದಲಿಂಗಪ್ಪ, ಮೈಸೂರು.

ಭಾರತವೇ ಹೊರತು ಇಂಡಿಯಾ ಅಲ್ಲ...

ಪ್ರೊ. ಹೆಚ್.ಆರ್.ಧನಂಜಯ ಕುಂತಿಬೆಟ್ಟ
email: dhanu06874@gmail.com



ನಮ್ಮ ದೇಶದ ಹೆಸರನ್ನು ಭಾರತ ಎಂದು ಬದಲಾಯಿಸುವ ಸಂಭವವಿದೆ ಎಂಬ ಹಿನ್ನೆಲೆಯಲ್ಲಿ ಈ ವಿಷಯ ಭಾರಿ ಚರ್ಚೆಗೆ ಗ್ರಾಸವಾಗಿದೆ. ಅದರಲ್ಲೂ ರಾಜಕೀಯ ರಂಗದಲ್ಲಿ. ಈ ಹಿನ್ನೆಲೆಯಲ್ಲಿ ಇಂಡಿಯಾ, ದಟ್ ಈಸ್ ಭಾರತ್ – ಹೆಸರಲ್ಲೇನಿದೆ?

ಭಾರತವೋ, ಇಂಡಿಯಾವೋ ಹೆಸರಲ್ಲೇನಿದೆ ಎಂದು ಕೇಳಬಹುದು. ಹೆಸರಿನಲ್ಲಿ ಏನಿಲ್ಲ? ಎಲ್ಲವೂ ಇದೆ!. ನಮ್ಮ ಹಿರಿಯರು ನಮ್ಮ ರಾಷ್ಟ್ರಕ್ಕಾಗಲೀ, ವಿವಿಧ ಭೂಪ್ರದೇಶ, ನಗರಗಳಿಗಾಗಲೀ ಸುಖಾಸುಮ್ಮನೆ ಹೆಸರಿಟ್ಟಿಲ್ಲ. ಹೆಸರು ಇಡೋದಕ್ಕೂ ಒಂದು ಅರ್ಥವಿತ್ತು, ಪೌರಾಣಿಕ ಹಿನ್ನೆಲೆ ಇತ್ತು, ಭವ್ಯ ಇತಿಹಾಸವಿತ್ತು.

ನಮ್ಮ ದೇಶಕ್ಕೆ ಜಂಬೂದ್ವೀಪ (ಇದರ 9 ಭಾಗಗಳಲ್ಲಿ ಅವಿಭಜಿತ ಭಾರತವು ಒಂದು ಭಾಗ! ನಮ್ಮ ಕಾವ್ಯ ಪುರಾಣಗಳಲ್ಲಿ ಜಂಬೂದ್ವೀಪದ ಉಲ್ಲೇಖಗಳೇ ಹೆಚ್ಚು!), ಭರತವರ್ಷ, ಭರತ ಖಂಡ, ಆರ್ಯಾವರ್ತ, ಅಜನಾಭವರ್ಷ, ಹಿಂದೂಸ್ಥಾನ, ಭಾರತ ಮತ್ತು ಗ್ರೀಕ್/ಆಂಗ್ಲರು ಕೊಟ್ಟ ಹೆಸರಾದ ಇಂಡಿಯಾ ಎಂಬ ಹೆಸರುಗಳಿವೆ.

ಭಾರತ ಪ್ರತಿಪಾದನೆ...

- ಈ ಭಾರತ ಎನ್ನುವ ಪದವೇ ಅದ್ಭುತ!. ಮಹಾಭಾರತಕ್ಕಿಂತ ಮೊದಲೇ ಇತ್ತು ಭಾರತ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನನ್ನು ಕುರಿತು ಹೇಳುತ್ತಾನೆ – ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ... ಇಲ್ಲಿ ಭಾರತ ಎಂದರೆ ಭರತವಂಶದ ಕುಡಿ ಎಂಬ ಅರ್ಥ..
- ಋಷಭದೇವನ ಮಗ ಭರತ ಚಕ್ರವರ್ತಿ ಆಳಿದ ಭೂಮಂಡಲವೇ ಭಾರತ ಎಂಬುದು ವಿಷ್ಣು ಪುರಾಣ, ವಾಯು ಪುರಾಣ, ಬ್ರಹ್ಮಾಂಡ ಪುರಾಣ ಮತ್ತು ಭಾಗವತದಲ್ಲಿ ಇದೆ.
- ಅತ್ಯಂತ ಪುರಾತನವಾದ ಋಗ್ವೇದದ ಒಂದನೇ ಮಂಡಲದಲ್ಲಿ ಹೀಗಿದೆ– ಭಾರತೀ ಇಳೇ ಸರಸ್ವತಿ ಯಾ ವಃ ಸರ್ವಾ ಉಪಬ್ರುವೇ.... ಎನ್ನುತ್ತದೆ. ನಾಲ್ಕನೇ ಮಂಡಲದ ಋಕ್ಕಲ್ಲಿ ತಸ್ಮಾ ಅಗ್ನಿರ್ಭಾರತ: ಎಂಬಲ್ಲಿ ಭಾರತಿಯನ್ನೇ ಭಾರತ ಎನ್ನಲಾಗಿದೆ. ಭಾ ಎಂದರೆ ಸೂರ್ಯನನ್ನು ಕುರಿತದ್ದಾಗಿದೆ, ಭಾರತ ಎನ್ನುವುದು ಪ್ರಭೆಯನ್ನು ಸೂಚಿಸುತ್ತದೆ. ಸೂರ್ಯನ ಶಕ್ತಿ ಭೂಮಿಗೆ ಆವಶ್ಯಕ ಅದಿಲ್ಲದೆ ಜೀವಿಗಳಿಲ್ಲ. ಹಾಗೆಯೇ ಸೂರ್ಯ ಜ್ಞಾನದ ಪ್ರತೀಕ. ಇಂತಹ ಶಕ್ತಿಯೇ ಭಾರತ!. ಅಂದರೆ ಜಗತ್ತಿಗೇ ಬೆಳಕು ಕೊಡುವ ಭಾರತ, ಎಷ್ಟೊಂದು ಸುಂದರ ಹೆಸರು ಅಲ್ಲವೆ?.
- ಋಗ್ವೇದದ ಪ್ರಕಾರ, ಭಾರತ ಎಂಬ ಜನಸಮುದಾಯವೂ ಇತ್ತು ಎಂಬುದು ತಿಳಿದುಬರುತ್ತದೆ.
- ವಿಷ್ಣು ಪುರಾಣದಲ್ಲಿ ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಂ। ವರ್ಷಂ ತತ್ ಭಾರತಂ ನಾಮ ಭಾರತೀ ಯತ್ರ ಸಂತತಿ: ॥ ಅಂದರೆ– ಸಾಗರದಿಂದ ಉತ್ತರಕ್ಕೆ ಮತ್ತು ಹಿಮಾಲಯದಿಂದ ದಕ್ಷಿಣಕ್ಕೆ ಇರುವ ಭೂಮಿಗೆ "ಭಾರತ" ಎಂದು ಹೆಸರು. ಇದರ ಮಕ್ಕಳೇ ಭಾರತೀಯರು.
- ಬ್ರಹ್ಮಾಂಡ ಪುರಾಣದಲ್ಲಿ ಉದ್ಧರಿಸಿದಂತೆ ಪೃಥಿವ್ಯಾಂ ಭಾರತಂ ವರ್ಷಂ ಕರ್ಮಭೂಮಿರುದಾಹೃತಾ –ಅಂದರೆ– ಜಗತ್ತಿನಲ್ಲಿ ಭಾರತವೇ ಕರ್ಮಭೂಮಿ ಎಂದು ತಿಳಿಯಲ್ಪಡುತ್ತದೆ.
- ಮಹಾಭಾರತದಲ್ಲಿ ಹೇಳಿದಂತೆ ಅತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ.. ಅಂದರೆ, ಜಂಬೂದ್ವೀಪವೆಂಬ ಜಗತ್ತಿನ ಭಾಗದಲ್ಲಿ ಭಾರತವು ಶ್ರೇಷ್ಠವಾದ ದೇಶವು.... ಇನ್ನೂ ಹಲವು ಪುರಾಣಗಳಲ್ಲಿ ಜಂಬೂದ್ವೀಪ, ಹಿಂದುಸ್ತಾನ, ಭರತವರ್ಷ ಮತ್ತು ಭಾರತದ ಬಗ್ಗೆ ವಿವರಣೆ ಸಿಗುತ್ತದೆ. ಜಂಬೂದ್ವೀಪ ಎಂಬ ಉಲ್ಲೇಖವು ಥೈಲ್ಯಾಂಡ್, ಮಲೇಷ್ಯಾ, ಕಾಂಬೋಡಿಯಾ, ಇಂಡೋನೇಷ್ಯಾ ಮುಂತಾದ ದೇಶಗಳಲ್ಲಿ ಈಗಲೂ ಬಳಕೆಯಲ್ಲಿವೆ. ಒಂದು ಕಾಲದಲ್ಲಿ ಬಹುತೇಕ ಪೂರ್ವಾರ್ಧಗೋಲದಲ್ಲೆಲ್ಲಾ ಆರ್ಯ ಸಂಸ್ಕೃತಿ ಹರಡಿತ್ತೆಂದು ಚರಿತ್ರೆಯಿಂದ ತಿಳಿದುಬರುತ್ತದೆ.
- ಸುಮಾರು 7000 ವರ್ಷಗಳ ಇತಿಹಾಸ ಹೊಂದಿರುವ ಉನ್ನತ ಆದರ್ಶ ಸಾಮಾಜಿಕ ಸಮಾನತೆ ಹೊಂದಿದ್ದ ವಿಶ್ವವೇ ಒಂದು ರಾಷ್ಟ್ರ ಎಂದು ಭಾವಿಸಿದ್ದ ಜಗತ್ತಿನ ಏಕೈಕ ಪುರಾತನ ಸಂಸ್ಕತಿಯೇ 'ಭಾರತೀಯ ಸಂಸ್ಕೃತಿ'.
- ಭಾ ಅಂದರೆ ಜ್ಞಾನ, ರತ ಎಂದರೆ ಆಸಕ್ತನಾಗುವವ. ಅಲ್ಲದೆ ರತ ಎಂದರೆ ಸಂಪೂರ್ಣ ಸತ್ಯ ಎಂದೂ ಹೇಳಬಹುದು, ಅಂದರೆ ಜ್ಞಾನ ಮತ್ತು ಸತ್ಯದಲ್ಲಿ ಆಸಕ್ತನಾಗಿರುವವರು ಇರುವ ಪ್ರದೇಶವೇ ಭಾರತ, ಆಸಕ್ತರಾಗಿರುವವರೇ ಭಾರತೀಯರು.
- ಭಾರತ ಎಂದರೆ 'ಸತ್ಯದ ರಕ್ಷಕ' ಎಂದೂ ಅರ್ಥೈಸುವುದುಂಟು. ಸತ್ಯಮೇವ ಜಯತೆ ಎನ್ನುವುದು ಭಾರತದ ಧ್ಯೇಯವಾಕ್ಯವಲ್ಲವೆ?.
- ಭಾರತ ಎಂದರೆ ಭಾವ–ರಾಗ –ತಾಳ! ಎಲ್ಲ ವೈವಿಧ್ಯತೆಯ ನಡುವೆಯೂ ನಮ್ಮೆಲ್ಲರ ಭಾವ ಒಂದೇ! ರಾಗ ಒಂದೇ!!, ತಾಳ ಒಂದೇ!!!. ಅದಕ್ಕೇ ನಾವು ಭಾರತೀಯರು!.
- ಭರತ ಎಂದರೆ ಉಕ್ಕುವುದು, ಅಂದರೆ ಯಾವ ಪ್ರದೇಶದಲ್ಲಿ ಜ್ಞಾನ ಸಂಸ್ಕೃತಿ ಉಕ್ಕಿ ಹರಿಯುತ್ತಿತ್ತೋ ಅದು ಭಾರತ.
- ಈ ಭರತಖಂಡದಲ್ಲಿ ಹಿಂದೆ ಹಲವಾರು ಸ್ವತಂತ್ರ ರಾಜರುಗಳು ಆಳುತ್ತಿದ್ದರೂ ಭರತಖಂಡ ಒಂದೇ ರಾಷ್ಟ್ರವೆನಿಸಿತ್ತು. ನಾನಾ ರಾಜ್ಯಗಳ ಜನರ ಸಂಸ್ಕೃತಿ, ವಿಚಾರ, ನಂಬಿಕೆ ಇವುಗಳಲ್ಲಿ ಏಕಸೂತ್ರತೆ ಸ್ಥಿರವಾಗಿ ನೆಲೆಸಿತ್ತು ಹಾಗಾಗಿ ಈ ಸಮುದಾಯ ಹೊಂದಿರುವ ಈ ನೆಲ ಒಂದು ರಾಷ್ಟ್ರ, ಭಾರತ ರಾಷ್ಟ್ರ.
- ಮಾತಾ ಭೂಮಿ: ಪುತ್ರೋಹಂ ಪ್ರಥಿವ್ಯಾ:–ಅಂದರೆ ಈ ಭೂಮಿ ನಮಗೆ ತಾಯಿ. ನಾವು ಅವಳ ಮಕ್ಕಳು ಎಂಬುದಾಗಿ ತಾಯಿ ಭಾರತಿಯನ್ನು ಪೂಜಿಸುವವರು ನಾವು.
- ಶ್ರೀ ರಾಮ ಎಂದಂತೆ ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ (ತಾಯಿ ಮತ್ತು ಮಾತೃಭೂಮಿ ನಮಗೆ ಸ್ವರ್ಗ ಕ್ಕಿಂತ ದೊಡ್ಡದು) ಎಂದು ನಂಬಿ ಆಚರಿಸುವ ಭಾರತೀಯರು ನಾವು.

ಇಂಡಿಯಾ ಪ್ರತಿಪಾದನೆ...

ಭಾರತದ ಉತ್ತರದಲ್ಲಿ ಹರಿಯುವ ಸಿಂಧು ನದಿಗೆ ಪರ್ಷಿಯನ್ನರು ಹಿಂದು ಎಂದರೆ ಗ್ರೀಕರು hindus ಎಂಬಲ್ಲಿ h ತೆಗೆದು Indus ಎಂದರು ಮತ್ತು ನಂತರ ರೋಮನ್ ಮತ್ತು ಬ್ರಿಟಿಷರು ಇಡೀ ಭಾರತ ಉಪಖಂಡದ ಜನರನ್ನು ಇಂಡಿಯನ್ಸ್ ಎಂದು ಕರೆದು, ಈ ಭೂ ಭಾಗವನ್ನು 'ಇಂಡಿಯಾ' ಎಂದು ಕರೆದರು. ಅಂದರೆ ಸಿಂಧು–ಇಂಡಸ್ ನದಿಬಯಲಲ್ಲಿ ವಾಸಿಸುವ ಜನ – ಅಷ್ಟೇ ಇಂಡಿಯಾ ಹೆಸರಿನ ಅರ್ಥ!. ಇದನ್ನೇ ಭಾರತ ಸ್ವಾತಂತ್ರ್ಯವಾದಾಗ ನಮ್ಮ ನವರಾಷ್ಟ್ರ ನಿರ್ಮಾತೃಗಳು ಒಪ್ಪಿ 'ಇಂಡಿಯಾ', ದಟ್ ಈಸ್ 'ಭಾರತ್' ಎಂದು ಹೆಸರಿಟ್ಟರು!.

ಹೀಗೆ ಭಾರತ ಎಂಬುದು ನಮ್ಮ ಧರ್ಮ, ಸಂಸ್ಕೃತಿ, ಪೌರಾಣಿಕ, ಇತಿಹಾಸ, ಹಿರಿಮೆ, ಗರಿಮೆ, ಪ್ರಾಚೀನತೆಯನ್ನು ಪ್ರತಿನಿಧಿಸುತ್ತದೆ ಮತ್ತು ಅದಕ್ಕೆ ಐದು ಸಾವಿರದಿಂದ ಹತ್ತು ಸಾವಿರ ವರ್ಷಗಳ ಇತಿಹಾಸವಿದೆ!. ಆದರೆ, 'ಇಂಡಿಯಾ' ಎಂಬುದು ಪರಕೀಯರ ಭಾಷೆಯಲ್ಲಿ ಒಂದು ನದಿ ಪ್ರದೇಶವನ್ನು ಪ್ರತಿನಿಧಿಸುತ್ತದೆ!. ಹೀಗೆ ಇಂಡಿಯಾ ಎಂಬುದು ಅರ್ಥವಿಲ್ಲದ ಅಪ್ರಸ್ತುತವಾದ, ಇತ್ತೀಚಿನ ಗುಲಾಮಿ ಸಂಕೇತದ ಹೆಸರಾದರೆ ಭಾರತ ಎಂಬುದು ಪ್ರಾಚೀನವಾದ, ವಿಶಾಲ ಅರ್ಥದ ಅದ್ಭುತ ಹೆಸರು!. ಸ್ವಾತಂತ್ರ್ಯ ನಂತರವಾದರೂ ನಮ್ಮ ದೇಶದ ಹೆಸರನ್ನು ಮೊದಲಿನಂತೆ ಭಾರತ ಎಂದು ಬದಲಾಯಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಆದರೆ ಆ ಆಶಾಭಾವನೆ ಇಲ್ಲ. ಈಗ ಬದಲಾಯಿಸಲು ಹೋದರೆ ಅದಕ್ಕೆ ಕೋಮು ಬಣ್ಣ ಬಳಿದು ಗಲಾಟೆ ಮಾಡಬಹುದು!. ಭಾರತದ ಸ್ವಾತಂತ್ರ್ಯ ಚಳುವಳಿಯ ಒಕ್ಕೊರಲ ದೇಶಭಕ್ತಿಯ ಘೋಷಣೆಗಳಾದ 'ಭಾರತ್ ಮಾತಾ ಕೀ ಜೈ', 'ವಂದೇಮಾತರಂ' ಎಂಬುದೂ ಈಗ ಜಾತ್ಯಾತೀತೆಗೆ ವಿರುದ್ಧ ಎಂಬಂತಹ ಬಲವಾದ ಸಿದ್ಧಾಂತ ಶುರುವಾಗಿದೆಯಲ್ಲ!. ಅನಿವಾರ್ಯವಾಗಿ ನಾವು ಇಂಡಿಯಾ ಎಂಬ ಹೆಸರಿಗೆ ಒಗ್ಗಿ ಹೋಗಿದ್ದೇವೆ. ಇರಲಿ, ನಾವು ಇಂಡಿಯಾ ಎಂದರೆ ಭಾರತ ಎಂದೇ ತಿಳಿದು ದೇಶದ ಬಗ್ಗೆ ಹೆಮ್ಮೆ ಪಡೋಣ. ಆದರೂ ಭಾರತ ಎಂದು ಮರುನಾಮಕರಣ ಆಗುತ್ತೆ ಎಂಬ ಒಂದು ಸಣ್ಣ ಆಸೆ ಇನ್ನೂ ಇದೆ. ಆದರೆ ಕುವೆಂಪುರವರು ಬರೆದಿರುವುದು **"ಜಯ ಭಾರತ ಜನನಿಯ ತನುಜಾತೆ"** ಎಂದೇ ಹೊರತು ಇಂಡಿಯಾ ಪದವನ್ನು ಎಲ್ಲೂ ಬಳಸಿಲ್ಲ.

ಪಿಎಂ ಇ-ಬಸ್ ಸೇವಾ ಯೋಜನೆಯಡಿ ಮೈಸೂರಿಗೆ ಬರಲಿದೆ

200 ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್

- **ಮೈಸೂರು ಸೇರಿ ದೇಶದ 169 ನಗರಗಳು ಯೋಜನೆ ವ್ಯಾಪ್ತಿಗೆ**
- **10 ವರ್ಷ ಎಲೆಕ್ಟ್ರಿಕ್ ಬಸ್ ನಿರ್ವಹಣೆ: ಹೈಟೆಕ್ ಸೌಲಭ್ಯ**
- **ಮೈಸೂರಿನ ಹಳೆಯ ಬಸ್‌ಗಳಿಗೆ ಹಂತ ಹಂತವಾಗಿ ಗುಡ್‌ಬೈ**

● ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.7– ಕೇಂದ್ರ ಸರ್ಕಾರದ ಮಹದುದ್ದೇಶಿತ ಮಾಲಿನ್ಯ ಮುಕ್ತ, ಪರಿಸರ ಸ್ನೇಹಿ ಬಸ್‌ಗಳನ್ನು ಪರಿಚಯಿಸುವ ಪಿಎಂ ಇ-ಬಸ್ ಸೇವಾ ಯೋಜನೆಗೆ ಮೈಸೂರು ಸೇರ್ಪಡೆಯಾಗಿದೆ. ಈ ಯೋಜನೆಯಿಂದ ಮೈಸೂರಿಗೆ 200 ಎಲೆಕ್ಟ್ರಿಕ್ ಬಸ್‌ಗಳು ದೊರೆಯುತ್ತಿವೆ. ಇದರಿಂದ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಬಸ್‌ಗಳ ಕೊರತೆ ನೀಗಲಿದ್ದು, ಪ್ರಯಾಣಿಕರಿಗೆ ಗುಣಮಟ್ಟದ ಸಾರಿಗೆ ಸೌಕರ್ಯ ದೊರೆಯಲಿದೆ.

ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯವಿಲ್ಲ ಈಗಲೂ ಕೂಡ ಬಹಳಷ್ಟು ಹಳ್ಳಿಗಳಿಗೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೆ ಜನರು ಪರದಾಡುವ ಪರಿಸ್ಥಿತಿ ಇದೆ. ಗ್ರಾಮೀಣ ಭಾಗದಲ್ಲಿ ಸಂಚರಿಸುವ ಬಹಳಷ್ಟು ಬಸ್‌ಗಳು ಹಳೆಯದಾಗಿರುವ ಕಾರಣ ಹಾಗಾಗ್ಗೆ ಕೆಟ್ಟು ನಿಲ್ಲುತ್ತವೆ. ಕೆಲವು ಬಸ್‌ಗಳಲ್ಲಂತೂ ಸೀಟ್‌ಗಳು ಪ್ರಯಾಣಿಕರು ಕೂರಲು ಯೋಗ್ಯವಲ್ಲದ ರೀತಿಯಲ್ಲಿರುತ್ತವೆ.

ಶಕ್ತಿ ಯೋಜನೆ ಜಾರಿಯಾದ ಮೇಲಂತೂ ಬಹುತೇಕ ಎಲ್ಲಾ ಬಸ್‌ಗಳು ಪ್ರಯಾಣಿಕರಿಂದ ತುಂಬಿರುತ್ತವೆ. ಪ್ರಯಾಣಿಕರ ಸಂಖ್ಯೆಗೆ ತಕ್ಕಂತೆ ಬಸ್‌ಗಳಿಲ್ಲ. ಈಗ, ಕೇಂದ್ರ ಸರ್ಕಾರದ ಪಿಎಂ ಇ–ಬಸ್ ಸೇವಾ ಯೋಜನೆಯಡಿ ಮೈಸೂರಿಗೆ 200 ಬಸ್‌ಗಳು ದೊರೆಯುತ್ತಿದ್ದು, ಇದರಿಂದ ಸಾರಿಗೆ ಸೌಲಭ್ಯ ಸುಧಾರಿಸುವ ಆಶಾಭಾವ ಮೂಡಿದೆ.

ಗ್ರೀನ್ ಅರ್ಬನ್ ಮೊಬಿಲಿಟಿ ಇನಿಷಿಯೇಟಿವ್‌ನಲ್ಲಿ ಪಿಎಂ ಇ–ಬಸ್ ಸೇವಾ ಯೋಜನೆಯಡಿ ಎಲೆಕ್ಟ್ರಿಕ್ ಬಸ್‌ಗಳು ಬಂದ ನಂತರ ಸಾರಿಗೆ ಸೌಕರ್ಯ ಸಾಕಷ್ಟು ಸುಧಾರಿಸಲಿದೆ. ವಾಯುಮಾಲಿನ್ಯ, ಶಬ್ದಮಾಲಿನ್ಯ ಮುಕ್ತವಾಗುವುದರ ಜೊತೆಗೆ ದುಬಾರಿ ಇಂಧನ ಡೀಸೆಲ್ ಅವಲಂಬನೆಯಿಂದ ಸ್ವಲ್ಪ ಮಟ್ಟಿಗೆ ಮುಕ್ತವಾಗಬಹುದು. ಜೊತೆಗೆ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆ ತಪ್ಪುತ್ತದೆ. ಇತ್ತೀಚೆಗೆ ವಿಶ್ವದಲ್ಲಿ ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಅಭಿವೃದ್ಧಿಹೊಂದಿದ ದೇಶಗಳಂತೆ ಭಾರತದಲ್ಲೂ ಎಲೆಕ್ಟ್ರಿಕ್ ವಾಹನಗಳ ಸಂಚಾರ ಹೆಚ್ಚು ಮಾಡಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ. ಆರಂಭದಲ್ಲಿ ಎಲೆಕ್ಟ್ರಿಕ್ ಸ್ಕೂಟರ್, ಕಾರುಗಳು, ಈಗ ಎಲೆಕ್ಟ್ರಿಕ್ ಬಸ್‌ಗಳನ್ನು ಹೆಚ್ಚಾಗಿ ರಸ್ತೆಗಿಳಿಸಲು ಕೇಂದ್ರ ನಿರ್ಧರಿಸಿದೆ.

ಇದಕ್ಕಾಗಿ ಪಿಎಂ ಇ–ಬಸ್ ಸೇವಾ ಯೋಜನೆ ರೂಪಿಸಿದ್ದು, ಸ್ವಾತಂತ್ರ್ಯ ದಿನಾಚರಣೆ ದಿನದಂದು ದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಯೋಜನೆಯನ್ನು ಘೋಷಣೆ ಮಾಡಿದರು. ಈ ಯೋಜನೆಗೆ ಭಾರತದ 169 ನಗರಗಳು ಆಯ್ಕೆಯಾಗಿದ್ದು, ಅದರಲ್ಲಿ ಮೈಸೂರು ನಗರವೂ ಸೇರ್ಪಡೆಯಾಗಿದೆ.



> ❝ ಮೈಸೂರು ನಗರ ಹಾಗೂ ಗ್ರಾಮಾಂತರಕ್ಕೆ 200 ಎಲೆಕ್ಟ್ರಿಕ್ ಬಸ್‌ಗಳ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಈಗಾಗಲೇ ವರದಿ ನೀಡಲಾಗಿದೆ. ಹೊಸ ಎಲೆಕ್ಟ್ರಿಕ್ ಬಸ್‌ಗಳು ಬಂದರೆ ಹಳೆಯ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗುವುದು. ಆದರೆ ಯಾವ ಯಾವ ಮಾರ್ಗಗಳಿಗೆ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಇನ್ನೂ ನಿರ್ಧಾರ ಮಾಡಿಲ್ಲ.
>
> **– ಶ್ರೀನಿವಾಸ್, ಕೆಎಸ್‌ಆರ್‌ಟಿಸಿ, ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ.**



ಇಡೀ ದೇಶದಲ್ಲಿ 10 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ರಸ್ತೆಗಿಳಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದ್ದು, ಇದಕ್ಕಾಗಿ 57,613 ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಈ ಯೋಜನೆಯಡಿ 10 ವರ್ಷಗಳ ಕಾಲ ಎಲೆಕ್ಟ್ರಿಕ್ ಬಸ್‌ಗಳ ನಿರ್ವಹಣೆಯನ್ನು ಕೇಂದ್ರ ಮಾಡಲಿದೆ. ಹಾಗಾಗಿ ಯೋಜನೆಯಡಿ ಮೈಸೂರಿನಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಸೇವಾ ಸೌಲಭ್ಯ ನಿರಾಯಾಸವಾಗಿ ದೊರೆಯಲಿದೆ.

ಈ ಯೋಜನೆ ಸಾಕಾರಗೊಂಡರೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಎಲೆಕ್ಟ್ರಿಕ್ ಚಾರ್ಜಿಂಗ್ ಯೂನಿಟ್‌ಗಳು ಹೆಚ್ಚಾಗುತ್ತವೆ. ಸ್ವಯಂಚಾಲಿತ ಶುಲ್ಕ ಸಂಗ್ರಹ ವ್ಯವಸ್ಥೆ ಸೇರಿದಂತೆ ಆಧುನಿಕ ತಂತ್ರಜ್ಞಾನದ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಇದರಿಂದ ಸಾರಿಗೆ ವ್ಯವಸ್ಥೆಗೆ ಹೈಟೆಕ್ ಸ್ಪರ್ಶ ದೊರೆಯಲಿದೆ. ಸರ್ಕಾರದ ಸಾರಿಗೆ ನಿಯಮದ ಪ್ರಕಾರ 15 ವರ್ಷ ಮೀರಿದ ಬಸ್‌ಗಳ ಸಂಚಾರಕ್ಕೆ ಅನುಮತಿ ನೀಡುವಂತಿಲ್ಲ. ಈಗ ಮೈಸೂರು ನಗರ ಹಾಗೂ ಜಿಲ್ಲೆಯ ಬಹಳಷ್ಟು ಬಸ್‌ಗಳ ಆಯಸ್ಸು 15 ವರ್ಷವಾಗಿದೆ. ಈಗ ಪಿಎಂ ಇ–ಬಸ್ ಸೇವಾ ಯೋಜನೆಯಡಿ 200 ಎಲೆಕ್ಟ್ರಿಕ್ ಬಸ್‌ಗಳು ದೊರೆತರೆ ಹಳೆಯದಾಗಿರುವ ಅಷ್ಟೇ ಪ್ರಮಾಣದ ಬಸ್‌ಗಳ ಸಂಚಾರವನ್ನು ಸ್ಥಗಿತ ಮಾಡಲು ತೀರ್ಮಾನ ಮಾಡಲಾಗಿದೆ.

ಸದ್ಯಕ್ಕೆ ಮೈಸೂರು ಹಾಗೂ ಬೆಂಗಳೂರು ನಡುವೆ 8 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿವೆ. ಯೋಜನೆಯಡಿ ದೊರೆಯುವ ಎಲೆಕ್ಟ್ರಿಕ್ ಬಸ್‌ಗಳಿಂದ ನಗರ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲೂ ಇದರ ಸೇವೆ ದೊರೆಯಲಿದೆ. ಎಲೆಕ್ಟ್ರಿಕ್ ಬಸ್ ತಯಾರಿಕಾ ಕಂಪನಿಗಳ ಜೊತೆ ಕೇಂದ್ರ ಸರ್ಕಾರ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ. ಇನ್ನೇನು ಕೆಲವೇ ದಿನಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳ ತಯಾರಿಕೆ ಆರಂಭವಾಗಲಿದ್ದು, ಈ ವರ್ಷಾಂತ್ಯದ ವೇಳೆಗೆ ಮೈಸೂರು ಸೇರಿದಂತೆ ಭಾರತದ 169 ನಗರಗಳಿಗೆ ಒಟ್ಟು 10 ಸಾವಿರ ಎಲೆಕ್ಟ್ರಿಕ್ ಬಸ್‌ಗಳು ದೊರೆಯಲಿವೆ. ಈ ಯೋಜನೆಯಿಂದ ಆಟೋಮೊಬೈಲ್ ಕ್ಷೇತ್ರದಲ್ಲಿ ಸಾವಿರಾರು ಜನರಿಗೆ ಉದ್ಯೋಗ ಕೂಡ ದೊರೆಯಲಿದೆ.

ಸರ್ವೆ ನಂಬರ್ ಜಾಗದಲ್ಲಿ ಚರಂಡಿ ನಿರ್ಮಾಣ; ಪ್ರಶ್ನಿಸಿದ್ದಕ್ಕೆ ಕೊಲೆ ಬೆದರಿಕೆ ಸಂಬಂಧ ದೂರು

ಕೃಷ್ಣರಾಜಸಾಗರ, ಸೆ.7–ಇಲ್ಲಿಗೆ ಸಮೀಪದ ಹುಲಿಕೆರೆ ಗ್ರಾಮದಲ್ಲಿ ತಮಗೆ ಸೇರಿದ ಸರ್ವೆ ನಂ.57ರಲ್ಲಿ ಬಸ್ತಿಪುರ ಗ್ರಾಮ ಪಂಚಾಯ್ತಿ ಸದಸ್ಯರಾದ ರಾಮಕೃಷ್ಣ ಮತ್ತು ಶಿವಣ್ಣ ಅವರು ಅಕ್ರಮವಾಗಿ ಚರಂಡಿ ನಿರ್ಮಾಣ ಮಾಡಲು ಪ್ರಯತ್ನಿಸಿದ್ದಾರೆ ಎಂದು ಸಿ.ಶಿವ ಎಂಬುವರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಸರ್ವೆ ನಂಬರ್ ಜಾಗದಲ್ಲಿ ಚರಂಡಿ ನಿರ್ಮಾಣ ಮಾಡುವ ಅಧಿಕಾರ ಗ್ರಾಮ ಪಂಚಾಯ್ತಿಯವರಿಗೆ ಇಲ್ಲ ಎಂದಿರುವ ಅವರು, ಗ್ರಾಪಂ ಸದಸ್ಯರನ್ನು ತಡೆದಾಗ ತಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿದ್ದು, ಅವರನ್ನು ಠಾಣೆಗೆ ಕರೆಸಿ ಸೂಕ್ತ ತಿಳಿವಳಿಕೆ ನೀಡಬೇಕೆಂದು ನೀಡಿದ ದೂರಿಗೆ ಸ್ವೀಕೃತಿ ನೀಡಿರುವ ಕೆಆರ್‌ಎಸ್ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೆ.12ರಿಂದ ಜನಸಂಪರ್ಕ ಸಭೆ

ಮೈಸೂರು,ಸೆ.7(ಪಿಎಂ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಸೆ.12ರಿಂದ 16ರವರೆಗೆ ವಿವಿಧ ದಿನಗಳಂದು ಜನಸಂಪರ್ಕ ಸಭೆಗಳನ್ನು ಹಮ್ಮಿಕೊಳ್ಳಲಾಗಿದೆ. ಸೆ.12ರಂದು ಬೆಳಗ್ಗೆ 11ಕ್ಕೆ ಕೇಂದ್ರ ಕಚೇರಿ, ಮಧ್ಯಾಹ್ನ 3ಕ್ಕೆ ಚಾಮುಂಡಿಪುರಂ, ಸೆ.14ರಂದು ಬೆಳಗ್ಗೆ 11ಕ್ಕೆ ನರಸಿಂಹರಾಜ ಮೊಹಲ್ಲಾ, ಮಧ್ಯಾಹ್ನ 3ಕ್ಕೆ ಜ್ಯೋತಿನಗರ, ಸೆ.16ರಂದು ಬೆಳಗ್ಗೆ 11ಕ್ಕೆ ವರುಣ ಉಪ ವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆಗಳು ನಡೆಯಲಿವೆ ವಿದ್ಯುತ್ ಪೂರೈಕೆ ಸಮಸ್ಯೆಗಳ ಕುರಿತು ಈ ಜನಸಂಪರ್ಕ ಸಭೆಗಳಲ್ಲಿ ಗ್ರಾಹಕರು ಲಿಖಿತ ಅರ್ಜಿ ಸಲ್ಲಿಸಿ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಎನ್.ಆರ್. ಮೊಹಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಸೆ.7–ಮೈಸೂರಿನ ಎನ್‌ಜಿಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಹಯೋಗದಲ್ಲಿ ಸೆ.12ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 99161 55453, 94487 38657 ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷ

ಮೈಸೂರು, ಸೆ.7(ಬಿಎಲ್‌ಯು)– ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷವಾಗಿದ್ದು, ವಾಯುವಿಹಾರಿಗಳು ಆತಂಕಗೊಂಡಿದ್ದಾರೆ. ಕುಕ್ಕರಹಳ್ಳಿ ಕೆರೆಯಲ್ಲಿ ಈ ಹಿಂದೆ ಮೊಸಳೆಗಳು ಪ್ರತ್ಯಕ್ಷವಾಗಿದ್ದವು. ನೀರು ಬಿಟ್ಟು ಏರಿ ಮೇಲೆ ಕಂಡು ಬಂದಿದ್ದ ಮೊಸಳೆಗಳನ್ನು ಅರಣ್ಯ ಇಲಾಖೆಯವರು ಸೆರೆ ಹಿಡಿದಿದ್ದರು.



ಕೆರೆಯಲ್ಲಿ ಮೊಸಳೆಗಳು ಇಲ್ಲ ಎಂದು ವಾಯುವಿಹಾರಿಗಳು ನಿರ್ಭಯವಾಗಿ ವಿಹರಿಸುತ್ತಿದ್ದರು. ಆದರೆ ಈಗ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷವಾಗಿದೆ. ವಾಯುವಿಹಾರಕ್ಕೆ ಬಂದ ವ್ಯಕ್ತಿಯೊಬ್ಬರು ಮೊಬೈಲ್‌ನಲ್ಲಿ ಮೊಸಳೆ ಸಾಗುತ್ತಿರುವ ದೃಶ್ಯ ಸೆರೆ ಹಿಡಿದಿದ್ದಾರೆ. ಮುಂಜಾನೆಯಿಂದ ಸಂಜೆ ತನಕ ಸಾವಿರಾರು ಜನರು ಇಲ್ಲಿ ವಿಹರಿಸುತ್ತಾರೆ. ಮೊಸಳೆ ಏರಿ ಮೇಲೆ ಬಂದು ಯಾರ ಮೇಲಾದರೂ ದಾಳಿ ಮಾಡಿದರೆ ಏನು ಮಾಡುವುದು ಎಂಬ ಭಯ ಈಗ ಕಾಡಲಾರಂಭಿಸಿದೆ. ಅರಣ್ಯ ಇಲಾಖೆಯವರು ಈಗಲೇ ಮೊಸಳೆ ಹಿಡಿದು ಜನರಲ್ಲಿರುವ ಭಯ ಮುಕ್ತಮಾಡಬೇಕೆಂದು ವಾಯುವಿಹಾರಿಗಳು ಆಗ್ರಹಿಸಿದ್ದಾರೆ.

ಸನಾತನ ಧರ್ಮವನ್ನು ಏಡ್ಸ್, ಕುಷ್ಠರೋಗಕ್ಕೆ ಹೋಲಿಸಿದ ಡಿಎಂಕೆ ಸಂಸದ ಎ.ರಾಜಾ

ಚೆನ್ನೈ, ಸೆ.7– ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ತಮಿಳುನಾಡು ಸಿಎಂ ಪುತ್ರ ಹಾಗೂ ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆ ವಿವಾದದ ಬೆನ್ನಲ್ಲೇ ಇದೀಗ ಡಿಎಂಕೆ ಸಂಸದ ಎ. ರಾಜಾ ಅವರು ಸನಾತನ ಧರ್ಮವನ್ನು ಏಡ್ಸ್ ಮತ್ತು ಕುಷ್ಠರೋಗಕ್ಕೆ ಹೋಲಿಕೆ ಮಾಡಿದ್ದಾರೆ.



ಎ.ರಾಜಾ ಚೆನ್ನೈನಲ್ಲಿ ಕೇಂದ್ರ ಸರ್ಕಾರದ ವಿಶ್ವಕರ್ಮ ಯೋಜನೆ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಮಾತನಾಡಿದ ಅವರು, ಸನಾತನ ಧರ್ಮದ ಕುರಿತು ಉದಯನಿಧಿ ಅವರು ಆಡಿರುವ ಮಾತುಗಳು ಬಹಳ ಸೌಮ್ಯವಾದವು. ಅವರು ಮೃದು ಧೋರಣೆ ತೋರಿದ್ದಾರೆ. ಸನಾತನ ಮತ್ತು ವಿಶ್ವಕರ್ಮ ಯೋಜನೆಗಳು ಬೇರೆ ಬೇರೆ ಅಲ್ಲ. ಮಲೇರಿಯಾ ಮತ್ತು ಡೆಂಗ್ಯೂ ರೀತಿಯಲ್ಲಿ ಸಂತಾನ ಧರ್ಮವನ್ನು ತೊಡೆದುಹಾಕಬೇಕು ಎಂದು ಉದಯನಿಧಿ ಬಹಳ ಸೌಮ್ಯವಾಗಿ ಹೇಳಿದ್ದಾರೆ ಎಂದಿದ್ದಾರೆ.

ಡೆಂಗ್ಯೂ ಮತ್ತು ಮಲೇರಿಯಾ ಈ ರೋಗಗಳು ಸಾಮಾಜಿಕ ಕಳಂಕವನ್ನು ಹೊಂದಿಲ್ಲ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಎಚ್‌ಐವಿ ಮತ್ತು ಕುಷ್ಠ ರೋಗವನ್ನು ಅಸಹ್ಯಕರವಾಗಿ ನೋಡಲಾಯಿತು. ಆದ್ದರಿಂದ, ನಾವು ಸನಾತನ ಧರ್ಮವನ್ನು ಎಚ್‌ಐವಿ ಮತ್ತು ಕುಷ್ಠರೋಗದಂತಹ ಸಾಮಾಜಿಕ ದುರವಸ್ಥೆಗಳಿಂದ ಕೂಡಿದ ಕಾಯಿಲೆಗಳಾಗಿ ನೋಡಬೇಕಾಗಿದೆ ಎಂದು ಹೇಳಿದ್ದಾರೆ.

ಯಾರನ್ನಾದರೂ ಕರೆತನ್ನಿ, ನಾನು ಸನಾತನ ಧರ್ಮದ ಬಗ್ಗೆ ಚರ್ಚೆಗೆ ಸಿದ್ಧನಾಗಿದ್ದೇನೆ. ಅವರು ಯಾವುದೇ ರೀತಿಯ ಆಯುಧಗಳನ್ನಾದರೂ ತರಲಿ, ನಾನು ಬರುತ್ತೇನೆ. ದೆಹಲಿಯಲ್ಲಿ ಪೆರಿಯಾರ್ ಮತ್ತು ಅಂಬೇಡ್ಕರ್ ಪುಸ್ತಕಗಳೊಂದಿಗೆ ಚರ್ಚೆ ಮಾಡುತ್ತೇನೆ ಎಂದು ಸವಾಲು ಹಾಕಿದ್ದಾರೆ. ಪ್ರಧಾನಿ ಸಭೆ ಕರೆದರೆ ಮತ್ತು ಅವರು ನನಗೆ ಅನುಮತಿ ನೀಡಿದರೆ ಎಲ್ಲಾ ಕ್ಯಾಬಿನೆಟ್ ಮಂತ್ರಿಗಳಿಗೆ ಉತ್ತರವನ್ನು ನೀಡಲು ನಾನು ಸಿದ್ಧನಿದ್ದೇನೆ. ಸನಾತನ ಧರ್ಮ ಯಾವುದು ಎಂಬುದನ್ನು ನೀವು ನಿರ್ಧರಿಸಿದ ನಂತರ ನಾನು ವಿವರಿಸುತ್ತೇನೆಂದು ಹೇಳಿದ್ದಾರೆ.

ಸನಾತನ ಧರ್ಮ ವಿರೋಧ: ಡಿಎಂಕೆ ನಾಯಕರ ಹೇಳಿಕೆಯನ್ನು ಒಪ್ಪುವುದಿಲ್ಲ ಎಂದ ಕಾಂಗ್ರೆಸ್

ಹೊಸದಿಲ್ಲಿ, ಸೆ.7– ಸನಾತನ ಧರ್ಮದ ವಿರುದ್ಧ ಡಿಎಂಕೆ ನಾಯಕರಾದ ಉದಯನಿಧಿ ಸ್ಟಾಲಿನ್ ಮತ್ತು ಎ.ರಾಜಾ ಅವರ ಟೀಕೆಗಳನ್ನು ಒಪ್ಪುವುದಿಲ್ಲ. ಪಕ್ಷವು ಸರ್ವ ಧರ್ಮಗಳಲ್ಲಿ ಸಮಾನ ನಂಬಿಕೆ ಹೊಂದಿದೆ ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಎಐಸಿಸಿ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಕಾಂಗ್ರೆಸ್ ಯಾವಾಗಲೂ ಸರ್ವಧರ್ಮ ಸಂಭಾವವನ್ನು ನಂಬುತ್ತದೆ, ಇದರಲ್ಲಿ ಪ್ರತಿಯೊಂದು ಧರ್ಮ, ಪ್ರತಿಯೊಂದು ನಂಬಿಕೆಗೂ ತನ್ನದೇ ಆದ ಸ್ಥಳವಿದೆ. ಯಾರೂ ಯಾವುದೇ ನಿರ್ದಿಷ್ಟ ನಂಬಿಕೆಯನ್ನು ಇನ್ನೊಂದು ನಂಬಿಕೆಗಿಂತ ಕಡಿಮೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಸಂವಿಧಾನವು ಇದನ್ನು ಅನುಮತಿಸುವುದಿಲ್ಲ ಅಥವಾ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಈ ಯಾವುದೇ ಹೇಳಿಕೆಗಳನ್ನು ಒಪ್ಪುವುದಿಲ್ಲ ಎಂದರು. ಸಂವಿಧಾನ ಸಭೆಯ ಚರ್ಚೆಗಳು ಮತ್ತು ಭಾರತದ ಸಂವಿಧಾನದಲ್ಲಿ ಅದೇ ತತ್ವಗಳನ್ನು ನೀವು ಕಾಣಬಹುದು. ಕಾಂಗ್ರೆಸ್‌ಗೆ ಸಂಬಂಧಪಟ್ಟಂತೆ ಸಂವಿಧಾನದ ಬಗ್ಗೆ ಮರುಚಿಂತನೆ ಮಾಡಲು ಸಾಧ್ಯವೇ ಇಲ್ಲ ಎಂದಿದ್ದಾರೆ.

ಮೈಸೂರಿನ ಮಂಡಿ ಠಾಣೆ ವ್ಯಾಪ್ತಿಯಲ್ಲಿ 8 ಮಂದಿ ನಾಪತ್ತೆ

ಮೈಸೂರು, ಸೆ.7–ಮೈಸೂರಿನ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 8 ಮಂದಿ ನಾಪತ್ತೆಯಾಗಿರುವ ಬಗ್ಗೆ ಪ್ರಕರಣಗಳು ದಾಖಲಾಗಿವೆ.

ಮಂಡಿ ಮೊಹಲ್ಲಾದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಂಚಮುಖಿ ಗಣಪತಿ ದೇವಸ್ಥಾನದ ಫುಟ್‌ಪಾತ್ ಬಳಿ ಇರುವ ಟೀ ಅಂಗಡಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ನಾರಾಯಣ(48) ಎಂಬಾತ 2022ರ ಮೇ 29ರಂದು ರೈಲಿನಲ್ಲಿ ತಿರುಪತಿಗೆ ತೆರಳಿದವನು ಈವರೆಗೂ ವಾಪಸ್ಸಾಗಿಲ್ಲ ಎಂದು ಈತನ ಅಕ್ಕ ವಿಜಯಲಕ್ಷ್ಮಿ ದೂರು ಸಲ್ಲಿಸಿದ್ದಾರೆ.



ಮೈಸೂರಿನ ಮಿಷನ್ ಆಸ್ಪತ್ರೆ ಬಳಿ ಸ್ಕೂಟರ್ ಮೆಕ್ಯಾನಿಕ್ ಅಂಗಡಿ ಇಟ್ಟುಕೊಂಡಿದ್ದ ನೌಷಾದ್ (38) ಎಂಬಾತ 2023ರ ಮೇ 28ರಂದು ಕುಶಾಲನಗರಕ್ಕೆ ಹೋಗಿ–ಬರುವುದಾಗಿ ತಿಳಿಸಿ ಹೋದವನು ಮತ್ತೆ ವಾಪಸ್ಸಾಗಿಲ್ಲ ಎಂದು ಈತನ ಪತ್ನಿ ಸಬಾನಾ ಬಾನು ದೂರು ಸಲ್ಲಿಸಿದ್ದಾರೆ.



ಮೈಸೂರಿನ ಮೈಂಡ್ಸ್ ಆಸ್ಪತ್ರೆಗೆ (ರಾಮಕೃಷ್ಣ ಆಸ್ಪತ್ರೆ) ಚಿಕಿತ್ಸೆಗಾಗಿ ತನ್ನ ಪುತ್ರ ಸುದೀಪ್(26) ಎಂಬಾತನನ್ನು 2023ರ ಆಗಸ್ಟ್ 7ರಂದು ಕರೆತಂದಿದ್ದು, ತಾನು ವಾಶ್ ರೂಂಗೆ ಹೋಗಿ–ಬರುವುದರೊಳಗಾಗಿ ಆತ ನಾಪತ್ತೆಯಾಗಿದ್ದಾನೆ ಎಂದು ಕೆ.ಆರ್.ಪೇಟೆ ತಾಲೂಕು ರಾಮನಹಳ್ಳಿ ಗ್ರಾಮದ ರವಿಕುಮಾರ್ ದೂರು ಸಲ್ಲಿಸಿದ್ದಾರೆ.



ಮಂಡಿ ಮೊಹಲ್ಲಾದ ಆರ್‌ಎಂಸಿ ಹಿಂಭಾಗವಿರುವ ನಗರ ಪಾಲಿಕೆಗೆ ಸೇರಿದ ಮನೆಯಲ್ಲಿ ವಾಸವಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದ ರಮೇಶ್ ಮೂರ್ತಿ ಅಲಿಯಾಸ್ ಕೇಶವ ಮೂರ್ತಿ (52) ಎಂಬಾತ 2022ರ ಮೇ 6ರಂದು ತಂಗಿಯ ಮನೆಗೆ ಹೋಗುವುದಾಗಿ ತಿಳಿಸಿ ತೆರಳಿದವನು ಮತ್ತೆ ವಾಪಸ್ಸಾಗಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.



ಇದೇ ಠಾಣೆ ವ್ಯಾಪ್ತಿಯ ನೂರುಲ್ಲಾ ಬೇಗ್(55) ಎಂಬಾತ ಕಳೆದ ಮಾರ್ಚ್ 4ರಂದು ತಂಗಿಯ ಮನೆಯಿಂದ ಹೊರ ಹೋದವನು ಮತ್ತೆ ವಾಪಸ್ಸಾಗಿಲ್ಲ ಎಂದು ಈತನ ತಂಗಿ ಪರ್ವಿನ್ ತಾಜ್ ದೂರು ಸಲ್ಲಿಸಿದ್ದಾರೆ.



ಇದೇ ಠಾಣೆ ವ್ಯಾಪ್ತಿಯ ಜಬೀ ಉಲ್ಲಾ ಎಂಬಾತ ಆಗಸ್ಟ್ 1ರಂದು ಬೆಳಗ್ಗೆ ತಂದೆಯಿಂದ 500 ರೂ. ಪಡೆದು ಹೋದವನು ಮತ್ತೆ ಹಿಂತಿರುಗಿಲ್ಲ ಎಂದು ಈತನ ತಂದೆ ಶಫಿ ಉಲ್ಲಾ ದೂರು ಸಲ್ಲಿಸಿದ್ದಾರೆ.



ಮಂಗಳೂರು ಮತ್ತು ಬೆಂಗಳೂರಿನಲ್ಲಿ ಸಂಗೀತ ಕಾರ್ಯಕ್ರಮ ಇದೆ ಎಂದು ಆಗಸ್ಟ್ 30ರಂದು ಮನೆಯಿಂದ ತೆರಳಿದ ಎಸ್. ಲಕ್ಷ್ಮೀ ಕಾಂತ್(27) ಎಂಬಾತ ಮತ್ತೆ ಹಿಂತಿರುಗಿಲ್ಲ ಎಂದು ಈತನ ತಾಯಿ ಆರ್.ಲತಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.



ಗಾರೆ ಕೆಲಸಕ್ಕೆ ಹೋಗುತ್ತೇನೆಂದು ಕಳೆದ ಫೆಬ್ರವರಿ 11ರಂದು ಬೆಳಗ್ಗೆ ಮನೆಯಿಂದ ಹೊರಟ ಪಿ.ನಾಗರಾಜು(49) ಎಂಬಾತ ಮತ್ತೆ ವಾಪಸ್ಸಾಗಿಲ್ಲ ಎಂದು ಈತನ ಪುತ್ರಿ ವಿಜಯದರ್ಶಿನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.



ಈ ವ್ಯಕ್ತಿಗಳ ಬಗ್ಗೆ ಮಾಹಿತಿ ಇರುವವರು ಮಂಡಿ ಠಾಣೆ ದೂರವಾಣಿ ಸಂಖ್ಯೆ 0821–2418513 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಸಮಾಜದಲ್ಲಿ ಸಿವಿಲ್ ಇಂಜಿನಿಯರ್‌ಗಳ ಜವಾಬ್ದಾರಿ ಹೆಚ್ಚು

● ಹಿರಿಯ ಸಿವಿಲ್ ಇಂಜಿನಿಯರ್ ಡಾ.ಎನ್.ಸುರೇಶ್ ● 56ನೇ ಇಂಜಿನಿಯರ್‌ಗಳ ದಿನದ ಪ್ರಯುಕ್ತ ತಾಂತ್ರಿಕ ವಿಚಾರ ಸಂಕಿರಣ

ಮೈಸೂರು,ಸೆ.7(ಪಿಎಂ)– ಸಮಾಜದಲ್ಲಿ ಸಿವಿಲ್ ಇಂಜಿನಿಯರ್‌ಗಳ ಜವಾಬ್ದಾರಿ ವೈದ್ಯರಿಗಿಂತಲೂ ಹೆಚ್ಚು ಎಂದು ಮೈಸೂರಿನ ಫೈರ್ ಸೇಫ್ಟಿ ರಿಸರ್ಚ್ ಫೌಂಡೇಷನ್‌ನ ನಿರ್ದೇಶಕ ಹಾಗೂ ಎನ್‌ಐಇ ಕಾಲೇಜು ಮಾಜಿ ಪ್ರಾಂಶುಪಾಲರೂ ಆದ ಹಿರಿಯ ಸಿವಿಲ್ ಇಂಜಿನಿಯರ್ ಡಾ.ಎನ್.ಸುರೇಶ್ ಹೇಳಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸಂಸ್ಥೆಯ ಮೈಸೂರು ಘಟಕದ ವತಿಯಿಂದ 56ನೇ ಇಂಜಿನಿಯರ್‌ಗಳ ದಿನದ (ಸರ್ ಎಂ.ವಿಶ್ವೇಶ್ವರಯ್ಯ ಅವರ ಜಯಂತಿ, ಸೆ.15) ಪ್ರಯುಕ್ತ 'ಇಂಜಿಯರಿಂಗ್ ಎ ರೆಸಿಲೆಂಟ್ ಫ್ಯೂಚರ್ ; ಬಿಲ್ಡಿಂಗ್ ಸ್ಟ್ರಾಂಗರ್, ಸ್ಮಾರ್ಟರ್, ಸೇಫರ್' ಕುರಿತು ಗುರುವಾರ ಹಮ್ಮಿಕೊಂಡಿದ್ದ ತಾಂತ್ರಿಕ ವಿಚಾರ ಸಂಕಿರಣದಲ್ಲಿ ಅವರು ವಿಚಾರ ಮಂಡಿಸಿದರು.

ಒಬ್ಬ ವೈದ್ಯ ತಪ್ಪು ಮಾಡಿದರೆ ಒಬ್ಬ ರೋಗಿಯಷ್ಟೇ ಸಾವನ್ನಪ್ಪುತ್ತಾನೆ. ಆದರೆ ಒಬ್ಬ ಸಿವಿಲ್ ಇಂಜಿನಿಯರ್ ಕಟ್ಟಡ ನಿರ್ಮಾಣದಲ್ಲಿ ತಪ್ಪು ಮಾಡಿದರೆ ಸಾವು–ನೋವುಗಳ ಸಂಖ್ಯೆ ಅಧಿಕವಾಗುವುದೇ ಹೆಚ್ಚು. ಹಾಗಾಗಿ ವೈದ್ಯರ ತಪ್ಪು ನೆಲದಡಿಯಲ್ಲಿ ಹೂತು ಹೋಗಲಿದೆ. ಆದರೆ ಇಂಜಿನಿಯರ್ ಮಾಡುವ ತಪ್ಪು ಮೂರ್ಖತನದ ಸ್ಮಾರಕವಾಗಿ ಉಳಿಯುತ್ತದೆ ಎಂದು ವಿಶ್ಲೇಷಿಸಿದರು.


ಈ ಹಿಂದೆ ಕಟ್ಟಡ ನಿರ್ಮಾಣದಲ್ಲಿ ಜನತೆ ಅದರ ಸದೃಢತೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಆದರೆ ಈಗ ಅದರೊಂದಿಗೆ ಕಟ್ಟಡದ ಬಾಳಿಕೆಯ ಬಗ್ಗೆಯೂ ಹೆಚ್ಚು ಆಸಕ್ತಿ ವಹಿಸಲಾಗುತ್ತಿದೆ. ಜೊತೆಗೆ ಪ್ರಾಕೃತಿಕ ವಿಕೋಪ ಹಾಗೂ ಮಾನವ ನಿರ್ಮಿತ ವಿಪತ್ತುಗಳಿಗೂ ಜಗ್ಗದೇ ಇರುವಂತಹ ಕಟ್ಟಡ ನಮ್ಮದಾಗಬೇಕೆಂಬುದೂ ಇತ್ತೀಚಿನ ದಿನಗಳಲ್ಲಿ ಜನತೆಯ ಅಪೇಕ್ಷೆಯಾಗಿದೆ ಎಂದರು.

ಇತ್ತೀಚೆಗಿನ ದಿನಗಳಲ್ಲಿ ಕಟ್ಟಡ ನಿರ್ಮಾಣದಲ್ಲಿ ಸೆನ್ಸರ್ ಬಳಕೆ ಮಾಡಲಾಗುತ್ತಿದೆ. ಈ ತಂತ್ರಜ್ಞಾನದ ಮೂಲಕ 20 ಅಥವಾ 30 ವರ್ಷಗಳ ನಂತರ ಕಟ್ಟಡ ಸದೃಢವಾಗಿದೆಯೇ? ಅಥವಾ ಅಪಾಯದಲ್ಲಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬಹುದು. ಹಾಗಾಗಿ ಕಟ್ಟಡದ ಸದೃಢತೆ, ಬಾಳಿಕೆ, ವಿಪತ್ತುಗಳ ಸಂದರ್ಭದಲ್ಲಿ ಅದರ ಸದೃಢತೆ ಒಳಗೊಂಡಂತೆ ಕಟ್ಟಡದ ಸುರಕ್ಷತೆ ಇಂದು ಮುನ್ನೆಲೆಗೆ ಬಂದಿದೆ ಎಂದು ತಿಳಿಸಿದರು.

ನೂರಾರು ರೀತಿಯ ವಿಪತ್ತುಗಳು ಕಟ್ಟಡಗಳಿಗೆ ಹಾನಿಯುಂಟು ಮಾಡುತ್ತವೆ. ಬೆಂಕಿ ಅವಘಡ, ಭೂಕಂಪನ, ಸುನಾಮಿ, ಜ್ವಾಲಾಮುಖಿ ಸ್ಫೋಟ ಮತ್ತು ಪ್ರವಾಹ ಅವುಗಳಲ್ಲಿ ಪ್ರಮುಖವಾದವು ಎಂದರು. ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸಂಚಾಲಕ ಎ.ಎಸ್.ಸತೀಶ್, ಸಹ ಸಂಚಾಲಕ ಕೆ.ಬಿ.ಭಾಸ್ಕರ್, ಗೌರವ ಕಾರ್ಯದರ್ಶಿ ಹೆಚ್.ಎಸ್.ಸುರೇಶ್‌ಬಾಬು ಮತ್ತಿತರರು ಹಾಜರಿದ್ದರು.

ಪಶು ವೈದ್ಯರ ಉಪಾಯದಿಂದ ಅಪಾಯದಿಂದ ಪಾರಾದಳು 'ಕುಮಾರಿ'

ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಪ್ರಶಂಸೆ



ಮೈಸೂರು,ಸೆ.7(ಎಂಟಿವೈ)– ಪಾದದಲ್ಲಿನ ಗಾಯದಿಂದ ಬಳಲುತ್ತಿದ್ದು, ಸರ್ಕಸ್ ಕಂಪನಿಯಿಂದ ರಕ್ಷಿಸಲ್ಪಟ್ಟ ಹೆಣ್ಣಾನೆಯೊಂದಕ್ಕೆ ಪಶುವೈದ್ಯರು ವಿನೂತನ ರೀತಿ ಚಿಕಿತ್ಸೆ ನೀಡಿ, ಅದನ್ನು ಪಾರು ಮಾಡಲು ಪ್ರಯತ್ನಿಸುತ್ತಿರುವುದು ಭಾರಿ ಪ್ರಶಂಸೆಗೆ ಪಾತ್ರವಾಗಿದೆ. ಹುಣಸೂರು ವನ್ಯಜೀವಿ ವಿಭಾಗ ವ್ಯಾಪ್ತಿಯ ದೊಡ್ಡ ಹರವೆ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿರುವ 60 ವರ್ಷದ 'ಕುಮಾರಿ' ಪಾದದಲ್ಲಿ ಗಂಭೀರ ಗಾಯವಾಗಿ ಯಾತನೆ ಅನುಭವಿಸುತ್ತಿತ್ತು. ಪರಿಣಾಮಕಾರಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿರಲಿಲ್ಲ. ಔಷಧಿ ಹಚ್ಚಿದರೆ ಮಣ್ಣು ಪಾಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಆನೆಗೆ ಗಾಯ ಗುಣಪಡಿಸಲು ಸಾಧ್ಯವಾಗಿರಲಿಲ್ಲ. ಬಹಳ ದಿನಗಳಿಂದ ಕುಮಾರಿ ನೋವಿನಿಂದ ಯಾತನೆ ಅನುಭವಿಸುತ್ತಿತ್ತು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪಶುವೈದ್ಯ ಡಾ.ಹೆಚ್. ರಮೇಶ, ದೊಡ್ಡಹರವೆ ಕ್ಯಾಂಪ್‌ನಲ್ಲಿರುವ 'ಕುಮಾರಿ'ಗೆ ಚಿಕಿತ್ಸೆ ನೀಡಲು ನೂತನ ವಿಧಾನ ಅನುಸರಿಸುತ್ತಿದ್ದು, ಆನೆಯ ಮುಂಭಾಗದ



ಬಲಗಾಲಿನ ಪಾದಕ್ಕೆ ವಾಹನದ ಟೈರ್ ರಬ್ಬರ್‌ನಿಂದ ಪಾದರಕ್ಷೆ ಮಾದರಿಯಲ್ಲಿ ವಿನ್ಯಾಸಗೊಳಿಸಿ, ಅಳವಡಿಸಿದ್ದಾರೆ. ಮನುಷ್ಯರು ಪಾದರಕ್ಷೆ ಹಾಕುವಂತೆ 'ಕುಮಾರಿ' ಕಾಲಿಗೂ ಟೈರ್‌ನಿಂದ ತಯಾರಿಸಿರುವ ಪಾದರಕ್ಷೆ ಮಾದರಿಯನ್ನು ಅಳವಡಿಸಿರುವುದರಿಂದ ಆನೆಗೆ ಪರಿಣಾಮಕಾರಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿದೆ. ಕಳೆದ 20 ದಿನದಿಂದ ಆನೆಯ ಆರೋಗ್ಯ ಸುಧಾರಿಸುತ್ತಿದೆ. 2015ರ ನವೆಂಬರ್‌ನಲ್ಲಿ ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಫನ್‌ಫೋರ್ಟ್‌ನಲ್ಲಿ ಕೇರಳ ಮೂಲದ ಸರ್ಕಸ್ ಕಂಪನಿಯೊಂದಕ್ಕೆ ಸೇರಿದ ಆರು ಆನೆಗಳನ್ನು ಕಟ್ಟಿಹಾಕಲಾಗಿತ್ತು. ಸುತ್ತಲೂ ಗದ್ದೆಗಳಿರುವ ಕಾರಣ ಆನೆಗಳಿದ್ದ ಜಾಗ ಅಧಿಕ ತೇವಾಂಶ(ವಸ್ತಿ)ದಿಂದ ಆನೆಗಳ ಆರೋಗ್ಯ ಹದಗೆಟ್ಟಿತ್ತು. ಎರಡು ಆನೆಗಳು ಮೃತಪಟ್ಟಿದ್ದವು. ಅರಣ್ಯ ಇಲಾಖೆ ದಾಳಿ ನಡೆಸಿ ಉಳಿದ ನಾಲ್ಕು ಹೆಣ್ಣಾನೆಗಳನ್ನು ರಕ್ಷಿಸಿತ್ತು. ಛಾಯಾ, ರೂಪ ಹಾಗೂ ಕುಮಾರಿ ಆನೆಗಳನ್ನು ದೊಡ್ಡಹರವೆ ಕ್ಯಾಂಪ್‌ಗೆ ಕೊಂಡೊಯ್ದು ಪುನರ್ವಸತಿ ಕಲ್ಪಿಸಲಾಗಿತ್ತು. ಅದರಲ್ಲಿ ರೂಪ ಮುಂಗಾಲಿಗೆ ಗಾಯವಾಗಿ, ಕೀವು ತುಂಬಿಕೊಂಡಿತ್ತು. ಪಶುವೈದ್ಯ ಡಾ.ಹೆಚ್.ರಮೇಶ, ಪಾದದಲ್ಲಿ ತುಂಬಿಕೊಂಡಿದ್ದ ಕೀವು ಹೊರತೆಗೆದು ಚಿಕಿತ್ಸೆ ನೀಡಿದ್ದರು. ಗಾಯ ವಾಸಿಯಾಗಲು ಹಾಕಲಾಗಿದ್ದ ಆಯಿಂಟ್ಮೆಂಟ್ ಇನ್ನಿತರೆ ಔಷಧಿ ಮಣ್ಣು ಪಾಲಾಗುತ್ತಿತ್ತು. ಆದರೆ, ಈ ಉಪಾಯದಿಂದ ಆನೆಯ ಕಾಲಿನ ಗಾಯ ಮಾಯಲಾರಂಭಿಸಿದ್ದು, ಪಾದರಕ್ಷೆ ಮಾದರಿ ಧರಿಸಿ ಕುಮಾರಿ ಓಡಾಡಿಕೊಂಡಿದ್ದು, ಅರಣ್ಯ ಸಿಬ್ಬಂದಿಗಳಲ್ಲಿ ಸಂತಸ ಮನೆ ಮಾಡಿದೆ. ಈಗ ಮಾಡಿರುವ ವಿಡಿಯೋ ತುಣುಕನ್ನು ಅರಣ್ಯ ಇಲಾಖೆ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದು, ಸಾರ್ವಜನಿಕರು ಪಶುವೈದ್ಯರ ಕಾಳಜಿಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ



ಮೈಸೂರು, ಸೆ.7–ಮೈಸೂರಿನ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಉಡುಪಿ ಶ್ರೀ ಕೃಷ್ಣ ಮಠದ ಪೀಠಾಧಿಪತಿಗಳಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರಂಗಳವರು ಸಾನ್ನಿಧ್ಯ ವಹಿಸಿದ್ದರು.

ಆನಂತರ ವೇದಿಕೆಯಲ್ಲಿ ಶ್ರೀ ಕೃಷ್ಣ ವಿಗ್ರಹಕ್ಕೆ ಪೂಜೆಯನ್ನು ನೆರವೇರಿಸಿ, ಎಲ್ಲಾ ತರಗತಿಯ ವಿದ್ಯಾರ್ಥಿಗಳಿಂದ ಶ್ರೀ ಕೃಷ್ಣನ ಸುಮಧುರವಾದ ಭಕ್ತಿ ರಸ ಭರಿತವಾದ ಗೀತೆಗಳು, ಭಜನೆಗಳನ್ನು ಹಾಗೂ ಶ್ರೀ ಕೃಷ್ಣನ ಬಾಲಲೀಲೆಗಳನ್ನು, ಲೀಲಾ ವಿನೋದಗಳನ್ನು ಪ್ರತಿಬಿಂಬಿಸುವ ನೃತ್ಯಗಳನ್ನು ಪ್ರದರ್ಶಿಸಲಾಯಿತು.

ಸಾನ್ನಿಧ್ಯವನ್ನು ವಹಿಸಿದ್ದ ಸ್ವಾಮೀಜಿಯವರು ನೆರೆದಿದ್ದ ಎಲ್ಲ ಭಕ್ತವೃಂದವರಿಗೂ ಆಶೀರ್ವಚನವನ್ನು ನೀಡಿ ಮಾತನಾಡಿ, ದ್ವಾಪರ ಯುಗದಲ್ಲಿ ನಾನು ಒಬ್ಬ ಕೃಷ್ಣ, ಒಬ್ಬಳು ರಾಧೆಯನ್ನು ಮಾತ್ರ ಕಾಣಲು ಸಾಧ್ಯವಾಗಿತ್ತೇನೋ. ಆದರೆ ಈ ದಿನ ಶಾಲೆಯಲ್ಲಿ ನೂರಾರು ಮಕ್ಕಳು ಕೃಷ್ಣ ರಾಧೆಯರ ವೇಷವನ್ನು ತೊಟ್ಟು ನಲಿಯುವಂತಹ ಪರಿಸರವನ್ನು ಇಲ್ಲಿ ಸೃಷ್ಟಿಸಿ, ನನ್ನ ಮನಸ್ಸಿಗೆ ಸಂತೋಷವನ್ನುಂಟು ಮಾಡಿದ್ದಾರೆ. ಇಂತಹ ರಾಧಾಕೃಷ್ಣರನ್ನು ಸಾಕುತ್ತಿರುವ ಯಶೋಧೆಯಂತಹ ತಾಯಂದಿರಿಗೆ ಕೃಷ್ಣಪರಮಾತ್ಮ ಸಕಲ ಸೌಭಾಗ್ಯವನ್ನುಂಟು ಮಾಡಲಿ. ನಿಮ್ಮ ಮಕ್ಕಳನ್ನು ಸಹ ರಾಧಾ ಕೃಷ್ಣರಂತೆ ಅವರ ಆದರ್ಶ ಗುಣಗಳನ್ನು ಪರಿಚಯಿಸಿ ಬೆಳೆಸಿ, ಭವಿಷ್ಯತ್ತಿನ ಉತ್ತಮ ಪ್ರಜೆಗಳನ್ನಾಗಿ ಮಾಡಿ ಎಂದು ನುಡಿದರು.

ಬಾಲೋದ್ಯಾನ ಆಡಳಿತ ಮಂಡಳಿಯ ಅಧ್ಯಕ್ಷ ವಾಸುದೇವರಾವ್ ಅರೂರ್, ಕಾರ್ಯದರ್ಶಿ ನಾಗೇಶ್, ಆಡಳಿತ ಮಂಡಳಿಯ ಖಜಾಂಚಿ ಶಿವಶಂಕರ್, ಮುಖ್ಯ ಆಡಳಿತಾಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪ್ರತಿಭಾ ಅಶೋಕ್ ಉಪಸ್ಥಿತರಿದ್ದರು.

ಭಾರತ–ಆಸಿಯಾನ್ ಸಹಕಾರ ಬಲಪಡಿಸಲು 12 ಅಂಶಗಳ ಪ್ರಸ್ತಾವನೆ ಮಂಡಿಸಿದ ಪ್ರಧಾನಿ ಮೋದಿ

ಜಕಾರ್ತಾ, ಸೆ.7– ಡಿಜಿಟಲ್ ಪರಿವರ್ತನೆ, ವ್ಯಾಪಾರ ಮತ್ತು ಆರ್ಥಿಕ ತೊಡಗಿಸಿಕೊಳ್ಳುವಿಕೆಯಂತಹ ಕ್ಷೇತ್ರಗಳಲ್ಲಿ ಭಾರತ–ಆಸಿಯಾನ್ ಸಹಕಾರವನ್ನು ಬಲಪಡಿಸುವ 12 ಅಂಶಗಳ ಪ್ರಸ್ತಾವನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಮಂಡಿಸಿದರು.



ಇಂಡೋನೇಷ್ಯಾ ರಾಜಧಾನಿ ಜಕಾರ್ತಾದಲ್ಲಿ ನಡೆದ 20ನೇ ಆಸಿಯಾನ್–ಭಾರತ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದರು. ಆಸಿಯಾನ್‌ನ ಪ್ರಧಾನ ಕಾರ್ಯದರ್ಶಿ(ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ) ಡಾ ಕಾವೊ ಕಿಮ್ ಹರ್ನ್ ಕೂಡ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಶೃಂಗಸಭೆಯಲ್ಲಿ ಕಡಲ ಸಹಕಾರ ಮತ್ತು ಆಹಾರ ಭದ್ರತೆಯ ಬಗ್ಗೆ ನಿರ್ಣಯ ಅಂಗೀಕರಿಸಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಶೃಂಗಸಭೆಯಲ್ಲಿ, ಆಸಿಯಾನ್–ಭಾರತದ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಮತ್ತು ಅದರ ಭವಿಷ್ಯದ ಕೋರ್ಸ್ ಅನ್ನು ರೂಪಿಸುವ ಕುರಿತು ಆಸಿಯಾನ್ ಪಾಲುದಾರರೊಂದಿಗೆ ಪ್ರಧಾನಿ ಮೋದಿ ವ್ಯಾಪಕ ಚರ್ಚೆ ನಡೆಸಿದರು ಎಂದು ಪ್ರಕಟಣೆ ತಿಳಿಸಿದೆ.

ಪ್ರಧಾನಿ ಮೋದಿ ಅವರು ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಆಸಿಯಾನ್ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿದರು ಮತ್ತು ಆಸಿಯಾನ್–ಭಾರತ ಮುಕ್ತ ವ್ಯಾಪಾರ ಒಪ್ಪಂದದ (ಎಐಟಿಜಿಎ) ಪರಿಶೀಲನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಸಂಪರ್ಕ, ಡಿಜಿಟಲ್ ಪರಿವರ್ತನೆ, ವ್ಯಾಪಾರ ಮತ್ತು ಆರ್ಥಿಕ ತೊಡಗಿಸಿಕೊಳ್ಳುವಿಕೆ, ಭಯೋತ್ಪಾದನೆಯಂತಹ ಸಮಕಾಲೀನ ಸವಾಲುಗಳನ್ನು ಎದುರಿಸುವುದು, ಜನರಿಂದ ಜನರ ಸಂಪರ್ಕಗಳು ಮತ್ತು ಕಾರ್ಯತಂತ್ರವನ್ನು ಗಾಢವಾಗಿಸುವ ಭಾರತ–ಆಸಿಯಾನ್ ಸಹಕಾರ ಬಲಪಡಿಸುವ 12 ಅಂಶಗಳ ಪ್ರಸ್ತಾವನೆಯನ್ನು ಪ್ರಧಾನಿ ನರೇಂದ್ರ ಮೋದಿ ಮಂಡಿಸಿದರು.

ಹಿಂದೂ ಧರ್ಮದ ಅವಹೇಳನದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮೌನ

ಪಾಟ್ನಾ, ಸೆ.7– ಮಿತ್ರಪಕ್ಷವಾದ ಡಿಎಂಕೆ, ಅಲ್ಲದೆ ತನ್ನ ಪಕ್ಷದ ಕೆಲವು ನಾಯಕರು ಹಿಂದೂ ಧರ್ಮದ ಬಗ್ಗೆ ವಿವಾದಾತ್ಮಕ ಹೇಳಿಕೆಗಳ ಕುರಿತು ಕಾಂಗ್ರೆಸ್ ಉನ್ನತ ನಾಯಕರು ಮೌನವಾಗಿದ್ದಾರೆ ಎಂದು ಬಿಜೆಪಿಯ ಹಿರಿಯ ನಾಯಕ ರವಿಶಂಕರ್ ಪ್ರಸಾದ್ ಅವರು ಗುರುವಾರ ವಾಗ್ದಾಳಿ ನಡೆಸಿದ್ದಾರೆ.



ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಇತ್ತೀಚೆಗೆ ಮುಂಬೈನಲ್ಲಿ ನಡೆದ ಇಂಡಿಯಾ ಮೈತ್ರಿಕೂಟದ ಸಭೆಯಲ್ಲಿ ಹಿಂದೂಗಳನ್ನು ಅವಹೇಳನ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆಯೇ? ಎಂದು ಪ್ರಶ್ನಿಸಿದರು. ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮವನ್ನು ಮಲೇರಿಯಾ ಮತ್ತು ಡೆಂಗ್ಯೂಗೆ ಹೋಲಿಸಿದ್ದನ್ನು ಉಲ್ಲೇಖಿಸಿದ ಪ್ರಸಾದ್, ಈಗ ಮತ್ತೊಬ್ಬ ಡಿಎಂಕೆ ನಾಯಕ ಎ.ರಾಜಾ ಹಿಂದೂ ಧರ್ಮವನ್ನು ಕುಷ್ಠರೋಗ ಮತ್ತು ಎಚ್‌ಐವಿ / ಏಡ್ಸ್‌ಗೆ ಹೋಲಿಸಿದ್ದಾರೆ ಎಂದು ಕಿಡಿಕಾರಿದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಸೆ.7(ಪಿಎಂ)– ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಸೆ.8ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಎರಡನೇ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಮೈಸೂರು ಗ್ರಾಮಾಂತರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಕೀಳನಪುರ, ಸಿದ್ದರಾಮನಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮಿಪುರ, ಪಿ.ಜಿ.ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೇಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್. ಇಂಡಸ್ಟ್ರೀಸ್, ಜಾಗ್ವಾರ್ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀಸ್ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಪರಿಸರ ಬಳಗದಿಂದ ಪರಿಸರ ಸಂರಕ್ಷಣೆ ಪೂರಕವಾಗಿ

ನಾಳೆ, ನಾಳಿದ್ದು ಮಣ್ಣಿನ ಗಣಪತಿ ತಯಾರಿಕಾ ಕಾರ್ಯಾಗಾರ

ಮೈಸೂರು, ಸೆ.7(ಜಿಎ)–ಮೈಸೂರಲ್ಲಿ ಸೆ.9 ಮತ್ತು 10ರಂದು ಪರಿಸರ ಸ್ನೇಹಿ ಮಣ್ಣಿನ ಗಣಪನ ಮೂರ್ತಿ ತಯಾರಿಕಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪರಿಸರ ಬಳಗದ ಸಂಸ್ಥಾಪಕ ಅಧ್ಯಕ್ಷ ಪರಶುರಾಮೇಗೌಡ ತಿಳಿಸಿದರು.



ನಗರ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ನಗರದ ವಿವಿಧ ಭಾಗಗಳಲ್ಲಿ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿ ತಯಾರಿಕಾ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದರು.

ಗೌರಿ–ಗಣೇಶ ಹಬ್ಬದ ಆಚರಣೆಯಲ್ಲಿ ಬಣ್ಣದ ಗಣಪತಿ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣಪತಿ ಮೂರ್ತಿಯನ್ನು ಮನೆಯಲ್ಲಿ ಮತ್ತು ಬಡಾವಣೆಯ ಬೀದಿಗಳಲ್ಲಿ ಸ್ಥಾಪಿಸಿ ಪೂಜಿಸುವುದು ನಡೆಯುತ್ತಿದೆ. ರಾಸಾಯನಿಕ ಬಣ್ಣಗಳು ಸೀಸ, ಕ್ರೋಮಿಯಂನಂತಹ ಅಪಾಯಕಾರಿ ಲೋಹಗಳಿಂದ ಕೂಡಿರುತ್ತವೆ. ತೈಲ ಬಣ್ಣ ಲೇಪಿತ ಮೂರ್ತಿಗಳನ್ನು ಕೆರೆ, ಕೊಳ, ಕಟ್ಟೆ ನೀರಿನಲ್ಲಿ ವಿಸರ್ಜಿಸುವುದರಿಂದ ನೀರು ಮಲಿನವಾಗುತ್ತದೆ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಗಣಪತಿ ಮೂರ್ತಿಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದ್ದು, ಈಗಾಗಲೇ ನಾವು ಪರಿಸರ ಮಾಲಿನ್ಯ, ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಭೀಕರ ಪರಿಣಾಮಗಳನ್ನು ಅನುಭವಿಸುತ್ತಿರುವಾಗ ಮತ್ತಷ್ಟು ಪರಿಸರ ಮಾಲಿನ್ಯಕ್ಕೆ ಕಾರಣವಾಗಬಾರದು. ನಾವು, ಸ್ವಲ್ಪ ಜವಾಬ್ದಾರಿಯುತವಾಗಿ ನಡೆದುಕೊಂಡು ಪರಿಸರ ಮಾಲಿನ್ಯ ನಿಯಂತ್ರಣ ಮಾಡುವ ಪ್ರಯತ್ನಗಳನ್ನು ಮಾಡಬೇಕಿದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಬಣ್ಣದ ಗಣಪತಿ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಗಣಪತಿ ಮೂರ್ತಿಗಳನ್ನು ಮನೆಯಲ್ಲಿ ಮತ್ತು ಬಡಾವಣೆಗಳ ಬೀದಿಗಳಲ್ಲಿ ಪೂಜಿಸುವ ಬದಲಿಗೆ ಮಣ್ಣಿನ ಗಣಪತಿ, ಬೆಲ್ಲದ ಗಣಪತಿ ಮುಂತಾದ ಪರಿಸರ ಸ್ನೇಹಿ ಗಣಪತಿ ಮೂರ್ತಿಗಳನ್ನು ಪೂಜಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪರಿಸರ ಬಳಗದವರು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪ್ರಾದೇಶಿಕ ಕಚೇರಿ–1 ಸಹಯೋಗದಲ್ಲಿ ಸೆಪ್ಟೆಂಬರ್ 9 ಮತ್ತು 10 ಮೂರು ತಂಡಗಳಾಗಿ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಮತ್ತು ಲಲಿತ್‌ಮಹಲ್ ಬಳಿಯ ಮೈದಾನದಲ್ಲಿ ಮಣ್ಣಿನ ಗಣಪತಿ ಮಾಡುವ ಕಾರ್ಯಾಗಾರ ಮಾಡುತ್ತಿದ್ದೇವೆ ಎಂದರು.

ಸೆ.9ರ ಬೆಳಗ್ಗೆ 9 ರಿಂದ 12 ಗಂಟೆ, ಮಧ್ಯಾಹ್ನ 2 ರಿಂದ 5 ಗಂಟೆ ಮತ್ತು ಭಾನುವಾರ ಬೆಳಗ್ಗೆ 9 ರಿಂದ 12 ಗಂಟೆ, ಪ್ರತಿ ತಂಡದಲ್ಲಿ 35–40 ಶಾಲಾ ಮಕ್ಕಳು ಮತ್ತು 10–15 ರಿಂದ ಇತರೆ ಆಸಕ್ತ ಜನರು ಇರುತ್ತಾರೆ. ಒಟ್ಟು 200 ಶಾಲಾ ಮಕ್ಕಳು ಮತ್ತು ಇತರ 50 ಮಂದಿ ಆಸಕ್ತರಿಗೆ ತರಬೇತಿ ಕೊಡುವ ಗುರಿ ಹೊಂದಲಾಗಿದ್ದು, ಶಿಲ್ಪ ಕಲೆಯಲ್ಲಿ ಪರಿಣತಿ ಮತ್ತು ಅನುಭವವಿರುವ ಶಿಲ್ಪಿಗಳಿಂದ ಮಣ್ಣಿನ ಗಣಪತಿ ಮಾಡುವುದನ್ನು ಕಲಿಸಿಕೊಡಲಾಗುತ್ತದೆ.

ಕಾರ್ಯಾಗಾರದಲ್ಲಿ ಭಾಗಿಯಾದವರು ತಾವೇ ಮಣ್ಣಿನ ಗಣಪತಿ ತಯಾರಿಸಿ ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಪೂಜಿಸಬಹುದಾಗಿದೆ. ಇದಕ್ಕೆ ಬೇಕಾಗುವ ಜೇಡಿ ಮಣ್ಣನ್ನು ಪರಿಸರ ಬಳಗದ ಸ್ವಯಂ ಸೇವಕರು ಒದಗಿಸುತ್ತಾರೆ. ಈ ಕಾರ್ಯಾಗಾರಕ್ಕೆ ಮೈಸೂರು ಮಹಾನಗರ ಪಾಲಿಕೆಯವರ ಸಹಾಯ ಸಹಕಾರವಿದ್ದು, ಟಿವಿಎಸ್ , ಜೆಕೆ ಟೈರ್ಸ್ ಮತ್ತು ಕ್ಲುಬರ್ ಲುಬ್ರಿಕೇಶನ್ ಸಂಸ್ಥೆಗಳು ಪ್ರಾಯೋಜಕತ್ವ ವಹಿಸಿಕೊಂಡಿವೆ. ಹಾಗೇ ಕಾರ್ಯಾಗಾರದಲ್ಲಿ ವಿಶ್ವ ಪ್ರಜ್ಞಾ ಶಾಲೆ, ವಿದ್ಯಾ ಜ್ಯೋತಿ ಶಾಲೆ, ಜೆಎಸ್‌ಎಸ್ ಪ್ರೌಢಶಾಲೆ, ಈಶ್ವರ್ ವಿದ್ಯಾಲಯ ಮುಂತಾದ ಶಾಲೆಯ ಮಕ್ಕಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಳಗದ ಸದಸ್ಯರಾದ ಗಂಟಯ್ಯ(ಕೃಷ್ಣಪ್ಪ), ಭಾಗ್ಯ ಶಂಕರ್, ವೆಂಕಟೇಶ್ ಖರೀದಿ, ಮಲ್ಲಮ್ಮ ಗಾಣಿಗಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕೆ.ಆರ್.ಪೇಟೆಯ ಎಲ್ಲಾ ಕೆರೆಕಟ್ಟೆ ತುಂಬಿಸಲು ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಭರವಸೆ



ಕೆ.ಆರ್.ಪೇಟೆ, ಸೆ.7– ತಾಲೂಕಿನ ಎಲ್ಲಾ ಕೆರೆಕಟ್ಟೆ ತುಂಬಿಸಲು ಕ್ರಮ ಕೈಗೊಳ್ಳಲಾಗುವುದು. ರೈತ ಬಾಂಧವರು ಆತಂಕಕ್ಕೆ ಒಳಗಾಗಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಸುಭಾಷ್‌ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಾಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಾಜಶೇಖರ್ ಅವರಿಂದ ಸನ್ಮಾನ ಹಾಗೂ ಬೆಳ್ಳಿಗದೆ ಸ್ವೀಕರಿಸಿ ಮಾತನಾಡಿದ ಅವರು, ತಾಲೂಕಿನ ಜನತೆ ನನ್ನ ಮೇಲೆ ಅಪಾರವಾದ ಪ್ರೀತಿ, ವಿಶ್ವಾಸ ಇಟ್ಟುಕೊಂಡಿದ್ದಾರೆ. 2009ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ತಾಲೂಕಿನ ಜನತೆ ನನಗೆ ಹೆಚ್ಚಿನ ಮತಗಳನ್ನು ನೀಡುವ ಮೂಲಕ ನನ್ನ ಗೆಲುವಿಗೆ ಕಾರಣರಾಗಿದ್ದೀರಿ. ಅಲ್ಲದೇ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗಡಿ ತಾಲೂಕಿನ ಗ್ರಾಮಗಳಲ್ಲಿ ನನ್ನ ಗೆಲುವಿಗಾಗಿ ತಮ್ಮ ನೆಂಟರಿಷ್ಟರಿಗೆ ನನಗೆ ಮತ ನೀಡುವಂತೆ ತಿಳಿಸಿ ಸಹಕಾರ ನೀಡಿದ್ದೀರಿ. ನಾನು ಶಾಸಕ, ಸಚಿವನಾದಾಗ ಸಂಭ್ರಮಾಚರಣೆ ನಡೆಸಿದ್ದೀರಿ. ಹಾಗಾಗಿ ನಾನು ಎಂದಿಗೂ ಕೆ.ಆರ್.ಪೇಟೆ ತಾಲೂಕಿನ ಜನರ ಪ್ರೀತಿ, ವಿಶ್ವಾಸ ಮರೆಯುವುದಿಲ್ಲ ಎಂದರು.

ಕೆಶಿಫ್ ವತಿಯಿಂದ ಬೆಂಗಳೂರು–ಜಲಸೂರು ರಾಜ್ಯ ಹೆದ್ದಾರಿ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ಭೂಸ್ವಾಧೀನ ಪ್ರಕ್ರಿಯೆ, ಅರಣ್ಯದಲ್ಲಿ ರಸ್ತೆ ಹಾದು ಹೋಗುವುದು, ಚುನಾವಣೆ ಸೇರಿದಂತೆ ಹಲವು ಕಾರಣಗಳಿಂದಾಗಿ ತಡವಾಗಿ ನಡೆಯುತ್ತಿದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಿ ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹೆದ್ದಾರಿಗಾಗಿ ಭೂಮಿ ಕಳೆದುಕೊಂಡಿರುವ ರೈತರಿಗೆ ವೈಜ್ಞಾನಿಕ ಬೆಲೆ ನೀಡಲಾಗಿದೆ. ಕೆಲವು ರೈತರು ಸರ್ಕಾರ ನೀಡಿರುವ ಬೆಲೆ ವೈಜ್ಞಾನಿಕವಾಗಿಲ್ಲ ಎಂದು ಹೆಚ್ಚುವರಿ ಹಣ ನೀಡುವಂತೆ ಆದೇಶ ಮಾಡಿಸಿಕೊಂಡು ಬಂದಿದ್ದಾರೆ. ನ್ಯಾಯಾಲಯದ ತೀರ್ಪಿನಿಂದ ನೂರಾರು ರೈತರು ಪಡೆದಿರುವ ಪರಿಹಾರದ ಹಣದಲ್ಲಿ ಭಾರಿ ವ್ಯತ್ಯಯವಾಗಿದೆ. ಈ ಬಗ್ಗೆ ಕೆಶಿಫ್ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಮಾಲೋಚನೆ ನಡೆಸಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ರೈತರಿಗೆ ಆಗಿರುವ ಅನ್ಯಾಯ ಸರಿಪಡಿಸಲು ಪ್ರಯತ್ನ ಮಾಡುತ್ತೇನೆ. ಹೇಮಾವತಿ ಜಲಾಶಯ ಯೋಜನೆಯ ರೈತರು ಕೆರೆಗಳು ತುಂಬಿಲ್ಲ ಎಂದು ಆತಂಕಕ್ಕೆ ಒಳಗಾಗಬೇಕಾಗಿಲ್ಲ. ಕಟ್ಟು ಪದ್ಧತಿಯಲ್ಲಾದರೂ ನೀರನ್ನು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಲು ಕ್ರಮ ವಹಿಸುತ್ತೇನೆ ಎಂದರು.

ಈ ವೇಳೆ ಜಿಲ್ಲಾಧಿಕಾರಿ ಡಾ.ಕುಮಾರ್, ಎಸಿ ನಂದೀಶ್, ತಹಸೀಲ್ದಾರ್ ನಿಸರ್ಗಪ್ರಿಯ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಯುಐಡಿಎಫ್‌ಸಿ ಮಾಜಿ ರಾಜ್ಯಾಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಪುರಸಭೆ ಅಧ್ಯಕ್ಷ ನಟರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸುರೇಶ್, ಬಿ.ನಾಗೇಂದ್ರ ಕುಮಾರ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಮೀನಾಕ್ಷಿ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ಎಸ್.ಬಸವೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗೋವಿಂದರಾಜು ಮತ್ತಿತರರಿದ್ದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ

8ನೇ ದಿನವೂ ಮುಂದುವರೆದ ಧರಣಿ



ಮಂಡ್ಯ, ಸೆ.7– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ 8ನೇ ದಿನವೂ ಮುಂದುವರೆದಿದ್ದು, ವಿವಿಧ ಸಂಘ ಸಂಸ್ಥೆಗಳು ಬೆಂಬಲ ಸೂಚಿಸಿದವು.

ವಕೀಲರ ಸಂಘ ಮೆರವಣಿಗೆ: ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸುವಂತೆ ಒತ್ತಾಯಿಸಿ ವಕೀಲರು ಮಂಡ್ಯದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಂಡ್ಯ ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ಸಂಘದ ಆವರಣದಿಂದ ಮೆರವಣಿಗೆ ಹೊರಟ ವಕೀಲರು ಜಯಚಾಮರಾಜೇಂದ್ರ ವೃತ್ತದಲ್ಲಿ ಕೆಲಕಾಲ ಪ್ರತಿಭಟಿಸಿ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳ ಸರ್‌ಎಂವಿ ಪುತ್ಥಳಿವರೆಗೂ ಮೆರವಣಿಗೆ ನಡೆಸಿ ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾದರು. ಅಲ್ಲದೇ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದ ವಕೀಲರು, ಕೆಆರ್‌ಎಸ್ ಸೇರಿದಂತೆ ಕಾವೇರಿ ಕಣಿವೆ ಜಲಾಶಯಗಳಿಂದ ಬಿಟ್ಟಿರುವ ನೀರು ಸ್ಥಗಿತಗೊಳಿಸುವಂತೆ ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಎಂ.ಟಿ.ರಾಜೇಂದ್ರ ಮಾತನಾಡಿ, ರೈತರ ಹಿತ ಕಾಪಾಡದೇ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲದಂತಾಗಿದೆ. ಜಲಾಶಯಗಳನ್ನು ಬರಿದು ಮಾಡಿದ್ದರೂ ನೀರು ಹರಿಸುತ್ತಿದೆ. ಇದು ಮುಂದಿನ ದಿನಗಳಲ್ಲಿ ಜನತೆಗೆ ಕುಡಿಯಲು ನೀರು ಸಿಗದಂತಹ ಸಂಕಷ್ಟ ತಂದೊಡ್ಡಲಿದೆ. ಕಾವೇರಿ ವಿಚಾರದಲ್ಲಿ ರಾಜಕಾರಣಿಗಳು ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು. ದೊಂಬರಾಟ ಆಡುವುದನ್ನು ಬಿಟ್ಟು ರೈತರ ಪರ ಹೋರಾಟ ಮಾಡಿ ಎಂದರು.

ಸುಪ್ರೀಂಕೋರ್ಟ್ ಸೆ.21 ರವರೆಗೆ ವಿಚಾರಣೆ ಮುಂದೂಡಿದೆ. ಅಲ್ಲಿವರೆಗೆ ನೀರು ಬಿಡಲು ನೀರು ಎಲ್ಲಿದೆ. ಜಲಾಶಯಗಳಿಂದ ಬಿಡುಗಡೆ ಮಾಡುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು. ಕಾವೇರಿ ನದಿ ನೀರಿನ ವಿಚಾರದಲ್ಲಿ ವಾದ ಮಾಡುತ್ತಿರುವ ನ್ಯಾಯವಾದಿಗಳಿಗೆ ಸಮರ್ಪಕ ಮಾಹಿತಿ ಒದಗಿಸಲು ಸರ್ಕಾರ ಮುಂದಾಗಬೇಕು. ಸಮರ್ಪಕ ಮಾಹಿತಿ ಇಲ್ಲದೆ ವಾದ ಮಾಡಲು ಹೇಗೆ ಸಾಧ್ಯ. ಕಾವೇರಿಕೊಳ್ಳದ ವಾಸ್ತವ ಪರಿಸ್ಥಿತಿ ಬಗ್ಗೆ ನ್ಯಾಯವಾದಿಗಳಿಗೆ ಮಾಹಿತಿ ಒದಗಿಸಿ ಕೊಡಿ ಎಂದರು.

ದಸಂಸ ಬೆಂಬಲ: ಕಾವೇರಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಶವಯಾತ್ರೆ ನಡೆಸಿದ ವೇಳೆ ಶವದ ಪ್ರತಿಕೃತಿಯನ್ನು ಪೊಲೀಸರು ಹೊತ್ತೊಯ್ದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಜಟಾಪಟಿ ನಡೆಯಿತು.

ಬಳಿಕ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳಕ್ಕೆ ತೆರಳಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ರೈತ ಹಿತ ರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಎಂ.ವಿ.ಕೃಷ್ಣ, ವಕೀಲರ ಸಂಘದ ಕೆ.ಎಲ್.ಮರಿಸ್ವಾಮಿ, ಕಾರ್ಯದರ್ಶಿ ಸಿದ್ದರಾಜು, ಜಂಟಿ ಕಾರ್ಯದರ್ಶಿ ಮಹದೇವ್, ಖಜಾಂಚಿ ಮಹೇಶ್, ದಸಂಸದ ವೆಂಕಟಗಿರಿಯಯ್ಯ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಲೋಕಪಾವನಿ ಮಹಿಳಾ ಸಹಕಾರ ಬ್ಯಾಂಕ್ ವಿಲೀನಕ್ಕೆ ವಿರೋಧ

ಮಂಡ್ಯ, ಸೆ.7– ಜಿಲ್ಲೆಯ ಪ್ರತಿಷ್ಠಿತ ಲೋಕಪಾವನಿ ಮಹಿಳಾ ಸಹಕಾರ ಬ್ಯಾಂಕ್ ಅನ್ನು ಪ್ರಸ್ತುತ ಆಡಳಿತ ಮಂಡಳಿ ವಿಲೀನಗೊಳಿಸಲು ಹುನ್ನಾರ ನಡೆಸುತ್ತಿದೆ ಎಂದು ಬ್ಯಾಂಕ್ ಸಂಸ್ಥಾಪಕ ಕೌಡ್ಲೆ ಚನ್ನಪ್ಪ ಗಂಭೀರ ಆರೋಪ ಮಾಡಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಪ್ರಪ್ರಥಮ ಮಹಿಳಾ ಸಹಕಾರ ಬ್ಯಾಂಕ್ ಅನ್ನು ಉಳಿಸುವ ಮೂಲಕ ಮಂಡ್ಯ ಜಿಲ್ಲೆಯ ಮರ್ಯಾದೆ ಕಾಪಾಡಬೇಕಿದೆ. ಜಿಲ್ಲೆಯಲ್ಲಿ ಮಹಿಳೆಯರಿಗಾಗಿ ಪ್ರಥಮ ಬಾರಿಗೆ ಇಂತಹ ಒಂದು ಸಂಸ್ಥೆ ಸ್ಥಾಪಿಸಲು ಮಂಡ್ಯ ಜಿಲ್ಲಾ ಪದವೀಧರ ಪತ್ತಿನ ಸಹಕಾರ ಸಂಘದಲ್ಲಿ ಅದರ ಸಂಸ್ಥಾಪಕ ಅಧ್ಯಕ್ಷ ಕೌಡ್ಲೆ ಚನ್ನಪ್ಪ ಮಂಡ್ಯ ಜಿಲ್ಲಾ ಉಪನಿಬಂಧಕ ನಾಗರಾಜು ಹಾಗೂ ಪ್ರತಿಷ್ಠಿತ ಮಹಿಳೆಯರನ್ನು 05–01–92 ರಂದು ಪ್ರಥಮ ಸಭೆ ಕರೆದು ಬ್ಯಾಂಕ್ ಸ್ಥಾಪನೆಗೆ ಪ್ರಯತ್ನ ಪಟ್ಟು ಯಶಸ್ವಿಯಾಗಿದ್ದೆವು ಎಂದರು.

ಜಿಲ್ಲೆಯ ಮಹಿಳೆಯರಿಗೆ ಮೀಸಲಾಗಿದ್ದ ಹಾಗೂ ಸಮಾಜದ ಎಲ್ಲಾ ವರ್ಗದವರನ್ನು ಸದಸ್ಯರನ್ನಾಗಿ, ನಿರ್ದೇಶಕರನ್ನಾಗಿ ಆಯ್ಕೆ ಮಾಡಿ ಸುಲಲಿತ ಹಾಗೂ ಲಾಭದಾಯಕವಾಗಿ ನಡೆಯುತ್ತಿದ್ದ ಬ್ಯಾಂಕ್ ಅನ್ನು ಇಂದು ಇಲಾಖೆ ನಿಯಂತ್ರಣವಿಲ್ಲದ ಯಾರಿಗೂ ಗೊತ್ತಿಲ್ಲದ ಬ್ಯಾಂಕಿನೊಡನೆ ವಿಲೀನಗೊಳಿಸುವುದು ಹಾಗೂ ಮಾರಾಟ ಮಾಡಲು ಮುಂದಾಗಿರುವುದು ನಾಚಿಕೇಗೇಡಿನ ಸಂಗತಿ. ಬ್ಯಾಂಕ್ ಉಳಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಇಂತಹ ಪ್ರತಿಷ್ಠಿತ ಪ್ರಪ್ರಥಮ ಮಹಿಳಾ ಸಹಕಾರ ಬ್ಯಾಂಕನ್ನು ಬೇರೆ ಬ್ಯಾಂಕಿನೊಂದಿಗೆ ವಿಲೀನಗೊಳಿಸಬೇಡಿ ಎಂದು ಈಗಾಗಲೇ ಹಾಲಿ ಅಧ್ಯಕ್ಷರಿಗೆ 2022ರ ಸೆ.8 ಹಾಗೂ 2023ರ ಮಾ.6ರಂದು ಪತ್ರ ಬರೆದು ಸೂಚಿಸಿದ್ದೆ. ಈ ನನ್ನ ಪತ್ರಕ್ಕೆ ಈವರೆಗೂ ಯಾವುದೇ ಉತ್ತರ ಸಿಕ್ಕಿಲ್ಲ. ಇದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ತಿಳಿಸಿದರು.

22 ಲಕ್ಷ ಮೌಲ್ಯದ 125 ಮೊಬೈಲ್ ಪತ್ತೆ: ಎಸ್ಪಿ ಯತೀಶ್

ಮಂಡ್ಯ, ಸೆ.7– ಕಳೆದ 3 ತಿಂಗಳಲ್ಲಿ ಜಿಲ್ಲಾದ್ಯಂತ ಕಳ್ಳತನ/ ಕಳೆದುಹೋಗಿದ್ದ 22 ಲಕ್ಷ ರೂ. ಮೌಲ್ಯದ ವಿವಿಧ ಮಾದರಿಯ 125 ಮೊಬೈಲ್ ಫೋನ್‌ಗಳನ್ನು ಮಂಡ್ಯ ಸಿಇಎನ್ ಅಪರಾಧ ವಿಭಾಗದ ಪೊಲೀಸರು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.



ನಗರದ ತಮ್ಮ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆಂಟ್ರಲ್ ಇಕ್ವೀಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ತಂತ್ರಾಂಶದ ಸಹಾಯದಿಂದ ಕಳವು ಹಾಗೂ ಕಳೆದುಹೋಗಿದ್ದ ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದ್ದು, ಅವುಗಳನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ ಎಂದರು.

ಈ ಹಿಂದೆಯೂ 130 ಮೊಬೈಲ್‌ಗಳನ್ನು ಪತ್ತೆಹಚ್ಚಿ ವಾರಸುದಾರರಿಗೆ ಒಪ್ಪಿಸಲಾಗಿತ್ತು. ಇದೀಗ 125 ಮೊಬೈಲ್‌ಗಳನ್ನು ವಶಪಡಿಸಿಕೊಂಡು ವಾರಸುದಾರರಿಗೆ ಹಸ್ತಾಂತರ ಮಾಡಲಾಗಿದೆ. ಇದರೊಂದಿಗೆ ಜಿಲ್ಲೆಯಲ್ಲಿ 45 ಲಕ್ಷ ರೂ. ಮೌಲ್ಯದ 255 ಮೊಬೈಲ್‌ಗಳನ್ನು ಪತ್ತೆ ಹಚ್ಚಿದಂತಾಗಿದೆ. ಒಂದು ವೇಳೆ ನಿಮ್ಮ ಮೊಬೈಲ್ ಕಳೆದುಕೊಂಡಲ್ಲಿ ಮೊಬೈಲ್‌ಗೆ ಸಂಬಂಧಪಟ್ಟ ದಾಖಲಾತಿ, ಸಂಬಂಧಪಟ್ಟವರ ಗುರುತಿನ ಚೀಟಿಯೊಂದಿಗೆ KSP app ನಲ್ಲಿ e-lost ಪ್ರತಿ ಪಡೆದು www.ceir.gov.inನಲ್ಲಿ ಲಾಗಿನ್ ಆಗಿ ನೀವಿದ್ದ ಸ್ಥಳದಲ್ಲಿಯೇ ದೂರನ್ನು ದಾಖಲಿಸಬಹುದು ಎಂದು ವಿವರಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕ ಸಿ.ಇ.ತಿಮ್ಮಯ್ಯ ಮಾರ್ಗದರ್ಶನದಲ್ಲಿ ಮಂಡ್ಯ ಜಿಲ್ಲಾ ಸಿಇಎನ್ ಅಪರಾಧ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕ ಮಂಜೇಗೌಡರ ನೇತೃತ್ವದಲ್ಲಿ ಎಸ್‌ಐಗಳಾದ ರಾಘವೇಂದ್ರ ಕಠಾರಿ, ರಸೂಲಸಾಬ ಗೌಂಡಿ ಹಾಗೂ ಸಿಬ್ಬಂದಿಗಳಾದ ಗಿರೀಶ್, ಸುಮನ್ ಸೇರಿದಂತೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನೊಳಗೊಂಡಂತೆ ತಂಡ ರಚಿಸಲಾಗಿತ್ತು ಎಂದರು.

ಮೊಬೈಲ್ ಕಳವು ಪ್ರಕರಣ ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಮಂಡ್ಯ ಸಿಇಎನ್ ಅಪರಾಧ ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ಈ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಪ್ರಶಂಸಿಸಿದರು.

ಹೆದ್ದಾರಿ ದರೋಡೆ 4 ಪ್ರಕರಣ ಪತ್ತೆ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆನಲ್ಲಿ ಒಟ್ಟು 7 ದರೋಡೆ ಪ್ರಕರಣ ನಡೆದಿದ್ದು, ಈ ಪೈಕಿ 4 ದರೋಡೆ ಪ್ರಕರಣಗಳನ್ನು ಭೇದಿಸಲಾಗಿದೆ ಎಂದರು.

ಹೆದ್ದಾರಿಯಲ್ಲಿ ಸಂಚಾರ ಮಾಡುವವರು ನಿರ್ಜನ ಪ್ರದೇಶದಲ್ಲಿ ವಾಹನಗಳನ್ನು ನಿಲ್ಲಿಸಬೇಡಿ ಹಾಗೂ ಒಂದು ವೇಳೆ ನಿಲ್ಲಿಸಬೇಕೆಂದರೆ ಪೆಟ್ರೋಲ್ ಬಂಕ್ ಅಥವಾ ಟೋಲ್ ಗೇಟ್ ಬಳಿ ನಿಲ್ಲಿಸಿ ವಿಶ್ರಾಂತಿ ಪಡೆಯಬೇಕು. ಪೊಲೀಸ್ ಇಲಾಖೆ ವತಿಯಿಂದ 8 ಗಸ್ತು ವಾಹನಗಳು ಸಂಚರಿಸುತ್ತಿರುತ್ತವೆ. ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ಸಿ.ಇ.ತಿಮ್ಮಯ್ಯ ಹಾಜರಿದ್ದರು.

ಮಂಡ್ಯ ಜಿಲ್ಲಾ ಕಾಂಗ್ರೆಸ್ ನೂತನ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಗುರುವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಶಾಸಕ ಗಣಿಗ ರವಿಕುಮಾರ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಮುಖಂಡರಾದ ಪಾಪಣ್ಣ, ರಮೇಶ್, ನಟ ಸಚಿನ್ ಚಲುವರಾಯಸ್ವಾಮಿ ಸೇರಿದಂತೆ ಇತರರಿದ್ದರು.





ಮೈಸೂರಿನ ಮಹದೇಶ್ವರ ಬಡಾವಣೆ ವಾರ್ಡ್ ನಂ.3ರಲ್ಲಿ ಮಹಾನಗರ ಪಾಲಿಕೆಯ 20 ಲಕ್ಷ ರೂ. ವೆಚ್ಚದ ಒಳಚರಂಡಿ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ಕೆ.ವಿ. ಶ್ರೀಧರ, ಮುಖಂಡರಾದ ರಾಮಚಂದ್ರ, ಬಸವರಾಜ್, ಮಹದೇವ್, ರಾಜ, ಹರೀಶ್, ಪಾರ್ವತಮ್ಮ ಇತರರಿದ್ದರು.

ಖಾಸಗಿ ವಲಯದಲ್ಲಿ ದುಡಿಯುವ 45 ಲಕ್ಷ ಕಾರ್ಮಿಕರಿಗೆ ಸರ್ಕಾರದ ನಾನಾ ಸೌಲಭ್ಯ

- ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾಹಿತಿ
- ಇದರಡಿ ಡ್ರೈವರ್, ಕಂಡಕ್ಟರ್, ಕ್ಲೀನರ್, ಮೆಕ್ಯಾನಿಕ್ಸ್, ಆನ್‌ಲೈನ್ ಆಹಾರ ಸರಬರಾಜುದಾರರು ಬರಲಿದ್ದಾರೆ

ಬೆಂಗಳೂರು, ಸೆ.7–(ಕೆಎಂಶಿ) ಖಾಸಗಿ ವಲಯದಲ್ಲಿ ದುಡಿಯುತ್ತಿರುವ ಡ್ರೈವರ್, ಕಂಡಕ್ಟರ್, ಕ್ಲೀನರ್, ಮೆಕ್ಯಾನಿಕ್ಸ್, ಆನ್‌ಲೈನ್ ಆಹಾರ ಸರಬರಾಜು ಮಾಡುತ್ತಿರುವ ಸುಮಾರು ನಲವತ್ತೈದು ಲಕ್ಷ ಕಾರ್ಮಿಕರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡುವುದಾಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಇಂದಿಲ್ಲಿ ಪ್ರಕಟಿಸಿದ್ದಾರೆ.



ಅಧಿಕಾರಿಗಳ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ದುಡಿಯುವ ಕಾರ್ಮಿಕರನ್ನು ಅಸಂಘಟಿತ ವಲಯಕ್ಕೆ ಸೇರಿಸುವುದರಿಂದ ಆರೋಗ್ಯ, ಶಿಕ್ಷಣ, ಪಿಂಚಣಿ ಸೇರಿದಂತೆ ಹಲವು ಕಲ್ಯಾಣ ಕಾರ್ಯಕ್ರಮಗಳ ಪ್ರಯೋಜನ ದೊರೆಯಲಿದೆ. ಕಟ್ಟಡ ಕಾರ್ಮಿಕರಿಗೆ ದೊರೆಯುತ್ತಿರುವ ಎಲ್ಲಾ ಸೌಲಭ್ಯಗಳು ಈ ವಲಯಕ್ಕೂ ಲಭ್ಯವಾಗಲಿದೆ. ಸಾರಿಗೆ ವಿಭಾಗದಲ್ಲೇ 40 ಲಕ್ಷ, ಆಹಾರ ಸರಬರಾಜು ವಲಯದಲ್ಲಿ 4 ಲಕ್ಷ, ಸಿನಿಮಾ ರಂಗದಲ್ಲಿ 25 ಸಾವಿರ ಸೇರಿದಂತೆ ಒಟ್ಟಾರೆ 45 ಲಕ್ಷ ಕಾರ್ಮಿಕರಿಗೆ ಈ ಸೌಲಭ್ಯ ಕಲ್ಪಿಸಲು ತೀರ್ಮಾನಿಸಲಾಗಿದೆ ಎಂದರು.

ಅಸಂಘಟಿತ ವಲಯಕ್ಕೆ ಸೇರಿದ ನಂತರ ಕಾರ್ಮಿಕರು ಆಕಸ್ಮಿಕ ಮರಣ ಹೊಂದಿದರೆ 2ರಿಂದ 3 ಲಕ್ಷ ರೂ., ಅನಾರೋಗ್ಯಕ್ಕೆ ತುತ್ತಾದರೆ ಆಸ್ಪತ್ರೆಯ ವೆಚ್ಚ, ಅವರ ಮಕ್ಕಳ ವಿದ್ಯಾಭ್ಯಾಸ ಹಾಗೂ ಮದುವೆಯಂತಹ ಶುಭ ಕಾರ್ಯಕ್ಕೂ ಆರ್ಥಿಕ ನೆರವು ದೊರೆಯಲಿದೆ.

ವಾಹನ ನೋಂದಣಿ ಮಾಡುವ ಸಂದರ್ಭದಲ್ಲಿ ಶೇ.5ರಷ್ಟು ಸೆಸ್ಸನ್ನು ಈ ವರ್ಗಕ್ಕೆ ಸಂಗ್ರಹಿಸುತ್ತಿದ್ದು, ಅದು ಸದ್ಬಳಕೆ ಆಗುತ್ತಿಲ್ಲ. ಈ ಹಣ ನಾವು ಪಡೆಯುತ್ತೇವೆ. ಅಲ್ಲದೆ, ಆಹಾರ ಸೇರಿದಂತೆ ವಿವಿಧ ಸಾಗಾಣಿಕೆ ಮಾಡುವ ನೋಂದಾಯಿತ ಸಂಸ್ಥೆಗಳಿಂದ ಶೇ.1ರಷ್ಟು, ಸಿನಿಮಾ ಟಿಕೆಟ್ ಮೇಲೆ ಪ್ರತಿ ಟಿಕೆಟ್‌ಗೆ 25ರಿಂದ 50 ಪೈಸೆ ಸಂಗ್ರಹಿಸಿ ಒಟ್ಟಾರೆ ಹಣವನ್ನು ಕ್ರೋಢೀಕರಿಸಿ ಈ ವಲಯದ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲು ತೀರ್ಮಾನಿಸಲಾಗಿದೆ.

ಈ ಮಧ್ಯೆ ರಾಜ್ಯದ ವಿವಿಧ ಭಾಗಗಳಲ್ಲಿ ಐವತ್ತು ಹಾಸಿಗೆಗಳ ಸಾಮರ್ಥ್ಯದ ವಿಶ್ವದರ್ಜೆ ಗುಣಮಟ್ಟದ ಆಸ್ಪತ್ರೆಯನ್ನು ಕಾರ್ಮಿಕರಿಗಾಗಿ ಕಟ್ಟುವ ಪ್ರಸ್ತಾಪವಿದ್ದು, ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಇ.ಎಸ್.ಐ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕಾದ ಬಹುತೇಕ ಕಾರ್ಮಿಕರು ಆ ಆಸ್ಪತ್ರೆಗಳಿಂದ ಖಾಸಗಿ ಆಸ್ಪತ್ರೆಗೆ ಶಿಫಾರಸು ಪಡೆದು ಹೋಗುತ್ತಿದ್ದಾರೆ. ಹೀಗಾಗಿ ನಾವೇ ಅಂತಾರಾಷ್ಟ್ರೀಯ ಗುಣಮಟ್ಟದ ಆಸ್ಪತ್ರೆಗಳನ್ನು ಕಟ್ಟಿಸಿದರೆ ಪರಿಸ್ಥಿತಿ ಉತ್ತಮವಾಗಬಹುದು ಎಂದರು.

ರಾಜ್ಯಾದ್ಯಂತ ಕಾರ್ಮಿಕ ಕಾರ್ಡುಗಳನ್ನು ಪಡೆದವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ಹಲವು ಸವಲತ್ತುಗಳನ್ನು ನೀಡುವ ಕಾರ್ಮಿಕ ಕಾರ್ಡುಗಳನ್ನು ಈಗಾಗಲೇ 44 ಲಕ್ಷ ಮಂದಿ ಪಡೆದಿದ್ದು, ಹೊಸತಾಗಿ 12 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈ ಕಾರ್ಡುಗಳನ್ನು ಪಡೆಯಲು ನಿರ್ದಿಷ್ಟ ದಾಖಲೆಗಳನ್ನು ನೀಡಬೇಕಿದ್ದರೂ ಹಲವು ಮಂದಿ ಸುಮ್ಮನೆ ಕಾರ್ಡು ಪಡೆದಿದ್ದು, ಇಷ್ಟು ಪ್ರಮಾಣದ ಕಾರ್ಡುದಾರರಿಗೆ ಸೌಲಭ್ಯಗಳನ್ನು ನೀಡಲು ಹೋದರೆ ಕೆಲವೇ ಕಾಲದಲ್ಲಿ ಕಾರ್ಮಿಕ ಮಂಡಳಿಯಲ್ಲಿ ಹಣವೇ ಇಲ್ಲದಂತಾಗುತ್ತದೆ ಎಂದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ಹದಿಮೂರು ಲಕ್ಷದಷ್ಟಿದ್ದ ಕಾರ್ಮಿಕ ಕಾರ್ಡುಗಳು ಬಿಜೆಪಿ ಅವಧಿಯಲ್ಲಿ ನಲವತ್ನಾಲ್ಕು ಲಕ್ಷಕ್ಕೆ ಏರಿತು ಎಂದು ವಿವರಿಸಿದ ಅವರು, ಈಗ ಈ ಕಾರ್ಡುದಾರರಲ್ಲಿ ಅರ್ಹರು ಎಷ್ಟು ಎಂಬುದನ್ನು ಪರಿಶೀಲಿಸಿ ಮುಂದಿನ ಹೆಜ್ಜೆ ಇಡಬೇಕಿದೆ ಎಂದರು.

ಜಿ20 ಶೃಂಗಸಭೆ: ಇಂದು ಜೋ ಬೈಡನ್, ರಿಷಿ ಸುನಕ್ ಸೇರಿ ವಿಶ್ವ ನಾಯಕರ ಆಗಮನ

ಗಣ್ಯರ ಸ್ವಾಗತಕ್ಕೆ ವಿವಿಧ ಸಚಿವರ ನಿಯೋಜನೆ

G20 ಭಾರತ 2023 INDIA

ನವದೆಹಲಿ, ಸೆ.7– ಜಿ20 ಶೃಂಗಸಭೆಗಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಭಾರತಕ್ಕೆ ಆಗಮಿಸುತ್ತಿದ್ದು, ನಾಳೆ ಸಂಜೆ 6:55ಕ್ಕೆ ಅಮೆರಿಕ ಅಧ್ಯಕ್ಷರನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ರಾಜ್ಯ ಸಚಿವ ಮತ್ತು ನಾಗರಿಕ ವಿಮಾನಯಾನ ಜನರಲ್ (ನಿವೃತ್ತ) ವಿ.ಕೆ.ಸಿಂಗ್ ಸ್ವಾಗತಿಸಲಿದ್ದಾರೆ.

ಜಪಾನ್ ಪ್ರಧಾನಿ ಫ್ಯೂಮಿಯೊ ಕಿಶಿಡಾ ಅವರನ್ನು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಅವರು ಮಧ್ಯಾಹ್ನ 2.15ಕ್ಕೆ ಬರಮಾಡಿಕೊಳ್ಳಲಿದ್ದಾರೆ.

ಆಸ್ಟ್ರೇಲಿಯದ ಪ್ರಧಾನ ಮಂತ್ರಿ ಆಂಥೋನಿ ಅಲ್ಬನೀಸ್ ಅವರನ್ನು ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಸಂಜೆ 6:15ಕ್ಕೆ ಸ್ವಾಗತಿಸಲಿದ್ದಾರೆ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ ಅವರನ್ನು ಕ್ರಮವಾಗಿ ರಾತ್ರಿ 8 ಮತ್ತು 8.45ಕ್ಕೆ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರೈ ಬರಮಾಡಿಕೊಂಡರೆ, ಜವಳಿ ಮತ್ತು ರೈಲ್ವೆ ರಾಜ್ಯ ಸಚಿವ ದರ್ಶನ ವಿಕ್ರಮ್ ಜರ್ದೋಶ್ ಮಧ್ಯಾಹ್ನ 12.30ಕ್ಕೆ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರನ್ನು ಸ್ವಾಗತಿಸಲಿದ್ದಾರೆ. ಅಶ್ವಿನಿ ಕುಮಾರ್ ಚೌಬೆ ಅವರು ಯುನೈಟೆಡ್ ಕಿಂಗ್‌ಡಮ್ (ಯುಕೆ) ಪ್ರಧಾನಿ ರಿಷಿ ಸುನಕ್ ಅವರನ್ನು ಮಧ್ಯಾಹ್ನ 1.40ಕ್ಕೆ ಸ್ವಾಗತಿಸಲಿದ್ದರೆ. ಇನ್ನು ವಿಕೆ ಸಿಂಗ್ ಅವರು ಚೀನಾದ ಪ್ರಧಾನಮಂತ್ರಿ ಲಿ ಕೆಕಿಯಾಂಗ್ ಅವರನ್ನು ಸಂಜೆ 7.45ಕ್ಕೆ ಸ್ವಾಗತಿಸಲಿದ್ದಾರೆ. ನಂತರ ಸಿಂಗ್ ಅವರು ನೆದರ್ಲ್ಯಾಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ ಅವರನ್ನು ರಾತ್ರಿ 8:15ಕ್ಕೆ ಬರಮಾಡಿಕೊಳ್ಳಲಿದ್ದಾರೆ.

ದಕ್ಷಿಣ ಕೊರಿಯಾದ ಅಧ್ಯಕ್ಷ ಸುಕ್ ಯೋಲ್ ಯೂನ್ ಅವರನ್ನು ಸಂಜೆ 5.10ಕ್ಕೆ, ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್–ಸಿಸಿ ಅವರನ್ನು ಸಂಜೆ 5.45ಕ್ಕೆ ಮತ್ತು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು ಸಂಜೆ 7 ಗಂಟೆಗೆ ರಾಜೀವ್ ಚಂದ್ರಶೇಖರ್ ಬರಮಾಡಿಕೊಳ್ಳಲಿದ್ದಾರೆ.

ಉಕ್ಕು ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಫಗ್ಗನ್‌ಸಿಂಗ್ ಕುಲಾಸ್ತೆ ಅವರು ಅರ್ಜೆಂಟೀನಾ ಅಧ್ಯಕ್ಷ ಆಲ್ಬರ್ಟೊ ಫೆರ್ನಾಂಡಿಸ್ ಅವರನ್ನು ಬೆಳಗ್ಗೆ 6.20ಕ್ಕೆ ಬರಮಾಡಿಕೊಳ್ಳಲಿದ್ದಾರೆ. ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಇಟಲಿ ಪ್ರಧಾನಿ ಜಾರ್ಜಿಯೊ ಮೆಲೊನಿ ಅವರನ್ನು ಬೆಳಗ್ಗೆ 8:50ಕ್ಕೆ ಸ್ವಾಗತಿಸಲಿದ್ದಾರೆ.

ರೈಲ್ವೆ, ಕಲ್ಲಿದ್ದಲು ಮತ್ತು ಗಣಿಗಳ ರಾಜ್ಯ ಸಚಿವ ರಾವ್ಸಾಹೇಬ್ ದಾನ್ವೆ ಅವರು ಕೊಮೊರೊಸ್ ಒಕ್ಕೂಟದ ಅಧ್ಯಕ್ಷ ಮತ್ತು ಆಫ್ರಿಕನ್ ಒಕ್ಕೂಟದ ಅಧ್ಯಕ್ಷ ಅಜಲಿ ಅಸ್ಸೌಮಾನಿ ಅವರನ್ನು ಬೆಳಿಗ್ಗೆ 10.25ಕ್ಕೆ ಮತ್ತು ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಾಫೋಸಾ ಅವರನ್ನು ಬೆಳಿಗ್ಗೆ 11.45ಕ್ಕೆ ಬರಮಾಡಿಕೊಳ್ಳಲಿದ್ದಾರೆ.

ಇಂಡೋನೇಷ್ಯಾ ಅಧ್ಯಕ್ಷ ಜೊಕೊ ವಿಡೋಡೊ ಅವರನ್ನು ರಾತ್ರಿ 9.15ಕ್ಕೆ ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ರಾತ್ರಿ 10.15ಕ್ಕೆ ಮತ್ತು ಸ್ಪೇನ್ ಅಧ್ಯಕ್ಷ ಪೆಡ್ರೊ ಸ್ಯಾಂಚೆಜ್ ಪೆರೆಜ್ ಕ್ಯಾಸ್ಟೆಜೊನ್ ಅವರನ್ನು ರಾತ್ರಿ 10.45ಕ್ಕೆ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ರಾಜ್ಯ ಸಚಿವ ಶಾಂತನು ಠಾಕೂರ್ ಅವರು ಬರಮಾಡಿಕೊಳ್ಳಲಿದ್ದಾರೆ. ಸೆಪ್ಟೆಂಬರ್ 9ರಂದು ಮಧ್ಯಾಹ್ನ 12:35ಕ್ಕೆ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವ ಅನುಪ್ರಿಯಾ ಪಟೇಲ್ ಬರಮಾಡಿಕೊಳ್ಳಲಿದ್ದಾರೆ.

ಮೂಲಗಳ ಪ್ರಕಾರ ಶುಕ್ರವಾರ ಭಾರತ ಮಂಟಪದಲ್ಲಿ ಮಧ್ಯಾಹ್ನ ಪತ್ರಿಕಾಗೋಷ್ಠಿ ನಡೆಯಲಿದೆ. ನಾಳೆ ಮೂರು ದ್ವಿಪಕ್ಷೀಯ ಸಭೆಗಳನ್ನು ಸಹ ನಿಗದಿಪಡಿಸಲಾಗಿದೆ. ಅತ್ಯಂತ ಪ್ರಮುಖವಾದದ್ದು ಸಂಜೆ 7:45ರ ಸುಮಾರಿಗೆ 45 ನಿಮಿಷಗಳ ಕಾಲ ಅಮೆರಿಕಾದ ಜೊತೆ ಇರುತ್ತದೆ.

'ಭಾರತ್ ಜೋಡೋ ಯಾತ್ರೆಗೆ 1 ವರ್ಷ

ರಾಮನಗರದಲ್ಲಿ ಸಿಎಂ, ಡಿಸಿಎಂ ನೇತೃತ್ವದಲ್ಲಿ ಕಾಂಗ್ರೆಸ್ ಐದು ಕಿಲೋಮೀಟರ್ ಪಾದಯಾತ್ರೆ

- ಜೆಡಿಎಸ್, ಬಿಜೆಪಿಗೆ ಸೆಡ್ಡು ಹೊಡೆದ ಸಿಎಂ ಸಿದ್ದರಾಮಯ್ಯ
- ಪ್ರಧಾನಿ ಮೋದಿ ವಿರುದ್ಧವೂ ಗುಡುಗಿದ ಕಾಂಗ್ರೆಸ್ ನಾಯಕರು



ರಾಮನಗರ, ಸೆ.7– ಭಾರತ್ ಜೋಡೋ ಯಾತ್ರೆಗೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ಗುರುವಾರ ಸಂಜೆ ರಾಮನಗರದಲ್ಲಿ ಕಾಂಗ್ರೆಸ್ ವತಿಯಿಂದ ಪಾದಯಾತ್ರೆ ನಡೆಸಲಾಯಿತು. 5 ಕಿ.ಮೀ. ನಡೆದ ಈ ಪಾದಯಾತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ.ಸುರೇಶ್, ಸಚಿವ ಮಂಕಾಳ ವೈದ್ಯ, ಶಾಸಕರಾದ ಬಾಲಕೃಷ್ಣ, ಇಕ್ಬಾಲ್ ಹುಸೇನ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಬಳಿಯಿಂದ ಆರಂಭವಾದ ಪಾದಯಾತ್ರೆ ಐಗೂರು ವೃತ್ತದಲ್ಲಿ ಕೊನೆಗೊಂಡು ಅಲ್ಲಿ ವೇದಿಕೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನರೇಂದ್ರ ಮೋದಿಯವರು ಪ್ರಧಾನಿ ಆದ ಬಳಿಕ ಭಾರತೀಯರ ಭಾವನೆಗಳನ್ನು ಕೆರಳಿಸಿ, ಭಾರತೀಯ ಸಮಾಜವನ್ನು ವಿಭಜಿಸಿ, ಭಾರತೀಯರ ಹೃದಯಗಳನ್ನು ಒಡೆಯುವ ಮೂಲಕ ಎಷ್ಟಾಗುತ್ತೋ ಅಷ್ಟು ಮತ ಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಭಾರತೀಯರನ್ನು ವಿಭಜಿಸಿ, ಹಿಂಸಿಸಿ ಮತ ಗಳಿಸುವ ದುಸ್ಥಿತಿ ಬಿಜೆಪಿಗೆ ಬಂದಿದೆ ಎಂದು ಟೀಕಿಸಿದರು.

ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ದುಡಿಯುವ ವರ್ಗದವರು ಅಭದ್ರತೆಯಲ್ಲಿ ಬದುಕುವಂತಹ ಹೀನಾಯ ಸ್ಥಿತಿಗೆ ದೇಶವನ್ನು ದೂಡಿದ್ದಾರೆ. ಭಾರತವನ್ನು ಕಟ್ಟಿದ ಸಮುದಾಯಗಳನ್ನು ಛಿದ್ರಗೊಳಿಸುವುದನ್ನು ವಿರೋಧಿಸಿ ಬೆವರಿನ ಸಂಸ್ಕೃತಿಯಡಿ ಎಲ್ಲರನ್ನೂ ಒಟ್ಟುಗೂಡಿಸುವ ಸಲುವಾಗಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ್ ಜೋಡೋ ಯಾತ್ರೆ ನಡೆಯಿತು ಎಂದರು.

ರಾಮನಗರ ಜಿಲ್ಲೆಯ ಇವತ್ತಿನ ದುಸ್ಥಿತಿಗೆ ಯಾರು ಕಾರಣ? ಇಷ್ಟು ವರ್ಷ ಜಿಲ್ಲೆ ಯಾರ ಹಿಡಿತದಲ್ಲಿತ್ತು ಎಂದು ಸಿದ್ದರಾಮಯ್ಯ ಪ್ರಶ್ನಿಸಿದಾಗ ನೆರೆದಿದ್ದ ಕಾರ್ಯಕರ್ತರು ಜೆಡಿಎಸ್ ಎಂದು ಕೂಗಿದರು. ಮಾತು ಮುಂದುವರೆಸಿದ ಸಿದ್ದರಾಮಯ್ಯ, ಈಗ ನಾವು ಬಂದಿದ್ದೇವೆ. ರಾಮನಗರ ಜಿಲ್ಲೆಯ ಅಭಿವೃದ್ಧಿಗೆ ಇಲ್ಲಿನ ಜನ ಸಾಕ್ಷಿಯಾಗುತ್ತಾರೆ. ಡಿ.ಕೆ.ಸುರೇಶ್ ಬಹಳಷ್ಟು ಕೆಲಸ ಮಾಡಿದ್ದಾರೆ. ಬಿಜೆಪಿ, ಜೆಡಿಎಸ್ ಒಟ್ಟಾದರೂ ಅವರನ್ನು ಸೋಲಿಸಲು ಸಾಧ್ಯವಿಲ್ಲ. ರಾಮನಗರದಲ್ಲಿ ಅಭಿವೃದ್ಧಿ ಪರ್ವವನ್ನು ವೇಗಗೊಳಿಸುವ ಜವಾಬ್ದಾರಿ ನಮ್ಮ ಸರ್ಕಾರದ್ದಾಗಿದ್ದು, ಜನವರಿ ವೇಳೆಗೆ ರಾಮನಗರಕ್ಕೆ ವಿಶೇಷ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು.

ಹಿಂದಿನ ಸರ್ಕಾರದ ಸಚಿವ ಅಶ್ವತ್ಥ ನಾರಾಯಣ್ ರಾಮನಗರ ಜಿಲ್ಲೆಗೆ ಯಾಕೆ ಮೆಡಿಕಲ್ ಕಾಲೇಜ್ ಕೊಡಲಿಲ್ಲ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು, ಜಿಲ್ಲೆಗೆ ಬಂದಿದ್ದ ಮೆಡಿಕಲ್ ಕಾಲೇಜನ್ನು ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋಗಿದ್ದು, ಸಚಿವರಾಗಿದ್ದ ಸುಧಾಕರ್, ಇವರಿಬ್ಬರೂ ಬಿಜೆಪಿಯವರೇ. ಜಿಲ್ಲೆಗೆ ಅನ್ಯಾಯ ಮಾಡಿದ ಇವರ ಜೊತೆ ಜೆಡಿಎಸ್‌ನವರು ಸೇರಿಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಇವರಿಬ್ಬರಿಗೂ ನೈತಿಕತೆ ಇಲ್ಲ. ರಾಮನಗರ ಮತ್ತು ಕನಕಪುರ ಎರಡೂ ಕಡೆಗಳಲ್ಲೂ ಮೆಡಿಕಲ್ ಕಾಲೇಜು ಬೇಕೆಂದರೆ ಅದನ್ನು ಮಾಡಲು ನಾವು ಸಿದ್ಧ ಎಂದು ಸಿದ್ದರಾಮಯ್ಯ ಹೇಳಿದರು.

ಮೈಸೂರು ಮಿತ್ರ

ಆರು ಮಂದಿಯ ಬಾಳು ಪ್ರಜ್ವಲಿಸಿದ ಪ್ರಜ್ವಲ್!

ಅಪಘಾತದಲ್ಲಿ ಮೆದುಳು ವೈಫಲ್ಯಗೊಂಡ ಪಾಂಡವಪುರದ ಬಳಿಯ ಇಂಗಲಕುಪ್ಪೆ ಯುವಕನ ಸಾರ್ಥಕತೆ



ಮೈಸೂರು, ಸೆ.7(ಎಸ್‌ಬಿಡಿ)– ಅಪಘಾತದಿಂದ ಮೆದುಳು ವೈಫಲ್ಯ (ಬ್ರೈನ್ ಡೆಡ್)ವಾಗಿದ್ದ ಯುವಕನೊಬ್ಬನ ಅಂಗಾಂಗಗಳು ಆರು ಮಂದಿಗೆ ಜೀವದಾನ ನೀಡಿವೆ.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ದಾಖಲಿಸಿದ್ದ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು ಇಂಗಲಕುಪ್ಪೆ ಗ್ರಾಮದ ಇ.ಎ.ಪ್ರಜ್ವಲ್(20)ನ ಎರಡು ಕಿಡ್ನಿ, ಒಂದು ಲಿವರ್, ಹೃದಯ ಕವಾಟಗಳು, ಶ್ವಾಸಕೋಶ ಹಾಗೂ ಕಾರ್ನಿಯಾಗಳನ್ನು ಬೇರ್ಪಡಿಸಿ, ಅಗತ್ಯವಿದ್ದವರಿಗೆ ದಾನ ಮಾಡಲಾಗಿದೆ. ಪಾಂಡವಪುರ ಸಕ್ಕರೆ ಕಾರ್ಖಾನೆ ಬಳಿ ರೈಲ್ವೆ ಫ್ಲೈಓವರ್ ಸಮೀಪ ಆ.30ರಂದು ಸಂಭವಿಸಿದ್ದ ಬೈಕ್ ಅಪಘಾತದಲ್ಲಿ ಪ್ರಜ್ವಲ್ ತೀವ್ರವಾಗಿ ಗಾಯಗೊಂಡಿದ್ದ. ಆತನನ್ನು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೆದುಳಿನ ಅಂಗಾಂಶಕ್ಕೆ ಘಾಸಿಯಾಗಿದ್ದರಿಂದ ನಾಲ್ಕು ದಿನ ತೀವ್ರ ನಿಗಾ ಘಟಕದಲ್ಲಿ ಜೀವ ರಕ್ಷಣೆ ಬೆಂಬಲದೊಂದಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಸೆ.2ರ ತಡರಾತ್ರಿ ಮೆದುಳು ವೈಫಲ್ಯ ಎಂದು ನಿಯಮಾನುಸಾರ ಘೋಷಿಸಿದರು.

ವೈದ್ಯಕೀಯ ಪರೀಕ್ಷೆಯಲ್ಲಿ ಪ್ರಜ್ವಲ್‌ನ ಅಂಗಾಂಗಗಳು ದಾನಕ್ಕೆ ಯೋಗ್ಯವಾಗಿವೆ ಎಂದು ತಿಳಿದಿದ್ದರಿಂದ ಈ ಸಂಬಂಧ ವೈದ್ಯರು ಆತನ ಕುಟುಂಬದವರೊಂದಿಗೆ ಸಮಾಲೋಚನೆ ನಡೆಸಿದಾಗ, ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿದರು. ಬಳಿಕ 'ಜೀವ ಸಾರ್ಥಕತೆ' ಸಂಸ್ಥೆ ಅಧಿಕಾರಿಗಳು ಅಂಗ ಸ್ವೀಕರಿಸುವವರು ನಿರೀಕ್ಷಣಾ ಪಟ್ಟಿ ಅನುಸಾರ ಪ್ರಕ್ರಿಯೆ ಆರಂಭಿಸಿದರು. ವೈದ್ಯರ ತಂಡ ಸೆ.2ರ ಬೆಳಗ್ಗೆ ಪ್ರಜ್ವಲ್ ಅಂಗಾಂಗಗಳನ್ನು ಕ್ರಾಸ್–ಕ್ಯಾಂಪ್ ಮಾಡಿತು. ಇದೇ ಆಸ್ಪತ್ರೆಗೆ ಲಿವರ್ ಹಾಗೂ ಒಂದು ಕಿಡ್ನಿ, ಬೆಂಗಳೂರು ಶೇಷಾದ್ರಿಪುರಂ ಅಪೋಲೊ ಬಿಜಿಎಸ್ ಆಸ್ಪತ್ರೆಗೆ ಶ್ವಾಸಕೋಶ, ನಾರಾಯಣ ಹೃದಯಾಲಯಕ್ಕೆ ಹೃದಯ ಕವಾಟಗಳು, ಮೈಸೂರಿನ ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಗೆ ಮತ್ತೊಂದು ಕಿಡ್ನಿ ಹಾಗೂ ಕಾರ್ನಿಯಾಗಳನ್ನು ಕೆ.ಆರ್.ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ವೈಸ್ ಪ್ರೆಸಿಡೆಂಟ್ ಹಾಗೂ ಯೂನಿಟ್ ಹೆಡ್ ಎನ್.ಜಿ.ಭರತೀಶ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಶೈವ ಲಿಂಗಾಯತ ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು, ಸೆ. 7 – ಬೆಂಗಳೂರಿನ ಲಿಂಗಾಯತ ಕಲ್ಯಾಣ ಟ್ರಸ್ಟ್‌ನಲ್ಲಿ ವೀರಶೈವ ಲಿಂಗಾಯತ ವಧು–ವರರ ಮುಖಾಮುಖಿ ಸಮಾವೇಶವನ್ನು ಸೆ. 10 ರಂದು ಮಧ್ಯಾಹ್ನ 2 ಗಂಟೆಗೆ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 22269237 ಸಂಪರ್ಕಿಸಬಹುದು. ಇಚ್ಛೆವುಳ್ಳ ವಧು–ವರರ ಮತ್ತು ಪೋಷಕರು ಈ ಸಮಾವೇಶದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.

ಶ್ರೀಕೃಷ್ಣ ಲೀಲೋತ್ಸವ ವೈಭವ



ಮೈಸೂರು, ಸೆ.7(ಎಸ್‌ಬಿಡಿ)– ಮೈಸೂರಿನ ಶ್ರೀಕೃಷ್ಣ ಮಿತ್ರ ಮಂಡಳಿ, ಶ್ರೀಕೃಷ್ಣ ಟ್ರಸ್ಟ್ ಮತ್ತು ಶ್ರೀಕೃಷ್ಣಧಾಮದ ಸಹಯೋಗದಲ್ಲಿ ಗುರುವಾರ ಶ್ರೀಕೃಷ್ಣ ಲೀಲೋತ್ಸವ ವೈಭವದಿಂದ ನೆರವೇರಿತು.

ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಸಾನಿಧ್ಯದಲ್ಲಿ ಶ್ರೀಕೃಷ್ಣ ದೇವರ ಭವ್ಯ ಮೆರವಣಿಗೆ ನಡೆಸಲಾಯಿತು. ಹಲವರು ಶ್ರೀಕೃಷ್ಣ, ಬಲರಾಮ, ರಾಧೆ, ಯಶೋಧೆ, ದೇವಕೀ ಮುಂತಾದ ವೇಷಭೂಷಣದೊಂದಿಗೆ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಗಮನ ಸೆಳೆದರು. ವಿವಿಧ ಭಜನಾ ಮಂಡಳಿ, ಚಂಡೆ ಬಳಗ, ಓಲಗ ಇನ್ನಿತರ ಕಲಾ ತಂಡಗಳು ಮೆರುಗು ಹೆಚ್ಚಿಸಿದ್ದವು.

ಹೂಗಳಿಂದ ಅಲಂಕರಿಸಿದ್ದ ಬೆಳ್ಳಿಯ ಪುಟ್ಟ ಶ್ರೀಕೃಷ್ಣನ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ಕಲಾವಿದರೊಬ್ಬರು ಪಟದ ಕುಣಿತ ಸೇವೆ ಸಲ್ಲಿಸಿದ್ದು ಕಣ್ಮನ ಸೆಳೆದರು. ಮಹಿಳೆಯರು ಕೋಲಾಟದ ಮೂಲಕ ದೇವರ ಸ್ಮರಣೆ ಮಾಡಿದರು. ನೂರಾರು ಮಂದಿ ಮೆರವಣಿಗೆಯಲ್ಲಿ ಭಾಗಿಯಾಗಿ ಶ್ರೀಕೃಷ್ಣನ ಕೃಪೆಗೆ ಪಾತ್ರರಾದರು. ರಸ್ತೆ ಇಕ್ಕೆಲಗಳಲ್ಲಿ ನಿಂತು ಮೆರವಣಿಗೆ ಕಣ್ತುಂಬಿಕೊಂಡು ದೇವರಿಗೆ ನಮಿಸಿದ ಭಕ್ತರು, ಮೊಬೈಲ್‌ನಲ್ಲಿ ಸೆರೆ ಹಿಡಿದು ಸಂಭ್ರಮಿಸಿದರು. ಮೆರವಣಿಗೆ ಸಂಪನ್ನಗೊಂಡ ಬಳಿಕ ರಾತ್ರಿ ರಥೋತ್ಸವ, ರಂಗಪೂಜೆ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

ನಿಧನ



ಅಂದಾನಿಸ್ವಾಮಿ

ಮೈಸೂರು, ಸೆ.7– ಮೈಸೂರಿನ ನಾಯ್ಡುನಗರ ನಿವಾಸಿ ಅಂದಾನಿಸ್ವಾಮಿ (59) ಅವರು ಅನಾರೋಗ್ಯದಿಂದ ಗುರುವಾರ ಬೆಳಗ್ಗೆ ನಿಧನರಾದರು. ಖಾಸಗಿ ಸುದ್ದಿ ವಾಹಿನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು, ಪತ್ನಿ, ಪುತ್ರ, ಸ್ನೇಹಿತರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಸಂಜೆ ಅವರ ಸ್ವಗ್ರಾಮ ಬನ್ನೂರಿನ ಕೇತುಪುರದಲ್ಲಿ ಅಂತ್ಯ ಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬಗಳು ಮೂಲಗಳು ತಿಳಿಸಿವೆ.

ಮೈಸೂರಿನ ಹೆಬ್ಬಾಳಲ್ಲಿ ಶ್ರೀ ಆದಿಚುಂಚನಗಿರಿ ಶಾಖಾ ಮಠದ ನೂತನ ಕಟ್ಟಡ ಸೆ.10ರಂದು ಉದ್ಘಾಟನೆ

- ಬಿಜಿಎಸ್ ಸಾಂಸ್ಕೃತಿಕ ಭವನ, ಉಚಿತ ವಿದ್ಯಾರ್ಥಿನಿಲಯ ಲೋಕಾರ್ಪಣೆ
- ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾಹಿತಿ





ಮೈಸೂರು, ಸೆ.7(ಬಿಎಲ್‌ಯು)– ಮೈಸೂರಿನ ಹೆಬ್ಬಾಳು ಲಕ್ಷ್ಮಿ ಕಾಂತ ಸ್ವಾಮಿ ದೇವಸ್ಥಾನದ ಬಳಿ ನೂತನವಾಗಿ ನಿರ್ಮಿಸಿರುವ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಟ್ಟಡ, ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿನಿಲಯದ ಲೋಕಾರ್ಪಣೆ ಕಾರ್ಯಕ್ರಮ ಸೆ.10ರಿಂದ ಎರಡು ದಿನಗಳ ಕಾಲ ನಡೆಯಲಿದೆ. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಮೈಸೂರಿನ ಬೋಗಾದಿಯ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, 1,800 ವರ್ಷಗಳ ಐತಿಹಾಸಿಕ ಹಿನ್ನೆಲೆ ಇರುವ ಆದಿಚುಂಚನಗಿರಿ ಮಠ ಇಂದು ದೇಶ–ವಿದೇಶದಲ್ಲಿ ಶಾಖೆಗಳನ್ನು ಹೊಂದಿದೆ. ಈಗ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಮೈಸೂರಿನಲ್ಲಿ ನೂತನ ವಿದ್ಯಾರ್ಥಿನಿಲಯವನ್ನು ನಿರ್ಮಾಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಮತ್ತಷ್ಟು ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಸೆಪ್ಟೆಂಬರ್ 10ರಂದು ಸಂಜೆ 7 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರು ನೇತೃತ್ವ ವಹಿಸಲಿದ್ದು, ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉಪಸ್ಥಿತರಿರುವರು. ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಮೇಯರ್ ಶಿವಕುಮಾರ್ ಮುಖ್ಯ ಅತಿಥಿಗಳಾಗಿದ್ದು, ಮಹಾಸಂಸ್ಥಾನದ ಶಾಖಾ ಮಠಗಳ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಮಾರನೇ ದಿನವಾದ ಸೆಪ್ಟೆಂಬರ್ 11ರಂದು ಬೆಳಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದಜೀ ಅವರು, ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಡಾ.ಭಾಷ್ಯಂ ಸ್ವಾಮಿಜಿಯವರು ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬಿಜಿಎಸ್ ಸಾಂಸ್ಕೃತಿಕ ಭವನವನ್ನು ಉದ್ಘಾಟಿಸಲಿದ್ದು, ಉಚಿತ ವಿದ್ಯಾರ್ಥಿನಿಲಯದ ಉದ್ಘಾಟನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೆರವೇರಿಸುತ್ತಾರೆ. ಬಿಜಿಎಸ್ ಅತಿಥಿ ಗೃಹವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸುತ್ತಾರೆ ಎಂದರು.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು 'ಗೋರಕ್ಷನಾಥರ ಸಿದ್ಧ ಸಿದ್ಧಾಂತ ಪದ್ಧತಿ' ಗ್ರಂಥವನ್ನು, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು 'ಗೋರಕ್ಷನಾಥರ ತತ್ವ ದರ್ಶನ' ಗ್ರಂಥವನ್ನು, ಶಾಸಕ ಜಿ.ಟಿ.ದೇವೇಗೌಡರು 'ಸಾಹುಕಾರ್ ಚೆನ್ನಯ್ಯ' ಅವರ ಕುರಿತಾದ ಗ್ರಂಥವನ್ನು ಹಾಗೂ ಸಂಸದ ಪ್ರತಾಪ್ ಸಿಂಹ 'ಕೆದಂಬಾಡಿ ರಾಮೇಗೌಡರ' ಕುರಿತಾದ ಗ್ರಂಥವನ್ನು ಬಿಡುಗಡೆ ಮಾಡುವರು ಎಂದು ಸ್ವಾಮೀಜಿ ವಿವರಿಸಿದರು.

ಸಂಸದ ವಿ.ಶ್ರೀನಿವಾಸ ಪ್ರಸಾದ್, ಮೇಯರ್ ಶಿವಕುಮಾರ್, ವಿಧಾನಸಭಾ ಸದಸ್ಯರಾದ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ರಮೇಶ್‌ಬಾಬು ಬಂಡೀಸಿದ್ದೇಗೌಡ, ದರ್ಶನ್ ಧ್ರುವನಾರಾಯಣ್ ಹಾಗೂ ದರ್ಶನ್ ಪುಟ್ಟಣ್ಣಯ್ಯ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್. ಪುಟ್ಟರಾಜು, ವಾಸು, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸುನೀತಾ ವೀರಪ್ಪಗೌಡ, ಎಂ.ಕೆ.ಸೋಮಶೇಖರ್, ಹೆಚ್.ಪಿ.ಮಂಜುನಾಥ್, ಅಶ್ವಿನ್‌ಕುಮಾರ್, ಕೆ.ಮಹದೇವು, ಕಳಲೆಕೇಶವಮೂರ್ತಿ, ಹರ್ಷವರ್ಧನ್, ಹೆಚ್.ಸಿ.ಬಸವರಾಜು, ಚಿಕ್ಕಣ್ಣ, ರವೀಂದ್ರ ಶ್ರೀಕಂಠಯ್ಯ, ಡಿ.ಮಾದೇಗೌಡ, ಸಿ.ಹೆಚ್. ವಿಜಯಶಂಕರ್, ಸಂದೇಶ್ ನಾಗರಾಜ್, ಗೋ.ಮಧುಸೂದನ್, ಕೆ.ಟಿ.ಶ್ರೀಕಂಠೇಗೌಡ ಅತಿಥಿಗಳಾಗಿ ಆಗಮಿಸುವರು ಎಂದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಸಿ.ಜಿ.ಗಂಗಾಧರ, ಕೆ.ವಿ.ಶ್ರೀಧರ್, ಎಂ.ಬಿ.ಮಂಜೇಗೌಡ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷ ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಚೇತನ್ ಕೂಡ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಸೆಪ್ಟೆಂಬರ್ 10 ರಂದು ಬೆಳಗ್ಗೆ 6 ಗಂಟೆಗೆ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದಿಂದ ಶ್ರೀ ಕಾಲಭೈರವೇಶ್ವರನ ಭೈರವ ಜ್ಯೋತಿ ಹೊರಡಲಿದ್ದು, ನಾಗಮಂಗಲ, ಮೇಲುಕೋಟೆ, ಪಾಂಡವಪುರ, ಶ್ರೀರಂಗಪಟ್ಟಣ ಮಾರ್ಗವಾಗಿ ಮೈಸೂರು ನಗರ ಪ್ರವೇಶಿಸಲಿದೆ. ಜಾನಪದ ಕಲಾತಂಡಗಳೊಂದಿಗೆ ಮೈಸೂರಿನ ಎಲ್ಲಾ ಭಕ್ತರು, ಸಂಘ ಸಂಸ್ಥೆಯ ಸದಸ್ಯರು ಜ್ಯೋತಿಯನ್ನು ಸ್ವಾಗತಿಸಲಿದ್ದಾರೆ. ತರುವಾಯ ಭೈರವ ಜ್ಯೋತಿಯು ನಗರದ ಎಲ್ಲಾ ಬಡಾವಣೆಗಳಲ್ಲಿ ಸಂಚರಿಸಿ ಸಂಜೆ ಲಕ್ಷ್ಮಿಕಾಂತ ದೇವಸ್ಥಾನಕ್ಕೆ ಸಾಧು ಸಂತರೊಡನೆ ಪ್ರವೇಶ ಮಾಡಲಿದೆ ಎಂದು ಸ್ವಾಮೀಜಿ ತಿಳಿಸಿದರು. ಅದೇ ದಿನ ಬೆಳಗ್ಗೆ 8 ಗಂಟೆಗೆ ಮಹಾಗಣಪತಿ ಪೂಜೆ, ತೀರ್ಥ ಸಂಗ್ರಹಣ, ಹೋಮ ಸೇರಿದಂತೆ ಎಲ್ಲಾ ರೀತಿಯ ಧಾರ್ಮಿಕ ಪೂಜಾ ವಿಧಿ ವಿಧಾನಗಳು ನಡೆಯಲಿದ್ದು, ಅಂತಿಮವಾಗಿ ಪೂರ್ಣಾಹುತಿ ನೆರವೇರಲಿದೆ. ಮತ್ತೆ ಸಂಜೆ ಕೂಡ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು. ಸೆ.11ರಂದು ಮಹಾಗಣಪತಿ ಪೂಜೆ, ಸಂಕಲ್ಪ, ವೇದಿಕಾರ್ಚನೆ, ಅಗ್ನಿ ಕಾರ್ಯ, ನವಚಂಡಿಕಾ ಮಹಾಯಾಗ ಅಧ್ಯಾಯ ಹೋಮ, ಗಜಪೂಜೆ, ಅಶ್ವಪೂಜೆ, ಗೋ ಪೂಜೆ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಸ್ವಾಮೀಜಿ ಹೇಳಿದರು. ಮೈಸೂರು ನಗರದ ಎಲ್ಲಾ ವರ್ಗದ ಜನರ ಜೊತೆಗೂಡಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಲಾಗುವುದು ಎಂದು ತಿಳಿಸಿದರು. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಡನ್ನಾಳುವವನು ನಾಸ್ತಿಕನಾದರೂ ಪ್ರಜೆಗಳ ಆಸ್ತಿಕತೆ ಗೌರವಿಸಬೇಕು...

ಉದಯನಿಧಿ ಸ್ಟಾಲಿನ್‌ಗೆ ಆದಿಚುಂಚನಗಿರಿ ಶ್ರೀಗಳ ಕಿವಿಮಾತು

ಮೈಸೂರು,ಸೆ.7(ಬಿಎಲ್‌ಯು)–ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯಕ್ತಿ ಎಚ್ಚರಿಕೆಯಿಂದ ಸದಾ ನಿಗಾ ಇಟ್ಟು ಮಾತನಾಡಬೇಕು. ನಾಡನ್ನಾಳುವವನು ನಾಸ್ತಿಕನಾದರೂ ಪ್ರಜೆಗಳ ಆಸ್ತಿಕತೆಯನ್ನು ಗೌರವಿಸಬೇಕು ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪುತ್ರ, ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್‌ಗೆ ಕಿವಿಮಾತು ಹೇಳಿದ್ದಾರೆ.

ಮೈಸೂರಿನ ಬೋಗಾದಿಯ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸನಾತನ ಧರ್ಮ ಕುರಿತಂತೆ ಉದಯನಿಧಿ ಸ್ಟಾಲಿನ್ ನೀಡಿರುವ ವಿವಾದಿತ ಹೇಳಿಕೆಗೆ ಸ್ವಾಮೀಜಿ ಪ್ರತಿಕ್ರಿಯಿಸಿದರು.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ... ಎಂಬ ಮಹಾ ಭಾರತದ ಸಂದೇಶವನ್ನು ಉಲ್ಲೇಖಿಸಿದ ಸ್ವಾಮೀಜಿ, ಸನಾತನ ಎಂಬ ಪದಕ್ಕೆ ಶಾಶ್ವತ ಎನ್ನುವ ಅರ್ಥವಿದೆ ಎಂದು ಹೇಳಿದರು. ಸನಾತನ ಪದಕ್ಕೆ ಇಂಗ್ಲಿಷ್‌ನಲ್ಲಿ ಪುರಾತನ (ancient) ಎಂದು ಅರ್ಥ. ಸನಾತನ ಎಂಬ ಪದವನ್ನು ಶಾಶ್ವತ ಎಂದು ವ್ಯಾಖ್ಯಾನ ಮಾಡಬಹುದು. ಸನಾತನ ಎಂಬುದು ಹಿಂದೆಯೂ ಇತ್ತು, ಈಗಲೂ ಇದೆ ಹಾಗೂ ಮುಂದೆಯೂ ಇರುತ್ತದೆ. ಸನಾತನ ಪದಕ್ಕೆ ಪುರಾತನ ಎಂಬ ಅರ್ಥ ಇದ್ದು, ಈ ಇತಿಹಾಸ ಎಲ್ಲರಿಗೂ ಗೊತ್ತಿದೆ ಎಂದು ಸ್ವಾಮೀಜಿ ಇಸ್ಲಾಂ, ಬೌದ್ಧ, ಜೈನ ಸೇರಿದಂತೆ ಇತರೆ ಧರ್ಮಗಳಿಗೂ ಇತಿಹಾಸವಿದೆ. ಆದರೆ ಇದೆಲ್ಲಕ್ಕಿಂತ ಪುರಾತನವಾದ ಧರ್ಮವೆಂದರೆ ಅದು ಹಿಂದೂ ಧರ್ಮವಾಗಿದೆ. ಕೃಷ್ಣ ಮಹಾಭಾರತದಲ್ಲಿ ಸರ್ವ–ಧರ್ಮಾನ್ ಪರಿತ್ಯಜ್ಯ ಮಾಮ್ ಏಕಮ್ ಶರಣಂ ವ್ರಜ ಎಂದಿದ್ದಾನೆ. ಈ ಮಾತಿಗೆ ಗಹನವಾದ ಅರ್ಥವಿದೆ. ಎಲ್ಲಾ ಧರ್ಮ ಬಿಟ್ಟು ಬನ್ನಿ ಎಂದು ಕೃಷ್ಣ ಹೇಳಲಿಲ್ಲ. ಬದಲಿಗೆ ಮನಸ್ಸಿನ ಕೊಳಕನ್ನು ಬಿಟ್ಟು ಅತ್ಯುನ್ನತವಾದ ಅಧ್ಯಾತ್ಮಿಕ ಪ್ರಜ್ಞೆಗೆ ಶರಣಾಗಿ ಎಂದು ಕೃಷ್ಣ ಪರಮಾತ್ಮ ಹೇಳಿದ್ದಾನೆ. ಪ್ರತಿಯೊಬ್ಬರಿಗೂ ಆಮ್ಲಜನಕ ಬೇಕು. ಆಮ್ಲಜನಕ ಇಲ್ಲದೆ ಇರುತ್ತೇನೆ ಎನ್ನಲು ಸಾಧ್ಯವಿಲ್ಲ. ಹಾಗೆಯೇ ಧರ್ಮ ಕೂಡ ಎಂದು ಸ್ವಾಮೀಜಿ ಅವರು ಮಹಾಭಾರತದ ಕೆಲವು ಶ್ಲೋಕಗಳನ್ನು ಉಲ್ಲೇಖಿಸಿ ವಿವರಿಸಿದರು.

ಧರ್ಮದ ಬಗ್ಗೆ ತಿಳಿದುಕೊಂಡವನು ಬೇರೆ ಮಾತನಾಡುವುದಿಲ್ಲ. ಆದರೆ ಧರ್ಮದ ಬಗ್ಗೆ ತಿಳಿಯದವನು ತನ್ನ ಧರ್ಮ ಹಾಗೂ ಇತರೆ ಧರ್ಮದ ಬಗ್ಗೆ ಮಾತನಾಡುತ್ತಾನೆ. ನಾಡನ್ನಾಳುವವನು ನಾಸ್ತಿಕನಾದರೂ ಪ್ರಜೆಗಳ ಆಸ್ತಿಕತೆಯನ್ನು ಗೌರವಿಸಬೇಕು. ಯಾವುದೇ ವ್ಯಕ್ತಿಯನ್ನು ಬಲವಂತವಾಗಿ ಬೇರೊಂದು ಧರ್ಮಕ್ಕೆ ಸೆಳೆಯಲು ಸಾಧ್ಯವಿಲ್ಲ ಎಂದು ಸ್ವಾಮೀಜಿ ಹೇಳಿದರು.

ಇಂಡಿಯಾ ಬದಲಾಗಿ 'ಭಾರತ' ಎಂದು ಮರು ನಾಮಕರಣ ಮಾಡಲಾಗುತ್ತಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಸ್ವಾಮೀಜಿ, ಇಂಗ್ಲಿಷ್‌ನಲ್ಲಿ ಇಂಡಿಯಾ ಎಂತಲೂ, ಹಿಂದಿಯಲ್ಲಿ ಭಾರತ ಎಂತಲೂ ಬಳಸುತ್ತಿದ್ದೇವೆ. ಹಿಂದಿ ಹಾಗೂ ಕನ್ನಡದಲ್ಲಿ ಬರೆಯುವಾಗ ಭಾರತ ಸರ್ಕಾರ ಎಂದೇ ಬರೆಯುತ್ತೇವೆ. ಕೆಲವೊಮ್ಮೆ ಇಂಡಿಯನ್ ಗೌರ್ನಮೆಂಟ್ ಎಂದು ಬಳಸುತ್ತೇವೆ. ಇಂಡಿಯಾ ಬದಲಿಗೆ ಭಾರತ ಎಂದು ಮರು ನಾಮಕರಣ ಮಾಡುವ ಪ್ರಸ್ತಾಪ ನಮ್ಮ ಮುಂದಿಲ್ಲ ಎಂದು ಕೇಂದ್ರ ಸರ್ಕಾರವೇ ಸ್ಪಷ್ಟನೆ ನೀಡಿರುವ ಕಾರಣ. ಈಗ ಚರ್ಚೆ ಅನಗತ್ಯ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಥಟ್ ಅಂತ ಉತ್ತರಿಸಿ ವಚನಸಾಹಿತ್ಯ ರಸಪ್ರಶ್ನೆ ಅಶ್ವಿನಿ ಮಂಜುನಾಥ್‌ಗೆ ಬಹುಮಾನ

ಮೈಸೂರು: ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 67ನೇ ವಚನ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆ ಎಚ್.ಡಿ. ಕೋಟೆ ಪಟ್ಟಣದ ಅಶ್ವಿನಿ ಮಂಜುನಾಥ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ಪ್ರಧಾನ ಅಂಚೆ ಕೇಂದ್ರದಲ್ಲಿ ಅಂಚೆ ರಫ್ತು ಕೇಂದ್ರ ಆರಂಭ

ಮೈಸೂರು, ಸೆ.7–ಸಣ್ಣ ಮತ್ತು ಮಧ್ಯಮ ಉದ್ದಿಮೆದಾರರಿಗೆ ಉತ್ತೇಜನ ನೀಡಲು ಮತ್ತು ರಫ್ತು ಉದ್ಯಮವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಪ್ರಧಾನ ಅಂಚೆ ಕಚೇರಿ ಮತ್ತು ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗಳಲ್ಲಿ ಅಂಚೆ ರಫ್ತು ಕೇಂದ್ರಗಳನ್ನು ಆರಂಭಿಸಿದ್ದು, ಉದ್ದಿಮೆದಾರರು ಇದರ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕಿ ಡಾ.ಏಂಜಲ್ ರಾಜ್ ತಿಳಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು ಆನ್‌ಲೈನ್‌ನಲ್ಲಿ ದಾಖಲೆಗಳ ಅಪ್‌ಲೋಡ್, ರಫ್ತು ಪರವಾನಗಿ, ಪ್ರಮಾಣ ಪತ್ರ, ವಸ್ತು ವಿವರ, ರಫ್ತುದಾರರ ವಿವರ ಹೀಗೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ಬೆಂಗಳೂರಿಗೆ ಹೋಗಬೇಕಾಗಿತ್ತು. ಈಗ ರಫ್ತುದಾರರು ಇರುವಲ್ಲಿಯೇ ಡಾಕ್ ನಿರ್ಯಾತ್ ಪೋರ್ಟಲ್‌ನಲ್ಲಿ (https://dnk.cept.gov.in/custormers.web/) ಭರ್ತಿ ಮಾಡಲು ಅವಕಾಶ ನೀಡಲಾಗಿದೆ ಎಂದು ಹೇಳಿದ್ದಾರೆ. ವಿವರಗಳಿಗಾಗಿ 0821–2417308 ಮತ್ತು 9108901005 ಸಂಪರ್ಕಿಸುವಂತೆ ತಿಳಿಸಿದ್ದಾರೆ.

ದಸರಾ, ಲೋಕಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ ರೌಡಿ ಚಟುವಟಿಕೆಗೆ ಕಡಿವಾಣ ಹಾಕಿ

ಎಲ್ಲಾ ಉಪವಿಭಾಗದ ಎಸಿಪಿಗಳಿಗೆ ಕಾನೂನು–ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್ ತಾಕೀತು

ಮೈಸೂರು, ಸೆ.7(ಆರ್‌ಕೆ)– 2023ರ ದಸರಾ ಮಹೋತ್ಸವ ಹಾಗೂ 2024ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಯಾವುದೇ ಹಿಂಸಾತ್ಮಕ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ವಹಿಸುವುದರೊಂದಿಗೆ ಮೈಸೂರಿನಲ್ಲಿ ರೌಡಿ ಚಟುವಟಿಕೆಗಳನ್ನು ಮಟ್ಟ ಹಾಕಿ ಎಂದು ಮೈಸೂರು ನಗರ ಘಟಕದ ಕಾನೂನು ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್, ಎಲ್ಲಾ ಉಪವಿಭಾಗಗಳ ಎಸಿಪಿಗಳಿಗೆ ತಾಕೀತು ಮಾಡಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರ ನಿರ್ದೇಶನದಂತೆ ಬುಧವಾರ ನಜರ್‌ಬಾದ್‌ನ ತಮ್ಮ ಕಚೇರಿಯಲ್ಲಿ ಸಭೆ ನಡೆಸಿದ ಅವರು, ದಸರಾ ಮಹೋತ್ಸವ ಹಾಗೂ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಅನಗತ್ಯವಾಗಿ ಗೊಂದಲ, ಗದ್ದಲ, ಘರ್ಷಣೆ, ಸುಲಿಗೆ, ಬೆದರಿಕೆ, ದಬ್ಬಾಳಿಕೆ, ದೌರ್ಜನ್ಯಗಳಿಗೆ ಅವಕಾಶ ನೀಡದಂತೆ ಎಲ್ಲಾ ಠಾಣಾ ಇನ್ಸ್‌ಪೆಕ್ಟರ್‌ಗಳಿಗೆ ಸೂಚನೆ ನೀಡಬೇಕೆಂದು ಎಸಿಪಿಗಳಿಗೆ ನಿರ್ದೇಶನ ನೀಡಿದರು.

ಠಾಣಾ ಸರಹದ್ದಿನಲ್ಲಿರುವ ರೌಡಿ ಶೀಟರ್‌ಗಳ ಮೇಲೆ ನಿಗಾ ಇರಿಸಿ ಸಕ್ರಿಯವಾಗಿರುವವರನ್ನು ನಿತ್ಯ ಕರೆಸಿ ಎಚ್ಚರಿಕೆ ನೀಡಬೇಕು, ಪುನರಾವರ್ತನೆ ಪ್ರಕರಣಗಳು ಕಂಡುಬಂದಲ್ಲಿ ಅಂತಹವರನ್ನು ಖಾಯಂ ಆಗಿ ಜೈಲಿನಲ್ಲಿರಿಸಲು ಕ್ರಮ ವಹಿಸಬೇಕು. ಪುಡಿ ರೌಡಿಗಳು ಬೆಳೆಯಲು ಬಿಡಬಾರದು ಎಂದು ಮುತ್ತುರಾಜ್ ಇದೇ ವೇಳೆ ತಿಳಿಸಿದರು.

ಭೂಮಿ ವಿಚಾರ, ಲೇವಾದೇವಿ, ಕೌಟುಂಬಿಕ ವಿವಾದ, ರಿಯಲ್ ಎಸ್ಟೇಟ್ ದಂಧೆ, ಗಲಾಟೆ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸಿ ಸಮಸ್ಯೆ ಇತ್ಯರ್ಥಪಡಿಸುವ ನೆಪದಲ್ಲಿ ಧಮ್ಕಿ ಹಾಕಿ ಬೆದರಿಸುವವರನ್ನು ಸುಮ್ಮನೆ ಬಿಡಬೇಡಿ. ವಿಷಯ ತಿಳಿದ ತಕ್ಷಣ ಕರೆತಂದು ಕಾನೂನಿನನ್ವಯ ಕ್ರಮ ಕೈಗೊಳ್ಳಬೇಕು. ದ್ವೇಷ, ಅಸೂಯೆಯಿಂದ ಬೇರೆಯವರನ್ನು ಟಾರ್ಗೆಟ್ ಮಾಡುವುದು ನಿಮ್ಮ ಗಮನಕ್ಕೆ ಬಂದ ತಕ್ಷಣ ನಿರ್ಲಕ್ಷಿಸದೇ ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದೂ ಡಿಸಿಪಿ ಖಡಕ್ ಸೂಚನೆ ನೀಡಿದರು.



ಡಿಸಿಪಿ ಎಂ.ಮುತ್ತುರಾಜ್

ಪ್ರತೀ ದಿನ ಠಾಣಾ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಗುಂಪುಗಾರಿಕೆ, ಜನ್ಮ ದಿನಾಚರಣೆ ನೆಪದಲ್ಲಿ ರಾತ್ರಿ ಇಡೀ ಪಾರ್ಟಿ ಮಾಡುವುದು, ಗುಪ್ತ ಸಭೆ, ಸಮಾಜಘಾತುಕ ಚಟುವಟಿಕೆಗಳಿಗೆ ಪ್ಲಾನ್ ಮಾಡುವುದು, ಭೂ ವಿವಾದಗಳಲ್ಲಿ ಅನಗತ್ಯ ಭಾಗಿಯಾಗಿ ಶಾಂತಿ ಕದಡುವುದು, ಹಣಕಾಸು ವ್ಯವಹಾರದ ವೈಷಮ್ಯಗಳಂತಹ ಚಟುವಟಿಕೆಗಳ ಸುಳಿವು ಸಿಗುತ್ತಿದ್ದಂತೆಯೇ ಸಂಪೂರ್ಣ ಮಾಹಿತಿ ಪಡೆದು ಆಯಾ ಇನ್ಸ್‌ಪೆಕ್ಟರ್‌ಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಸಂಭವಿಸಬಹುದಾದ ಅಹಿತಕರ ಘಟನೆಗಳನ್ನು ತಪ್ಪಿಸಬೇಕು ಎಂದು ಮುತ್ತುರಾಜ್ ಎಸಿಪಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ನಗರದಲ್ಲಿರುವ ರೌಡಿ ಆಸಾಮಿಗಳ ವಯಸ್ಸುವಾರು ಮಾಹಿತಿ ಸಂಗ್ರಹಿಸಿದ ಅವರು, 65 ವರ್ಷ ಮೇಲ್ಪಟ್ಟ ಹಾಗೂ ಯಾವುದೇ ರೌಡಿ ಚಟುವಟಿಕೆಗಳಿಂದ ದೂರ ಉಳಿದ, ಅನಾರೋಗ್ಯಕ್ಕೆ ತುತ್ತಾಗಿರುವವರ ಪಟ್ಟಿಯನ್ನು ಪ್ರತ್ಯೇಕವಾಗಿರಿಸಿ, ಕಾನೂನಿನ ಪರಿಮಿತಿಯಲ್ಲಿ ವಾಸ್ತವ ಪರಿಸ್ಥಿತಿ ಬಗ್ಗೆ ದೃಢಪಡಿಸಿಕೊಂಡು ಅಂತಹವರ ಹೆಸರನ್ನು ರೌಡಿ ಶೀಟ್‌ನಿಂದ ಕೈಬಿಡುವ ಬಗ್ಗೆಯೂ ಉನ್ನತಾಧಿಕಾರಿಗಳ ಸಲಹೆಯಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ನುಡಿದರು.

ಸಮಾಜಘಾತುಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಅಶಾಂತಿ ಉಂಟುಮಾಡುವ ಪುಡಿ ರೌಡಿಗಳ ಬಗ್ಗೆ ಎಚ್ಚರದಿಂದಿದ್ದು, ಅಂತಹವರನ್ನು ಬೆಳೆಯಲು ಬಿಡಬಾರದು. ಈಗಿನಿಂದಲೇ ಪುಡಿ ರೌಡಿಗಳನ್ನು ಮಟ್ಟ ಹಾಕಿ ಎಂದೂ ಮುತ್ತುರಾಜ್ ಅವರು ಅಧೀನಾಧಿಕಾರಿಗಳಿಗೆ ಇದೇ ವೇಳೆ ತಿಳಿಸಿದರು. ಇಂದು ಬೆಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಅವರು ಕರೆದಿದ್ದ ಪ್ರಗತಿ ಪರಿಶೀಲನಾ ಸಭೆಗೆ ನಿನ್ನೆ ಪಡೆದ ಮಾಹಿತಿಯೊಂದಿಗೆ ಮುತ್ತುರಾಜ್ ಅವರು ಹಾಜರಾಗಬೇಕಾಗಿತ್ತಾದರೂ, ಮೈಸೂರಲ್ಲಿ ಪೊಲೀಸರ ವಿರುದ್ಧ ವಕೀಲರು ಪ್ರತಿಭಟನೆ ಹಮ್ಮಿಕೊಂಡಿದ್ದ ಕಾರಣ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಬೇಕಾದ ಹಿನ್ನೆಲೆಯಲ್ಲಿ ಎಡಿಜಿಪಿ ಸಭೆಗೆ ಹಾಜರಾಗಲಿಲ್ಲ.

ನಿನ್ನೆ (ಬುಧವಾರ) ಡಿಸಿಪಿ ಮುತ್ತುರಾಜ್ ಅವರು ನಡೆಸಿದ ಸಭೆಯಲ್ಲಿ ಎಸಿಪಿಗಳಾದ ಶಾಂತಮಲ್ಲಪ್ಪ, ಅಶ್ವತ್ಥನಾರಾಯಣ, ಗಜೇಂದ್ರಪ್ರಸಾದ್, ಎಸ್‌ಇ ಗಂಗಾಧರಸ್ವಾಮಿ ಹಾಗೂ ಸಂದೇಶಕುಮಾರ್ ಹಾಜರಾಗಿ ರೌಡಿ ಶೀಟರ್‌ಗಳ ಬಗ್ಗೆ ಮಾಹಿತಿ ಒದಗಿಸಿದರು.

ದುಷ್ಕರ್ಮಿಗಳ ಬಗ್ಗೆ ಎಚ್ಚರವಿರಲಿ; 112ಗೆ ಕರೆ ಮಾಡಿ

ಮೈಸೂರು, ಸೆ.7(ಆರ್‌ಕೆ)– ದುಷ್ಕರ್ಮಿ ಗಳು, ಸಮಾಜಘಾತುಕ ಶಕ್ತಿಗಳ ಬಗ್ಗೆ ಎಚ್ಚರದಿಂದಿರಬೇಕು. ಎಂತಹ ತುರ್ತು ಸಂದರ್ಭ ಬಂದರೂ, ತಡ ಮಾಡದೇ ಪೊಲೀಸ್ ಸಹಾಯಕ್ಕಾಗಿ 112ಗೆ ಕರೆ ಮಾಡುವುದನ್ನು ಮರೆಯಬೇಡಿ ಎಂದು ಕಾನೂನು –ಸುವ್ಯವಸ್ಥೆ ಡಿಸಿಪಿ ಎಂ.ಮುತ್ತು ರಾಜ್ ಸಾರ್ವಜನಿಕರಿಗೆ ಕರೆ ನೀಡಿದ್ದಾರೆ. ವೃದ್ಧರನ್ನೇ ಗುರಿಯಾಗಿಸಿಕೊಂಡು ಚಿನ್ನದ ಸರ ಅಪಹರಣ, ಆಕ್ಸಿಡೆಂಟ್ ನೆಪದಲ್ಲಿ ಹಣ ಸುಲಿಗೆ, ಗಮನ ಬೇರೆಡೆ ಸೆಳೆದು ಹಣ ಎಗರಿಸುವುದೂ ಸೇರಿದಂತೆ ದುಷ್ಕರ್ಮಿ ಗಳು ತಮ್ಮ ಕೈಚಳಕ ತೋರುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅಂತಹ ಕೃತ್ಯಗಳನ್ನು ತಡೆಯಲು ಮೈಸೂರು ನಗರದಾದ್ಯಂತ ರಾತ್ರಿ ಮತ್ತು ಹಗಲು ಗಸ್ತು ತೀವ್ರಗೊಳಿಸಿದ್ದೇವೆ ಎಂದರು.

ಸಾರ್ವಜನಿಕರು ಅಪರಿಚಿತ ವ್ಯಕ್ತಿಗಳು, ಶಂಕಿತರ ಬಗ್ಗೆ ಎಚ್ಚರದಿಂದಿರಬೇಕು. ವಾಯು ವಿಹಾರ ಮಾಡುವಾಗ, ನಿರ್ಜನ ಪ್ರದೇಶದಲ್ಲಿ ಸಂಚರಿಸುವಾಗ ತೀವ್ರ ನಿಗಾ ವಹಿಸಿ, ಸಂಶಯಾಸ್ಪದ ವ್ಯಕ್ತಿಗಳು ತಮ್ಮ ಬಳಿ ಬಂದು ಮಾತನಾಡಿ, ಸಹಾಯ ಮಾಡುವಂತೆ ಕೇಳಿದಾಗ ಅಥವಾ ತಮ್ಮ ನೆರವಿಗೆ ಬಂದಾಗ ಅವರ ಮಾತಿಗೆ ಮರುಳಾಗಬಾರದು ಎಂದು ತಿಳಿಸಿದ್ದಾರೆ. ವಾಹನಗಳಲ್ಲಿ ಹೋಗುವಾಗ ಒಂದು ವೇಳೆ ಯಾರಾದರೂ ನಿಮಗೆ ಆಕ್ಸಿಡೆಂಟ್ ಮಾಡಿ ಪರಾರಿಯಾಗುತ್ತಿದ್ದರೆ, ತಕ್ಷಣ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಇದೇ ನೆಪದಲ್ಲಿ ಹಣಕ್ಕೆ ಬೇಡಿಕೆ ಇಟ್ಟಲ್ಲಿ ತಕ್ಷಣ ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಿ. ಅಲ್ಲದೆ, ತಮ್ಮ ಅಕ್ಕಪಕ್ಕದಲ್ಲಿರುವ ಸಾರ್ವಜನಿಕರಿಗೆ ವಿಷಯ ತಿಳಿಸಿ, ಅವರ ನೆರವು ಪಡೆಯ ಬೇಕೆಂದು ಮುತ್ತುರಾಜ್ ತಿಳಿಸಿದ್ದಾರೆ.

ಪೊಲೀಸ್ ಸಿಬ್ಬಂದಿ ಎಲ್ಲೆಡೆ ಕರ್ತವ್ಯ ದಲ್ಲಿ ನಿರತರಾಗಿರುತ್ತಾರೆ. ಯಾವುದೇ ಅಪರಾಧ ಕೃತ್ಯ ಸಂಭವಿಸಿದಲ್ಲಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದಲ್ಲಿ ಅಗತ್ಯ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಪುಣ್ಯಸ್ಮರಣೆ

ದೇಶ ರಕ್ಷಣೆ ಮೂಲಕ ಯುವ ಪೀಳಿಗೆಗೆ ಮಾದರಿಯಾದ ಅಜ್ಜಮಾಡ ದೇವಯ್ಯ



ಮಡಿಕೇರಿ, ಸೆ.7– ಭಾರತ–ಪಾಕಿಸ್ತಾನ ನಡುವೆ ನಡೆದ 1965ರ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ (ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ 58ನೇ ಪುಣ್ಯಸ್ಮರಣೆಯನ್ನು ಮಡಿಕೇರಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕೊಡವ ಮಕ್ಕಡ ಕೂಟ ಹಾಗೂ ಅಜ್ಜಮಾಡ ಒಕ್ಕ(ಕುಟುಂಬಸ್ಥರ) ಸಹಯೋಗದಲ್ಲಿ ನಗರದ ಸ್ವಾಲೀ ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿ ಜನಪ್ರತಿನಿಧಿಗಳು, ನಿವೃತ್ತ ಯೋಧರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಹಾಗೂ ಸಾರ್ವಜನಿಕರು ದೇವಯ್ಯ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ಗೌರವ ಅರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಏರ್ ಮಾರ್ಷಲ್(ನಿವೃತ್ತ) ಕೊಡಂದೇರ ನಂದಾ ಕಾರ್ಯಪ್ಪ, ವೀರ ಸೇನಾನಿ ಸ್ವಾಲೀ. ಅಜ್ಜಮಾಡ ಬಿ.ದೇವಯ್ಯ ಅವರು ದೇಶ ರಕ್ಷಣೆಯ ಮೂಲಕ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ. ಅಜ್ಜಮಾಡ ಬಿ. ದೇವಯ್ಯ ಹಾಗೂ ಕರ್ನಲ್ ಪೊನ್ನಚೆಟ್ಟಿರ ಗಣಪತಿ ಅವರಿಗೆ ಮಹಾವೀರ ಚಕ್ರ ಪ್ರಶಸ್ತಿ ದೊರೆತಿದೆ. ಆ ಮೂಲಕ ಕೊಡಗು ಜಿಲ್ಲೆಗೆ ಎರಡು ಮಹಾವೀರ ಚಕ್ರ ಪ್ರಶಸ್ತಿ ದೊರೆತಂತಾಗಿದೆ. ಇಬ್ಬರೂ ಯೋಧರು ದಕ್ಷತೆ ಮತ್ತು ಶೌರ್ಯಕ್ಕೆ ಹೆಸರುವಾಸಿಯಾಗಿದ್ದಾರೆ. ಇವರ ಆದರ್ಶವನ್ನು ಯುವ ಸಮೂಹ ಮೈಗೂಡಿಸಿಕೊಳ್ಳಬೇಕು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರುವ ಮೂಲಕ ದೇಶಸೇವೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಅಜ್ಜಮಾಡ ಬಿ.ದೇವಯ್ಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಕಟ್ಟಿ ಮಂದಯ್ಯ ಮಾತನಾಡಿ, ದೇಶ ಕಂಡ ಅಪ್ರತಿಮ ವೀರ ಸ್ವಾಲೀ. ಅಜ್ಜಮಾಡ ಬಿ.ದೇವಯ್ಯ ಅವರ 58ನೇ ಪುಣ್ಯಸ್ಮರಣೆ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ. ತಮ್ಮ 32ನೇ ವಯಸ್ಸಿನಲ್ಲೇ ಅಜ್ಜಮಾಡ ಬಿ.ದೇವಯ್ಯ ಅವರು ಕುಟುಂಬದ ಬಗ್ಗೆ ಚಿಂತಿಸದೆ ದೇಶದ ರಕ್ಷಣೆಗಾಗಿ ಜೀವ ನೀಡಿದ್ದಾರೆ. ಅವರ ತ್ಯಾಗ, ಬಲಿದಾನ ಅವಿಸ್ಮರಣೀಯ. ಮಹಾವೀರ ಚಕ್ರ ಪುರಸ್ಕೃತರಾಗಿರುವ ದೇವಯ್ಯ ಅವರನ್ನು ಸದಾ ಸ್ಮರಿಸುವಂತಾಗಬೇಕು ಎಂದರು.

ಇತ್ತೀಚೆಗೆ ಅಜ್ಜಮಾಡ ದೇವಯ್ಯ ವೃತ್ತಕ್ಕೆ ಹಾನಿಯಾಗಿದ್ದು, ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರ ಶ್ರಮದಿಂದ ದುರಸ್ತಿ ಕಾರ್ಯ ಶೀಘ್ರವಾಗಿ ನಡೆದಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ಎಚ್ಚರ ವಹಿಸಬೇಕು ಎಂದರು.

ವಾಯುಪಡೆಯ ನಿವೃತ್ತ ಯೋಧ ಬಾಳೆಯಡ ಶಂಭು ಮಾತನಾಡಿ, ಸ್ವಾಲೀ. ಅಜ್ಜಮಾಡ ದೇವಯ್ಯ ಅವರು, ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ್ದಾರೆ. ಅವರ ಶೌರ್ಯ, ವೀರತ್ವ, ಹೋರಾಟದ ಚಾಕಚಕ್ಯತೆ ಅತ್ಯುನ್ನತವಾಗಿತ್ತು ಎಂದು ಸ್ಮರಿಸಿದರು. ದೇವಯ್ಯ ಅವರ ವೃತ್ತವನ್ನು ಸ್ಥಾಪಿಸುವ ಮೂಲಕ ವೀರಸೇನಾನಿಯ ಹೆಸರು ಚಿರಸ್ಥಾಯಿಗೊಳಿಸಲಾಗಿದೆ. ಯುವ ಸಮೂಹಕ್ಕೆ ಸ್ಫೂರ್ತಿಯಾಗಿರುವ ಪ್ರತಿಮೆಯನ್ನು ಸಂರಕ್ಷಿಸುವ ಕಾರ್ಯ ಆಗಬೇಕಾಗಿದೆ ಎಂದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್, ನಿವೃತ್ತ ಯೋಧರಾದ ಮುಂಜಾಂದಿರ ರಾಜ ಅಪ್ಪಯ್ಯ, ಎಂ.ಕೆ.ಅಚ್ಚಯ್ಯ, ಬೊಟ್ಟಂಗಡ ಜಪ್ಪು, ಅಜ್ಜಮಾಡ ಒಕ್ಕದ ಖಜಾಂಚಿ ಚಂಗಪ್ಪ, ಕುಟುಂಬದ ಪ್ರಮುಖರಾದ ಬೆಳ್ಯಪ್ಪ, ಕಾರ್ಯಪ್ಪ, ಮಹೇಶ್, ಬಾಲಕೃಷ್ಣ, ಸುರೇಶ್, ಪವನ್, ನಂಜಪ್ಪ, ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಉಳ್ಳಿಯಡ ಎಂ.ಪೂವಯ್ಯ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಾನಿಕ ಆಯುಕ್ತ ಹೆಚ್.ಆರ್. ಮುತ್ತಪ್ಪ, ಕೊಡವ ಮಕ್ಕಡ ಕೂಟದ ಕಾರ್ಯದರ್ಶಿ ಪುತ್ತರಿರ ಕರುಣ್ ಕಾಳಯ್ಯ, ಮಡಿಕೇರಿ ಸಮಿತಿ ಕಾರ್ಯದರ್ಶಿ ಅಜ್ಜಮಕ್ಕಡ ವಿನುಕುಶಾಲಪ್ಪ, ಕಾಂಗ್ರೆಸ್ ಮಹಿಳಾ ಘಟಕದ ನಗರಾಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ ಬೆಳ್ಯಪ್ಪ, ನಿವೃತ್ತ ಯೋಧರು, ಅಜ್ಜಮಾಡ ಕುಟುಂಬಸ್ಥರು, ಕೊಡವ ಮಕ್ಕಡ ಕೂಟದ ಸದಸ್ಯರು ಹಾಜರಿದ್ದು ಪುಷ್ಪನಮನ ಸಲ್ಲಿಸಿದರು.

ಇಂದು ಜಿಲ್ಲಾ ಮಟ್ಟದ ಯುವ ಉತ್ಸವ

ಮಡಿಕೇರಿ, ಸೆ.7– ಕೊಡಗು ಜಿಲ್ಲಾಡಳಿತ, ನೆಹರು ಯುವ ಕೇಂದ್ರ, ಯುವ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಯುವ ಒಕ್ಕೂಟ, ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ತಾಲೂಕು ಯುವ ಒಕ್ಕೂಟ, ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಯುವ ಉತ್ಸವವು ಸೆ.8 ರಂದು ಬೆಳಗ್ಗೆ 10 ಗಂಟೆಗೆ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ಶಾಸಕ ಎ.ಎಸ್. ಪೊನ್ನಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

ಸೆ.23ರಿಂದ ಕೊಡವ ಸಮಾಜದ ನೂರಾಂಡ್ ನಮ್ಮೆ ಕಾರ್ಯಕ್ರಮ

ವಿರಾಜಪೇಟೆ, ಸೆ.7– ವಿರಾಜಪೇಟೆ ಕೊಡವ ಸಮಾಜದ ನೂರಾಂಡ್ ನಮ್ಮೆಯು ಸೆ.23 ಮತ್ತು 24 ರಂದು ಕೊಡವ ಸಮಾಜದ ತ್ರಿವೇಣಿ ಶಾಲಾ ಜಿಮ್ಮಿ ಕಲಾ ವೇದಿಕೆಯಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ ಎಂದು ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಎ.ಮನುಕುಮಾರ್ ತಿಳಿಸಿದರು.

ಶತಮಾನೋತ್ಸವದ ಅಂಗವಾಗಿ ಕೊಡವ ಸಮಾಜದ ಸಭಾಂಗಣದಲ್ಲಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ವಿರಾಜಪೇಟೆ ಕೊಡವ ಸಮಾಜ 1921 ರಲ್ಲಿ ಸ್ಥಾಪನೆಯಾಗಿದ್ದು. ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಇದೀಗ ಕೊಡವ ಸಮಾಜ 100 ವರ್ಷಗಳನ್ನು ಪೂರೈಸಿರುವ ಸವಿನೆನಪಿಗಾಗಿ ಸಮಾಜದ ಆಡಳಿತ ಮಂಡಳಿ ವತಿಯಿಂದ ಎರಡು ದಿನಗಳ ಕಾಲ ಹಬ್ಬದಂತೆ ಕ್ರೀಡಾ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಗಣ್ಯರ ಸನ್ಮಾನ, ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ನಗರದ ಗಡಿಯಾರ ಕಂಬದ ಬಳಿಯಿರುವ ಶ್ರೀ ಮಹಾಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಹೊರಟು ದೊಡ್ಡಟ್ಟಿ ಚೌಕಿ, ಅಪ್ಪಯ್ಯ ಸ್ವಾಮಿ ರಸ್ತೆ ಮಾರ್ಗವಾಗಿ ಕೊಡವ ಸಮಾಜ ತಲುಪಲಿದೆ. ಮೆರವಣಿಗೆಯಲ್ಲಿ ಭಾಗವಹಿಸುವ ಕೊಡವ ಜನಾಂಗದವರು ಕೊಡವ ಉಡುಪು ಧರಿಸಬೇಕು ಎಂದರಲ್ಲದೆ ನಮ್ಮೊಂದಿಗೆ ಕೈಜೋಡಿಸಿದ ಹಲವು ದಾನಿಗಳು ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾಗಿದ್ದಾರೆ ಎಂದರು.



ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಮಾತನಾಡಿ, ಸೆ.24 ರಂದು ನಡೆಯುವ ಸಭಾ ಕಾರ್ಯಕ್ರಮದಲ್ಲಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಕೊಡಗು ಮೈಸೂರು ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಲೆಫ್ಟಿನೆಂಟ್ ಜನರಲ್ ಚೆನ್ನಿರ ಬನ್ನಿ ಪೊನ್ನಪ್ಪ, ಡೈರೆಕ್ಟರ್ ಜನರಲ್ ಆಫ್.ಎನ್.ಎಸ್.ಜಿ ಮನೆಯಪಂಡ ಎ.ಗಣಪತಿ, ತೀತಿರ ರೋಶನ್ ಅಪ್ಪಚ್ಚು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದರು.

ಕೊಡವ ಸಮಾಜದ ಮರಣ ನಿಧಿ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ ಮಾತನಾಡಿ, ಸೆ. 23 ರಂದು ಶನಿವಾರ ಕ್ರೀಡಾ ಪೈಪೋಟಿ ನಡೆದ ಬಳಿಕ ಕೊಡವ ಪದ್ಧತಿ, ಆಚಾರ–ವಿಚಾರಗಳನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕಾವೇರಿ ಕಾಲೇಜು ತ್ರಿವೇಣಿ ಶಾಲೆ, ಪೊಮ್ಮಕ್ಕಡ ಕಲಾ ತಂಡ ಹಾಗೂ ತಿಂಗಕೊರ್ ಮೊಟ್ಟ್ ತಲಕಾವೇರಿ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ಪಿ.ಸುಬ್ರಮಣಿ ಮಾತನಾಡಿ, ನೂರಂಡ್ ನಮ್ಮೆ ಕಾರ್ಯಕ್ರಮದ ಅಂಗವಾಗಿ ಸೆ.23 ರಂದು ಬೆಳಗ್ಗೆ 9 ಗಂಟೆಯಿಂದ ಕ್ರೀಡಾ ಕಾರ್ಯಕ್ರಮಗಳು ಆರಂಭವಾಗಲಿದೆ. ಅಂತರ್ ಕೊಡವ ಸಮಾಜಗಳ ಮಧ್ಯೆ ಹಗ್ಗ–ಜಗ್ಗಾಟ, ತೆಂಗಿನಕಾಯಿಗೆ ಗುಂಡು ಹೊಡೆಯುವುದು, ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಪೈಪೋಟಿ, ಕೊಡವ ಓಲಗತಾಟ್, ಬರ್ನಿಂಗ್ ಟ್ರೈನ್ ಮುಂತಾದ ಕ್ರೀಡಾ ಕಾರ್ಯಕ್ರಮ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ವಿರಾಜಪೇಟೆ ಕೊಡವ ಸಮಾಜದ ನಿರ್ದೇಶಕರಾದ ಚೇಮಿರ ಸಿ.ಅರ್ಜುನ್, ಬಾಚೀರ ಜಿ. ಜಗದೀಶ್, ತಾತಂಡ ಕಬೀರ್ ಗಣಪತಿ, ಪುಲಿಯಂಡ ಎ. ಪೊನ್ನಣ್ಣ, ಮೇರಿಯಂಡ ಗಾಯತ್ರಿ, ಚೋಕಂಡ ಪುಷ್ಪಾವತಿ ರೇಖ, ಮುಲ್ಲೇಂಗಡ ಶೀಲ ಅಪ್ಪಯ್ಯ ಉಪಸ್ಥಿತರಿದ್ದರು.

ಗಾಂಜಾ ಮಾರಾಟ; ಇಬ್ಬರ ಬಂಧನ

ಮಡಿಕೇರಿ, ಸೆ.7– ಗಾಂಜಾ ಸರಬರಾಜು ಮತ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

2ನೇ ಮೊಣ್ಣಂಗೇರಿ ನಿವಾಸಿ ಸಚಿನ್(24) ಮತ್ತು ಮಡಿಕೇರಿ ಇಂದಿರಾನಗರ ನಿವಾಸಿ ಹೆಚ್.ಎಂ. ಲೋಕೇಶ್(22) ಬಂಧಿತರು. ನಗರದ ಹೊಸ ಖಾಸಗಿ ಬಸ್ ನಿಲ್ದಾಣದ ಬಳಿ ನಿಷೇಧಿತ ವಸ್ತುಗಳನ್ನು ಸರಬರಾಜು ಮತ್ತು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಂದರ್ಭ ಇಬ್ಬರು ಆರೋಪಿಗಳು ಪೊಲೀಸರಿಗೆ ಸೆರೆಯಾಗಿದ್ದಾರೆ. ಬಂಧಿತರಿಂದ 157 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಆರ್. ಮೋಹನ್ ಕುಮಾರ್ ಮಾರ್ಗದರ್ಶನದಲ್ಲಿ ಮಡಿಕೇರಿ ನಗರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರ ಠಾಣಾಧಿಕಾರಿ ಶ್ರೀನಿವಾಸ್, ಪಿಎಸ್‌ಐ ರಾಧ ಎ.ಬಿ ಮತ್ತು ನಗರ ಪೊಲೀಸ್ ಠಾಣೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕಾರು–ಬೈಕ್ ಡಿಕ್ಕಿ: ಇಬ್ಬರು ಶಿಕ್ಷಕರು ಸೇರಿ ಮೂವರಿಗೆ ಗಾಯ



ಮಡಿಕೇರಿ, ಸೆ.7– ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ, ವಿದ್ಯಾರ್ಥಿ ಹಾಗೂ ಇಬ್ಬರು ಶಿಕ್ಷಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಾಪೋಕ್ಲು ಮೂರ್ನಾಡು ಮುಖ್ಯ ರಸ್ತೆಯ ಬೊಳಿಬಾಣೆ ಎಂಬಲ್ಲಿ ಗುರುವಾರ ಸಂಜೆ ನಡೆದಿದೆ.

ನಾಪೋಕ್ಲುವಿನ ಅಂಕುರ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಮಹೇಶ್ ಹಾಗೂ ವಿನೋದ್ ಎಂಬುವರು ನಾಪೋಕ್ಲು ಕಡೆಯಿಂದ ಮೂರ್ನಾಡು ಕಡೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ ಮೂರ್ನಾಡು ಕಡೆಯಿಂದ ನಾಪೋಕ್ಲುವಿಗೆ ಬರುತ್ತಿದ್ದ ಸ್ವಿಫ್ಟ್ ಕಾರಿನ ನಡುವೆ ಬೊಳಿಬಾಣೆ ಎಂಬಲ್ಲಿ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ಶಿಕ್ಷಕ ಮಹೇಶ್ ಮತ್ತು ವಿನೋದ್ ಹಾಗೂ ಶಿಕ್ಷಕ ಮಹೇಶ್ ಅವರ ಪುತ್ರಿಯ ಕಾಲಿಗೆ ಗಂಭೀರ ಗಾಯಗಳಾಗಿದ್ದು, ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತದಲ್ಲಿ ದ್ವಿಚಕ್ರ ವಾಹನ ಹಾಗೂ ಕಾರಿನ ಮುಂಭಾಗ ಜಖಂ ಗೊಂಡಿದೆ. ಸ್ಥಳಕ್ಕೆ ನಾಪೋಕ್ಲು ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶ್ರೀ ಕಾವೇರಿ ದಸರಾ ಸಮಿತಿ ಅಧ್ಯಕ್ಷರಾಗಿ ಪ್ರಮೋದ್ ಗಣಪತಿ

ಗೋಣಿಕೊಪ್ಪ, ಸೆ.7– ಗೋಣಿಕೊಪ್ಪ ದಸರಾ ಆಚರಿಸುವ ಶ್ರೀ ಕಾವೇರಿ ದಸರಾ ಸಮಿತಿ ಅಧ್ಯಕ್ಷರಾಗಿ ಕುಲ್ಲಚಂಡ ಪ್ರಮೋದ್ ಗಣಪತಿ ಅವರನ್ನು ಆಯ್ಕೆ ಮಾಡಲಾಗಿದೆ. ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸೌಮ್ಯ ಬಾಲು ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಲಾಯಿತು.



ಸೆ.10, ಮೊಸರು ಕುಡಿಕೆ ಒಡೆಯುವ ಸ್ಪರ್ಧೆ

ಮಡಿಕೇರಿ, ಸೆ.7– ಶ್ರೀ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಸೆ.10ರಂದು 'ಮೊಸರು ಕುಡಿಕೆ' ಒಡೆಯುವ ಸ್ಪರ್ಧೆ ನಡೆಯಲಿದೆ. ಅಂದು ಸಂಜೆ 4 ಗಂಟೆಗೆ ದೇವಾಲಯದ ಆವರಣದಲ್ಲಿ ಮೊಸರು ಕುಡಿಕೆ ಒಡೆಯುವ ಸ್ಪರ್ಧೆ ಹಾಗೂ 5 ವರ್ಷದೊಳಗಿನ ಮಕ್ಕಳಿಗೆ ಛದ್ಮವೇಷ ಸ್ಪರ್ಧೆ ಏರ್ಪಡಿಸಲಾಗಿದೆ.

ಛದ್ಮವೇಷ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಮಕ್ಕಳು ದೂರವಾಣಿ ಸಂಖ್ಯೆ 9482037525, 9449696355 ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಸಾರ್ವಜನಿಕರು ದೇವಾಲಯದಲ್ಲಿ ನಡೆಯುವ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಆಡಳಿತ ಮಂಡಳಿ ಕೋರಿದೆ.

ತ.ನಾಡಿಗೆ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ

ತಮಟೆ ಚಳವಳಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹರಾಜು



ಚಾಮರಾಜನಗರ, ಸೆ.7– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ತಮಟೆ ಚಳವಳಿ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಹರಾಜು ಹಾಕುವ ಮೂಲಕ ನಗರದಲ್ಲಿ ಗುರುವಾರ ವಿನೂತನವಾಗಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ, ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ಕ್ರಮ ವಿರೋಧಿಸಿ ರಾಜ್ಯಾದ್ಯಂತ ಕನ್ನಡಪರ ಸಂಘಟನೆಗಳು ನಿರಂತರ ಹೋರಾಟ ಮಾಡುತ್ತಿದ್ದರೂ ಕರ್ನಾಟಕ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ಯಾವುದೇ ಕ್ರಮ ಕೈಗೊಳ್ಳದೇ ರಾಜ್ಯದ ಜನತೆಗೆ ದ್ರೋಹ ಮಾಡುತ್ತಿವೆ ಎಂದು ಆರೋಪಿಸಿದರು.

ಕೇಂದ್ರ, ರಾಜ್ಯ ಹಾಗೂ ಕಾವೇರಿ ನ್ಯಾಯಾಧೀಕರಣ ಕಿವುಡಾಗಿದೆ. ರಾಜ್ಯ ಸರ್ಕಾರ ಕುಡಿಯುವ ನೀರಿಗಾಗಿ ಪರಿತಪಿಸುವ ಜನರ, ರೈತರ ಗೋಳನ್ನು ಕೇಳುತ್ತಿಲ್ಲ. ಕಾವೇರಿ ನೀರನ್ನು ಹರಾಜಿನಲ್ಲಿ ತಮಿಳುನಾಡಿಗೆ ಮಾರಿಕೊಂಡಿದ್ದೀರಾ ಎಂದು ಖಾರವಾಗಿ ಪ್ರಶ್ನಿಸಿದರು.

ಸರ್ಕಾರಕ್ಕೆ ಛೀಮಾರಿ ಹಾಕಿ: ಕಾವೇರಿ, ಕಬಿನಿ ನೀರು ಕುಡಿಯುತ್ತಿರುವ ಮೈಸೂರು ಮತ್ತು ಬೆಂಗಳೂರಿಗರು ಎಚ್ಚೆತ್ತುಕೊಳ್ಳದಿದ್ದರೇ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆ ಅನುಭವಿಸಬೇಕಾಗುತ್ತದೆ. ಹೀಗಾಗಿ ಬೀದಿಗಿಳಿದು ಹೋರಾಡುವ ಮೂಲಕ ಕೇಂದ್ರ, ರಾಜ್ಯ ಸರ್ಕಾರ, ಕಾವೇರಿ ನ್ಯಾಯಾಧೀಕರಣಕ್ಕೆ ಛೀಮಾರಿ ಹಾಕಬೇಕು ಎಂದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ರಾಜು, ರವಿಚಂದ್ರಪ್ರಸಾದ್ ಕಹಳೆ, ನಿಜಧ್ವನಿ ಗೋವಿಂದರಾಜು, ನಂಜುಂಡಸ್ವಾಮಿ, ಮಹೇಶ್‌ಗೌಡ, ಚಾ.ಹ.ರಾಮು, ಗು.ಪುರುಷೋತ್ತಮ್, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ. ಕುಮಾರ್, ಲಿಂಗರಾಜು, ರಾಚಪ್ಪ ಇತರರಿದ್ದರು.

ಹೆದ್ದಾರಿ, ರಸ್ತೆ ಅಪಘಾತ ತಡೆಗೆ

ಜಂಟಿ ಸಮೀಕ್ಷೆ ನಡೆಸಿ ಕ್ರಿಯಾಯೋಜನೆ ಸಿದ್ಧಪಡಿಸಿ

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಸೂಚನೆ



ಚಾಮರಾಜನಗರ, ಸೆ.7– ಜಿಲ್ಲಾ ವ್ಯಾಪ್ತಿಯ ರಸ್ತೆ, ಹೆದ್ದಾರಿಗಳಲ್ಲಿ ಪದೇ ಪದೇ ಅಪಘಾತ ಸಂಭವಿಸುತ್ತಿರುವ ಸ್ಥಳಗಳನ್ನು (ಬ್ಲಾಕ್‌ಸ್ಪಾಟ್) ಗುರುತಿಸಿ, ಅಪಘಾತ ತಪ್ಪಿಸಲು ಕೈಗೊಳ್ಳಬೇಕಿರುವ ಪರಿಹಾರ ಕ್ರಮಗಳಿಗಾಗಿ ವಿವಿಧ ಇಲಾಖೆಗಳು ಜಂಟಿ ಸಮೀಕ್ಷೆ ನಡೆಸಿ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆ ಸೇರಿದಂತೆ ಇತರೆ ವ್ಯಾಪ್ತಿಗೆ ಬರುವ ರಸ್ತೆಗಳ ಕೆಲವು ಸ್ಥಳಗಳಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ವೈಜ್ಞಾನಿಕ ಕಾರಣ ತಿಳಿದು ಅಪಘಾತ ತಡೆಗಟ್ಟಲು ವಹಿಸಬೇಕಿರುವ ಕ್ರಮಗಳಿಗಾಗಿ ರಾಷ್ಟ್ರ, ರಾಜ್ಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ, ಸಾರಿಗೆ, ಪೊಲೀಸ್ ಇಲಾಖೆ ಒಳಗೊಂಡ ಅಧಿಕಾರಿಗಳ ತಂಡ ಇದುವರೆಗೆ ಅಪಘಾತ ಸಂಭವಿಸಿರುವ ಸ್ಥಳಗಳಿಗೆ ಭೇಟಿ ನೀಡಿ ಜಂಟಿ ಸಮೀಕ್ಷೆ ನಡೆಸುವಂತೆ ತಿಳಿಸಿದರು.

ಹೆದ್ದಾರಿಗಳಲ್ಲಿ ವಾಹನ ಸಂಚಾರಕ್ಕೆ ಅನುಕೂಲವಾಗುವ ಮಾರ್ಗದರ್ಶನ ಫಲಕ ಅಳವಡಿಸಬೇಕು. ರಸ್ತೆ, ಸೇತುವೆಗಳಲ್ಲಿ ಅಗತ್ಯವಿರುವ ಕಡೆ ಬ್ಲಿಂಕರ್‌ಗಳು, ಡಿವೈಡರ್ ಪೋಸ್ಟ್, ರಿಫ್ಲೆಕ್ಟರ್ ಸ್ಟಿಕ್ಕರ್‌ಗಳನ್ನು ಹಾಕಬೇಕು. ಹೆದ್ದಾರಿಗಳಲ್ಲಿ ಗುಣಮಟ್ಟದ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು. ಬ್ಲಾಕ್‌ಸ್ಪಾಟ್ ಗುರುತಿಸಿದ ಸ್ಥಳಗಳಲ್ಲಿ ವೈಜ್ಞಾನಿಕ ಸುರಕ್ಷತಾ ವೇಗ ನಿಯಂತ್ರಕ ಕ್ರಮಗಳಿಗೆ ಮುಂದಾಗಬೇಕು ಎಂದರು.

ಹೆದ್ದಾರಿಗಳಲ್ಲಿ ದುರಸ್ತಿ ಕೆಲಸಗಳನ್ನು ಮುಗಿಸಬೇಕು. ನಗರ, ಪಟ್ಟಣ ಪ್ರದೇಶಗಳಲ್ಲಿ ಸಂಚಾರ ನಿಯಮ ಕಟ್ಟುನಿಟ್ಟಾಗಿ ಪಾಲನೆಯಾಗಬೇಕು. ಸಿಗ್ನಲ್‌ಗಳಲ್ಲಿ ರೋಡ್ ಮಾರ್ಕಿಂಗ್, ಡಿವೈಡರ್‌ಗಳಿಗೆ ಬಣ್ಣ ಬಳಿಯುವುದು, ವಾಹನಗಳ ನಿಲುಗಡೆಗೆ ಸ್ಥಳ ಗುರುತಿಸಿ ಅದರ ಪ್ರಕಾರವೇ ವಾಹನಗಳು ನಿಲುಗಡೆ ಮಾಡುವಂತೆ ನೋಡಿಕೊಳ್ಳಬೇಕು ಎಂದರು.

ಎಸ್ಪಿ ಪದ್ಮಿನಿ ಸಾಹು ಮಾತನಾಡಿ, ಅಪಘಾತಗಳ ಸಂಖ್ಯೆ ತಗ್ಗಿಸುವ ನಿಟ್ಟಿನಲ್ಲಿ ಬ್ಲಾಕ್‌ಸ್ಪಾಟ್‌ಗಳಲ್ಲಿ ತುರ್ತಾಗಿ ಅಗತ್ಯವಿರುವ ಕೆಲಸ ನಿರ್ವಹಿಸಬೇಕಿದೆ. ರಸ್ತೆ ಸುರಕ್ಷತೆಗೆ ನಗರ, ಪಟ್ಟಣ ಪ್ರದೇಶಗಳಲ್ಲಿಯೂ ಇಲಾಖಾ ವತಿಯಿಂದ ಹೆಚ್ಚಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಸರಕು ಸಾಗಾಣಿಕೆ ವಾಹನಗಳ ನಿಲುಗಡೆಗಾಗಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಆದ್ಯತೆ ನೀಡಬೇಕಿದೆ ಎಂದರು.

ಈ ವೇಳೆ ಎಡಿಸಿ ಗೀತಾ ಹುಡೇದ, ಡಿವೈಎಸ್‌ಪಿ ಅನ್ಸರ್ ಅಲಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಎಸ್.ಪಿ.ಮಹೇಶ್, ತಾಂತ್ರಿಕ ಸಹಾಯಕ ರಾಮಸ್ವಾಮಿ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್, ಪ್ರಭಾರ ಸಾರಿಗೆ ಅಧಿಕಾರಿ ಗಾಯಿತ್ರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ವಿ. ವೆಂಕಟಲಕ್ಷ್ಮಿ, ನಗರಾಭಿವೃದ್ಧಿ ಪ್ರಾಧಿಕಾರದ ಪ್ರಭಾರ ಆಯುಕ್ತ ರಿತೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎನ್. ನರಸಿಂಹರಾಜು, ನಗರಸಭೆ ಆಯುಕ್ತ ಎಸ್.ವಿ.ರಾಮ್‌ದಾಸ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಮಹೇಶ್, ಇತರೆ ಅಧಿಕಾರಿಗಳು ಸಭೆಯಲ್ಲಿದ್ದರು.

ಇಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

ಚಾಮರಾಜನಗರ ಸೆ.7– ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಹಾಗೂ ಸಾಕ್ಷರತಾ ಸಪ್ತಾಹ ಕಾರ್ಯಕ್ರಮ ಸೆ.8 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜಿಲ್ಲಾ ಕಾರಾಗೃಹ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರೇವಮ್ಮ ನಿಧನ



ಚಾಮರಾಜನಗರ, ಸೆ.7– ತಾಲೂಕಿನ ಬದನಗುಪ್ಪೆ ಗ್ರಾಮದ ನಿವಾಸಿ ಲೇ.ಗುರುಮಲ್ಲಪ್ಪ ಅವರ ಪತ್ನಿ ರೇವಮ್ಮ (86) ಗುರುವಾರ ನಿಧನರಾದರು. ಮೃತರು ಪಿಎಸಿಎಸ್ ಮಾಜಿ ಅಧ್ಯಕ್ಷ ಜಿ. ನಂಜುಂಡಸ್ವಾಮಿ, ಪ್ರಭುಸ್ವಾಮಿ, ಪೋಸ್ಟ್ ಮಾಸ್ಟರ್ ಶಿವಣ್ಣ ಸೇರಿದಂತೆ ಮೂವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ವಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂಲಸೌಕರ್ಯ ವಂಚಿತ ಹಿತ್ತಲಗುಡ್ಡ ಗ್ರಾಮ

ಶಿಥಿಲಗೊಂಡ ಮನೆಗಳು, ಕೂಲಿ ಸಿಗದೆ ಗಿರಿಜನರ ಪರದಾಟ





ಚಾಮರಾಜನಗರ, ಸೆ.7– ತಾಲೂಕಿನ ಹೆಬ್ಬಸೂರು ಗ್ರಾಪಂ ವ್ಯಾಪ್ತಿಯ ಹಿತ್ತಲಗುಡ್ಡ ಗ್ರಾಮ ಮೂಲಸೌಕರ್ಯಗಳಿಂದ ವಂಚಿತವಾಗಿದ್ದು, ಇಲ್ಲಿನ ಸೋಲಿಗ ಗಿರಿಜನರು ಕೂಲಿ ಸಿಗದೇ ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ.

ಕಾಡಂಚಿನ ಗ್ರಾಮ ಹಿತ್ತಲಗುಡ್ಡದಲ್ಲಿ 35ಕ್ಕೂ ಹೆಚ್ಚು ಗಿರಿಜನ ಕುಟುಂಬಗಳು ವಾಸ ಮಾಡುತ್ತಿವೆ. ಆದರೆ ಇಲ್ಲಿನ ಜನರು ಕನಿಷ್ಠ ಮೂಲಸೌಲಭ್ಯ ಸಿಗದೇ ವಂಚಿತರಾಗಿದ್ದಾರೆ. ಗ್ರಾಮದಲ್ಲಿರುವ ಮನೆಗಳ ಮೇಚ್ಛಾವಣಿ ಕಿತ್ತು ಹೋಗಿದ್ದು, ಗೋಡೆಗಳು ಶಿಥಿಲಗೊಂಡಿವೆ. ಗುಡಿಸಲಿನಲ್ಲಿ ವಾಸಿಸುವವವರು ಮಳೆ ಬಂದರೆ ನೆನೆಯುವ ಪರಿಸ್ಥಿತಿ ಇದೆ. ಅಲ್ಲದೇ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿದೀಪವಿಲ್ಲದೇ ಪರಿತಪಿಸುವಂತಾಗಿದೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನಹರಿಸುತ್ತಿಲ್ಲ. ಸರ್ಕಾರ ಪ್ರತಿವರ್ಷ ಸಾವಿರಾರು ಮನೆಗಳನ್ನು ಮಂಜೂರು ಮಾಡುತ್ತಿದ್ದರೂ, ಇಲ್ಲಿನ ಗಿರಿಜನರಿಗೆ ಮನೆಗಳು ಗಗನಕುಸುಮವಾಗಿವೆ. ಅಲ್ಲದೇ ಕೇಂದ್ರದ ಮಹತ್ವಾಕಾಂಕ್ಷಿ ನರೇಗಾ ಯೋಜನೆ ಈ ಗ್ರಾಮಕ್ಕೆ ಹೆಸರಿಗಷ್ಟೇ ಇದ್ದು, ಕಳೆದ 7 ವರ್ಷಗಳಿಂದ ಯೋಜನೆಯಡಿ ಉದ್ಯೋಗ ದೊರೆಯದೇ ಗ್ರಾಮಸ್ಥರು ಪರದಾಡುವಂತಾಗಿದ್ದು, ಜನರು ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇನ್ನೂ ಕಾಡಂಚಿನ ಗ್ರಾಮವಾಗಿರುವುದರಿಂದ ಗ್ರಾಮದ ಸುತ್ತ ಜಂಗಲ್ ಬೆಳೆದಿದ್ದು, ರಾತ್ರಿ ವೇಳೆ ಚಿರತೆ, ಹುಲಿ, ಆನೆ ಸೇರಿದಂತೆ ಕಾಡುಪ್ರಾಣಿಗಳ ಹಾವಳಿ ಇದ್ದು, ಇಲ್ಲಿನ ಜನ ಭಯದಿಂದ ಬದುಕುವಂತಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಜಂಗಲ್ ಕಟಾವು ಮಾಡಿ ತೆರವುಗೊಳಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಾಲೂಕು ಸೋಲಿಗ ಅಭಿವೃದ್ಧಿ ಸಂಘದ ಅಧ್ಯಕ್ಷ ಸಿ.ಕೋಣೂರೇಗೌಡ ಮಾತನಾಡಿ, ಹಿತ್ತಲಗುಡ್ಡದ ಸಮಸ್ಯೆಗಳ ಬಗ್ಗೆ ಇಲ್ಲಿವರೆಗೆ ಸರ್ಕಾರ ಗಮನ ಹರಿಸಿಲ್ಲ. ಗ್ರಾಮ ಕುಡಿಯುವ ನೀರು, ರಸ್ತೆ, ಬೀದಿದೀಪ, ಚರಂಡಿ ಸೇರಿದಂತೆ ಮೂಲಸೌಕರ್ಯದಿಂದ ವಂಚಿತವಾಗಿದ್ದು, ಕೂಲಿ ಕೆಲಸವಿಲ್ಲದೆ ಗ್ರಾಮಸ್ಥರು ಜೀವನ ನಡೆಸಲು ಪರಿತಪಿಸುವಂತಾಗಿದೆ. ಹೀಗಾಗಿ ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಲ್ಯಾಂಪ್ಸ್ ಸಹಕಾರ ಸಂಘದ ಉಪಾಧ್ಯಕ್ಷ ಶಿವಣ್ಣೇಗೌಡ ಮಾತನಾಡಿ, ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದ್ದರೂ, ನಲ್ಲಿ ಸಂಪರ್ಕವಿಲ್ಲದೇ ದೂರದಿಂದ ನೀರನ್ನು ತಲೆ ಮೇಲೆ ಹೊತ್ತು ತರಬೇಕಾಗಿದೆ. ಆದ್ದರಿಂದ ಈ ಕೂಡಲೇ ನಲ್ಲಿ ಸಂಪರ್ಕದ ವ್ಯವಸ್ಥೆ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ಪರಿಶೀಲನಾ ಸಭೆ

ಚಾಮರಾಜನಗರ ಸೆ.7– ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೆ.15ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಪಂ ಸಭಾಂಗಣದಲ್ಲಿ ನಡೆಯಲಿದೆ.

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ



ಯಳಂದೂರು, ಸೆ.7– ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ ಎಂದು ಗ್ರಾಪಂ ಅಧ್ಯಕ್ಷ ಮುದ್ದುವೀರನಾಯಕ ತಿಳಿಸಿದರು.

ತಾಲೂಕಿನ ಅಗರ ಸರ್ಕಾರಿ ಶಾಲೆ ಆವರಣದಲ್ಲಿ ನಡೆದ ಅಗರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಬೇಕು. ಮಕ್ಕಳ ಸುಪ್ತ ಪ್ರತಿಭೆ ಅನಾವರಣಕ್ಕೆ ಇಂತಹ ವೇದಿಕೆ ಅವಶ್ಯಕ ಎಂದರು.

ಮಾಂಬಳ್ಳಿ ಗ್ರಾಪಂ ಅಧ್ಯಕ್ಷ ಮಲ್ಲೇಶ್ ಮಾತನಾಡಿ, ಮಕ್ಕಳು ಭವಿಷ್ಯದಲ್ಲಿ ಯಾವ ಕ್ಷೇತ್ರದ ಬಗ್ಗೆ ಆಸಕ್ತಿ ಹೊಂದಿದ್ದಾರೆ ಎಂದು ತಿಳಿಯಲು ಪ್ರತಿಭಾ ಕಾರಂಜಿ ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಟಿಪಿಓ ಲಿಂಗರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಮಹೇಶ್, ಶಿಕ್ಷಕರ ಸಂಘದ ಸೋಮಣ್ಣ, ನಾಗರಾಜು, ಮಹದೇವು, ದಿವಾಕರ್, ಪಿಡಿಓ ಮಹೇಶ್ ಕುಮಾರ್ ಮುಖ್ಯ ಶಿಕ್ಷಕಿ ಶಿವಮ್ಮ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಸಿಆರ್‌ಪಿಗಳಾದ ಭಾರತಿ, ಶಶಿರೇಖಾ, ದೊರೆಸ್ವಾಮಿ, ಮಂಜು, ಬಿಆರ್‌ಪಿಗಳಾದ ಭಾಗ್ಯ, ಪುಷ್ಪಲತಾ, ಶಿಕ್ಷಕರಾದ ಪ್ರಕಾಶನಾಯಕ, ಮಲ್ಲು, ರಾಜೇಶ, ಕೆಂಪೇಗೌಡ, ಅನ್ನಪೂರ್ಣ, ಮಮತ, ಚಂದ್ರಮ್ಮ, ರವಿ, ರಾಜೇಶ್ವರಿ ಹಾಗೂ ವಿವಿಧ ಶಾಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಇಲಾಖಾ ತನಿಖೆಗೆ ಸರ್ಕಾರ ಆದೇಶ

ಬೆಂಗಳೂರು, ಸೆ.7– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದ್ದು, ಮೈಸೂರು ಜಿಲ್ಲಾಧಿಕಾರಿ ನಿವಾಸ ನವೀಕರಣ, ಬಟ್ಟೆ ಬ್ಯಾಗ್ ಖರೀದಿಯಲ್ಲಿ ನಿಯಮ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಅವರ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಿದೆ.



ರೋಹಿಣಿ ಸಿಂಧೂರಿ ಅವರು ನಿಯಮಗಳನ್ನು ಮೀರಿ ಇಲಾಖೆ ಅನುಮತಿ ಪಡೆಯದೆ ದುಡ್ಡು ಖರ್ಚು ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದು, ಈ ಕುರಿತ ಪ್ರಾಥಮಿಕ ತನಿಖೆಯಲ್ಲಿ ಅವರು ಅಸಮರ್ಪಕ ಉತ್ತರ ನೀಡಿದ್ದಾರೆ ಮತ್ತು ಯಾವುದೇ ದಾಖಲೆ ನೀಡಿಲ್ಲ.

ಹೀಗಾಗಿ ಅವರ ವಿರುದ್ಧ ಇಲಾಖಾ ತನಿಖೆಗೆ ನಿವೃತ್ತ ಐಎಎಸ್ ಅಧಿಕಾರಿ ಯೋಗೇಂದ್ರ ತ್ರಿಪಾಠಿ, ಬಿಬಿಎಂಪಿ ವಿಶೇಷ ಆಯುಕ್ತ ಉಜ್ವಲ್ ಕುಮಾರ್ ನೇತೃತ್ವದಲ್ಲಿ ತನಿಖಾ ಸಮಿತಿ ರಚನೆ ಮಾಡಿ ಡಿಪಿಎಆರ್ ಅಧೀನ ಕಾರ್ಯದರ್ಶಿ ಜೇವಸ್ಸ್ ಥಾರಖನ್ ಆದೇಶ ಹೊರಡಿಸಿದ್ದಾರೆ. ರೋಹಿಣಿ ಸಿಂಧೂರಿ ಅವರು ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ ಅವರ ವಿರುದ್ಧ ಸಾಲು ಸಾಲು ಆರೋಪಗಳು ಕೇಳಿ ಬಂದಿತ್ತು. ಈ ವಿಚಾರವಾಗಿ ಕೆಆರ್ ನಗರ ಶಾಸಕರಾಗಿದ್ದ, ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪ ಮಾಡಿದ್ದರು. ಅಲ್ಲದೆ ವಿಧಾನಸೌಧದಲ್ಲೂ ಈ ವಿಚಾರ ಪ್ರತಿಧ್ವನಿಸಿತ್ತು

ಸೆ.17ರಂದು ಜಿಲ್ಲಾಡಳಿತದಿಂದ ವಿಶ್ವಕರ್ಮ ಜಯಂತಿ



ಮೈಸೂರು,ಸೆ.7(ಪಿಎಂ)– ಜಿಲ್ಲಾಡಳಿತದ ವತಿಯಿಂದ ಸೆ.17ರಂದು ಸರಳ ಮತ್ತು ಅರ್ಥಪೂರ್ಣವಾಗಿ ವಿಶ್ವಕರ್ಮ ಜಯಂತಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್ ತಿಳಿಸಿದರು. ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವಕರ್ಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮುದಾಯದ ಜೊತೆಗೂಡಿ ಅಂದು ಬೆಳಗ್ಗೆ 11ಕ್ಕೆ ನಗರದ ಕಲಾಮಂದಿರದಲ್ಲಿ ಶಿಷ್ಟಾಚಾರದ ಅನ್ವಯ ವಿಶ್ವಕರ್ಮ ಜಯಂತಿ ನಡೆಯಲಿದೆ ಎಂದರು.

ಸಮುದಾಯದ ಮುಖಂಡರು ಸಭೆ ಸೇರಿ ಕಾರ್ಯಕ್ರಮದ ಉಪನ್ಯಾಸಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಲಿದ್ದೇವೆ. ಮಹಾನಗರ ಪಾಲಿಕೆ ವತಿಯಿಂದ ಶಾಮಿಯಾನ ಮತ್ತು ಉಪಹಾರದ ವ್ಯವಸ್ಥೆ ಮಾಡುವಂತೆ ಸಭೆಯಲ್ಲಿ ಸಮುದಾಯದ ಮುಖಂಡರು ಮನವಿ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಜೆ.ಗೋವಿಂದರಾಜು, ಕರ್ನಾಟಕ ಕಾವಲು ಪಡೆಯ ಮೋಹನ್ ಕುಮಾರ್‌ಗೌಡ, ವಿಶ್ವಕರ್ಮ ಸೇವಾ ಟ್ರಸ್ಟ್ ಅಧ್ಯಕ್ಷ ಸಿ.ಸಣ್ಣಸ್ವಾಮಿ ಆನಂದೂರು, ಮುಖಂಡ ಎಸ್.ರಾಮಚಂದ್ರ ಹೆಬ್ಬಾಳ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಸಮುದಾಯಗಳ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ನಿಯೋಗ

ಎಂದು ಹೇಳುತ್ತಾರೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ನೀರು ಹರಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗಳ ಮೂಲಕ ಸೂಚನೆ ಕೊಡಬೇಕು. ಕಾವೇರಿ ನೀರಾವರಿ ಸಲಹಾ ಸಮಿತಿಗೆ ಪತ್ರ ಬರೆಯಬೇಕು. ಮೊದಲು ಇಲ್ಲಿರುವ ಸಂಕಷ್ಟದ ಸ್ಥಿತಿ ಮನದಟ್ಟು ಮಾಡಿಕೊಡಬೇಕು. ತಮಿಳುನಾಡಿನಲ್ಲಿ ಹೆಚ್ಚುವರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂಬುದನ್ನು ಮನದಟ್ಟು ಮಾಡಿಕೊಡಬೇಕು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮಿಳುನಾಡು ಪರ ಇರುವುದು ದುರ್ದೈವ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಸಿದ್ದರಾಮಯ್ಯ, ಶ್ರೀಧರ್, ವಸಂತ್‌ಕುಮಾರ್ ಹಾಜರಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿ

ಮಾತುಕತೆ ಸಂದರ್ಭದಲ್ಲಿ 5 ಲೋಕಸಭಾ ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಗೌಡರು ಬಿಜೆಪಿ ನಾಯಕರಿಗೆ ಸಲಹೆ ಮಾಡಿದ್ದಾರೆ. ಇದಕ್ಕೆ 4 ಕ್ಷೇತ್ರಕ್ಕೆ ಸಮ್ಮತಿಸಿರುವ ಬಿಜೆಪಿ ನಾಯಕರು ಮಂಡ್ಯ ಲೋಕಸಭಾ ಕ್ಷೇತ್ರದ ಬಗ್ಗೆ ಮುಂದೆ ತೀರ್ಮಾನ ಕೈಗೊಳ್ಳೋಣ ಎಂದು ಹೇಳಿದ್ದಾರೆ. ಇದರ ಬೆನ್ನಲ್ಲೇ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರು ನಿನ್ನೆ ತುರ್ತು ಸಭೆ ಕರೆದು ಮೈತ್ರಿಯ ವಿಚಾರವನ್ನು ಮುಖಂಡರ ಮುಂದೆ ಬಹಿರಂಗಪಡಿಸಿದ್ದಾರೆ.

ಕೇಂದ್ರಕ್ಕೆ ಸರ್ವಪಕ್ಷ ನಿಯೋಗ

ಪಡೆಯುವ ಅವಧಿಯನ್ನು ಮೂರು ತಿಂಗಳು ನೀಡಲಾಗಿತ್ತು. ಮತ್ತೆ ಮೂರು ತಿಂಗಳು ವಿಸ್ತರಿಸಲಾಗಿದೆ. ಅಲ್ಲದೆ, ಸ್ಮಾರ್ಟ್ ಕಾರ್ಡ್ ಸೇವಾ ಶುಲ್ಕವನ್ನು 14.16 ರೂ. ನಿಗದಿ ಮಾಡಿದೆ. ಮಂಡ್ಯ, ಕೊಪ್ಪಳ, ಕಲ್ಬುರ್ಗಿ ವೈದ್ಯಕೀಯ ಕಾಲೇಜುಗಳ ಕಾಮಗಾರಿಗಳಿಗೆ ಹೆಚ್ಚುವರಿ ಮೊತ್ತದ ಅನುದಾನ ಒದಗಿಸಲಾಗಿದೆ.

500 ಕೋಟಿ ರೂ. ವೆಚ್ಚದಲ್ಲಿ ಒಂದು ಸಾವಿರ ಹೊಸ ಬಸ್ ಖರೀದಿಸಲು ಸಂಪುಟ ಸಮ್ಮತಿ ನೀಡಿದೆ. ಕೆಎಸ್‌ಆರ್‌ಟಿಸಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 250, ವಾಯುವ್ಯ ಸಾರಿಗೆ ಸಂಸ್ಥೆಯಲ್ಲಿ 150 ಕೋಟಿ ರೂ. ವೆಚ್ಚದಲ್ಲಿ 375, ಬಿಎಂಟಿಸಿಯಲ್ಲಿ 150 ಕೋಟಿ ರೂ. ವೆಚ್ಚದಲ್ಲಿ ಎಸಿ ಎಲೆಕ್ಟ್ರಿಕ್ ಬಸ್ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗೆ 100 ಕೋಟಿ ರೂ. ವೆಚ್ಚದಲ್ಲಿ 250 ಬಸ್ ಖರೀದಿಸಲು ಸಮ್ಮತಿಸಲಾಗಿದೆ. ಜೆಓಸಿಕೋರ್ಸ್ ಮಾಡಿದವರಿಗೂ ಬಿಇಡಿ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸ ಲಾಗಿದೆ. ಇದೇ ಸಂದರ್ಭದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮಕ್ಕೆ ತಿದ್ದುಪಡಿ ತರಲು ಒಪ್ಪಿಗೆ ಸೂಚಿಸಿದೆ. ಉಗ್ರಾಣಗಳ ನಿರ್ಮಾಣಕ್ಕೆ 13 ಕೋಟಿ ರೂ. ಹೆಚ್ಚುವರಿ ಅನುದಾನ ಒದಗಿಸಲು ಸಂಪುಟ ಸಭೆ ಸಮ್ಮತಿಸಿರುವುದಲ್ಲದೆ. 5ನೇ ಹಣಕಾಸು ಆಯೋಗ ರಚನೆಗೂ ಹಸಿರು ನಿಶಾನೆ ತೋರಿದೆ.

ಕೆಪಿಎಸ್‌ಸಿಯಲ್ಲಿ ಖಾಲಿ ಇರುವ ಎರಡು ಸದಸ್ಯ ಸ್ಥಾನಗಳನ್ನು ಭರ್ತಿ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿದೆ. 5ನೇ ಹಣಕಾಸು ಆಯೋಗ ರಚನೆ ಮಾಡಲು ತೀರ್ಮಾನಿಸಿದ್ದು, ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ನೀಡಲಾಗಿದೆ ಎಂದರು.

ಎಸ್‌ಪಿ, ಡಿಸಿಪಿಗಳ ವಿರುದ್ಧ ಶಿಸ್ತು ಕ್ರಮ

ಕಾಯ್ದೆ ಜಾರಿಗೊಳಿಸಲಾಗಿದೆ. ಈ ಕಾನೂನಿನಡಿ ಸಂತ್ರಸ್ತರಿಗೆ ರಕ್ಷಣೆ ಸಿಗಬೇಕು. ಸಂಬಂಧಪಟ್ಟ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಬೇಕು. ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಅಡಿಯಲ್ಲಿ 90 ದಿನಗಳೊಳಗೆ ಚಾರ್ಜ್‌ಶೀಟ್ ಹಾಕದಿದ್ದರೆ, ಎಸ್‌ಸಿ /ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ 60 ದಿನಗಳೊಳಗೆ ಆರೋಪಪಟ್ಟಿ ದಾಖಲಾಗದಿದ್ದರೆ ಆರೋಪಿಗಳಿಗೆ ಸಲೀಸಾಗಿ ಜಾಮೀನು ಸಿಗುತ್ತದೆ. ಹೀಗೆ ಜಾಮೀನು ಪಡೆದವರಿಗೆ ಕಾನೂನಿನ ಭಯ ಇರುತ್ತದಾ ಎಂದು ಖಾರವಾಗಿ ಪ್ರಶ್ನಿಸಿದರು. ಕರ್ನಾಟಕ ಪೊಲೀಸ್ ದೇಶದಲ್ಲೇ ನಂಬರ್ ಒನ್ ಎನ್ನುವ ಅಭಿಪ್ರಾಯ ಇದೆ. ಆದರೆ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಶಿಕ್ಷೆ ಪ್ರಮಾಣ ಕೇವಲ ಶೇ. 3.44 ಇದೆ ಅಂದರೆ ಪೊಲೀಸ್ ಇಲಾಖೆ ಕಳೆದ ಐದು ವರ್ಷಗಳಲ್ಲಿ ಎಸ್‌ಸಿ/ಎಸ್‌ಟಿ ದೌರ್ಜನ್ಯ ಪ್ರಕರಣಗಳ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿತ್ತಾ ಎಂದು ಪ್ರಶ್ನಿಸಿ, ಇದನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ. ಇದಕ್ಕೆ ಎಸ್.ಪಿ. ಹಾಗೂ ಡಿಸಿಪಿಗಳನ್ನು ನೇರವಾಗಿ ಹೊಣೆ ಮಾಡಿ, ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿ ಪ್ರಕರಣಗಳ ತನಿಖಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಿಜಿ&ಐಜಿಗೆ ಸೂಚಿಸಿದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಕಾಯ್ದೆಯಡಿ ಶಿಕ್ಷೆ ಪ್ರಮಾಣ ಶೇ.3.44 ಇದೆ. ಶಿಕ್ಷೆ ಪ್ರಮಾಣದಲ್ಲಿ ರಾಜ್ಯ ದೇಶದಲ್ಲಿ 21ನೇ ಸ್ಥಾನದಲ್ಲಿದೆ. ಶಿಕ್ಷೆ ಪ್ರಮಾಣ ಕಡಿಮೆ ಇರುವುದರಿಂದ ಚಾಳಿ ಬಿದ್ದ ಆರೋಪಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು

ಎಲ್ಲ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಕೆಡಿಪಿ ಸಭೆಗಳಲ್ಲಿ ದೌರ್ಜನ್ಯ ಪ್ರಕರಣಗಳ ಪ್ರಗತಿ ಪರಿಶೀಲನೆ ಮಾಡುವ ಕುರಿತು ಸುತ್ತೋಲೆ ಹೊರಡಿಸುತ್ತೇನೆ

ಜಿಲ್ಲಾಧಿಕಾರಿಗಳೂ ಕಡ್ಡಾಯವಾಗಿ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಬೇಕು ಎಂದು ಮತ್ತೊಂದು ಸುತ್ತೋಲೆ ಹೊರಡಿಸಲಾಗುವುದು. ಜಿಲ್ಲಾ ಮತ್ತು ತಾಲೂಕು ಕೆಡಿಪಿ ಸಭೆಗಳಲ್ಲಿ ಜಾತಿ ದೌರ್ಜನ್ಯ ಪ್ರಕರಣಗಳ ರಿವ್ಯೂ (ಪರಿಶೀಲನೆ) ನಡೆಸದ ಕಾರಣದಿಂದ ಹೀಗಾಗುತ್ತದೆ. ಆದ್ದರಿಂದ ಶಾಸಕರು, ಜಿಲ್ಲಾ ಸಚಿವರು, ಡಿಸಿ–ಎಸ್‌ಪಿಗಳು ಕಡ್ಡಾಯವಾಗಿ ರಿವ್ಯೂ ಮಾಡಬೇಕು ಎಂದು ಸ್ಪಷ್ಟವಾಗಿ ಸೂಚಿಸಿದರು. ಕಳೆದ ಐದು ವರ್ಷಗಳಲ್ಲಿ 53 ಕೊಲೆ ಪ್ರಕರಣಗಳಲ್ಲಿಯೂ ಚಾರ್ಜ್‌ಶೀಟ್ ಹಾಕದಿರುವ ಕುರಿತು ಆಕ್ಷೇಪಿಸಿದ ಮುಖ್ಯಮಂತ್ರಿಗಳು, ಅಂತಹ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸೂಚಿಸಿದರು.

'ಮಹಿಷ ಮಂಡಲದ ಆದಿ ದೊರೆ ಮಹಿಷಾಸುರ : ಒಂದು ಚಾರಿತ್ರಿಕ ನೋಟ'

ಸೆ.10ರಂದು ರಾಜ್ಯಮಟ್ಟದ ವಿಚಾರ ಸಂಕಿರಣ



ಮೈಸೂರು, ಸೆ.7(ಜಿಎ)–ಮಹಿಷ ದಸರಾ ಅಂಗವಾಗಿ ಸೆ.10ರಂದು 'ಮಹಿಷ ಮಂಡಲದ ಆದಿ ದೊರೆ ಮಹಿಷಾಸುರ : ಒಂದು ಚಾರಿತ್ರಿಕ ನೋಟ' ವಿಷಯದಡಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಹಾಗೂ ಮಹಿಷ ದಸರಾ ಆಚರಣಾ ಸಮಿತಿ ಸದಸ್ಯರೂ ಆದ ಪುರುಷೋತ್ತಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಷ ದಸರಾ ಆಚರಣಾ ಸಮಿತಿ ಮತ್ತು ಮೈಸೂರು ವಿಶ್ವವಿದ್ಯಾಲಯ ಸಂಶೋಧಕರ ಸಂಘದ ವತಿಯಿಂದ ಮಾನಸಗಂಗೋತ್ರಿಯ ಲಲಿತ ಕಲೆಗಳ ಕಾಲೇಜಿನಲ್ಲಿ ಬೆಳಗ್ಗೆ 10.30ರಿಂದ ಸಂಜೆ 6.30ರವರೆಗೂ ವಿಚಾರ ಸಂಕಿ ರಣವನ್ನು ಏರ್ಪಡಿಸಲಾಗಿದೆ ಎಂದರು.

ವಿಚಾರ ಸಂಕಿರಣವನ್ನು ಮಾಜಿ ಸಚಿವೆ ಹಾಗೂ ಲೇಖಕರಾದ ಬಿ.ಟಿ.ಲಲಿತಾ ನಾಯಕ್ ಉದ್ಘಾಟಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಉರಿಲಿಂಗಿ ಪೆದ್ದೀಶ್ವರ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ವಹಿಸಲಿದ್ದು, ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರ ಗುರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್ ಮತ್ತು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಅಂಬೇಡ್ಕರ್‌ವಾದಿ ಕೃಷ್ಣಮೂರ್ತಿ ಚಮರಂ, ಸಂಶೋಧಕರ ಸಂಘದ ಅಧ್ಯಕ್ಷ ಸಿ.ಮಹೇಶ್, ಲೇಖಕ ಸಿದ್ದಸ್ವಾಮಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಗೋಷ್ಠಿಗಳು : 12.30ರಿಂದ 2 ಗಂಟೆವರೆಗೂ ನಡೆಯುವ ಗೋಷ್ಠಿಯಲ್ಲಿ ಹಿರಿಯ ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್, ಹಿರಿಯ ಇತಿಹಾಸ ಸಂಶೋಧಕ ಡಾ.ತಲಕಾಡು ಚಿಕ್ಕರಂಗೇಗೌಡ, ಇತಿಹಾಸ ಪ್ರಾಧ್ಯಾಪಕಿ ಪ್ರೊ.ಇಂದಿರಮ್ಮ ಮತ್ತು ಚಿಂತಕ ಕನಕರಾಜು ವಿಷಯ ಮಂಡಿಸಲಿದ್ದು, ಅಧ್ಯಕ್ಷತೆಯನ್ನು ಹಿರಿಯ ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್ ವಹಿಸಲಿದ್ದಾರೆ. 2.30ರಿಂದ 4 ಗಂಟೆವರೆಗೂ ನಡೆಯುವ ಗೋಷ್ಠಿಯಲ್ಲಿ ಇತಿಹಾಸ ತಜ್ಞ ಪ್ರೊ.ನಂಜರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದು, ಪ್ರಾಧ್ಯಾಪಕ ಡಾ.ಶಿವರಾಜ್, ಪ್ರಾಚ್ಯವಸ್ತು ಸಂಶೋಧಕ ಪ್ರೊ.ಗುರುಸಿದ್ದಯ್ಯ, ಯುವ ಚಿಂತಕ ಹರ್ಷಕುಮಾರ್ ಕುಗ್ವೆ ಮತ್ತು ಮಾಧ್ಯಮ ಸಂಶೋಧಕ ಡಾ.ದಿಲೀಪ್ ನರಸಯ್ಯ ವಿಷಯ ಮಂಡಿಸಲಿದ್ದಾರೆ. 4ಗಂಟೆಯಿಂದ 5.30ರವರೆಗೂ ನಡೆಯುವ ಗೋಷ್ಠಿಯಲ್ಲಿ ಹಂಪಿ ವಿವಿ ಪ್ರಾಧ್ಯಾಪಕ ಡಾ.ಚಿನ್ನಸ್ವಾಮಿ ಸೋಸಲೆ, ನಿವೃತ್ತ ಪ್ರಾಧ್ಯಾಪಕ ಡಾ.ಶಿವರಾಜಪ್ಪ, ಪ್ರಾಧ್ಯಾಪಕಿ ಡಾ.ಉಷಾದೇವಿ ಮತ್ತು ಪ್ರಾಧ್ಯಾಪಕ ಡಾ.ಹೊನ್ನುಸಿದ್ದಾರ್ಥ ವಿಚಾರ ಮಂಡಿಸಲಿದ್ದು, ನಿವೃತ್ತ ಪ್ರಾಧ್ಯಾಪಕ ಪ್ರೊ.ಟಿ.ಎಂ.ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಸಮಾರೋಪ : ಅಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ಆಯೋಜಿಸಿದ್ದು, ಬಿಕ್ಕು ಬೋಧಿದತ್ತ ಭಂತೇಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಜಿ.ಎಸ್.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಜಾನಪದ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಪ್ರಾಧ್ಯಾಪಕಿ ಪ್ರೊ.ನಾಗರತ್ನ ಮತ್ತು ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೃಷ್ಣಮೂರ್ತಿ ಚಮರಂ, ಸಿದ್ದಸ್ವಾಮಿ, ಚಿಕ್ಕ ಅಂದಾನಿ, ಸೋಮಯ್ಯ ಮಲಿಯೂರು, ವಿಷಕಂಠ, ನಂಜುಂಡಸ್ವಾಮಿ, ಶಿವಣ್ಣ ಮತ್ತು ಕೃಷ್ಣ ಪ್ರಸಾದ್ ಉಪಸ್ಥಿತರಿದ್ದರು.

ಮಹಿಷ ದಸರಾಗೆ ಸರ್ಕಾರದಿಂದ ಅನುಮತಿ, ಚಾಮುಂಡಿಬೆಟ್ಟದ ತಪ್ಪಲಲ್ಲಿ ಅದ್ದೂರಿ ಆಚರಣೆ

ಅ.13ರಂದು ಮಹಿಷ ದಸರಾ ಆಚರಣೆ ಮಾಡಲಾಗುತ್ತದೆ. ಅಂದು ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಮಹಿಷ ದಸರಾ ಆಚರಣೆಗೆ ಚಾಲನೆ ನೀಡಲಾಗುತ್ತದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ವರ್ಷದಿಂದ ವರ್ಷಕ್ಕೆ ಮಹಿಷ ದಸರಾಗೆ ಆಗಮಿಸುವವರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಾಮುಂಡಿಬೆಟ್ಟದ ಮೇಲೆ ಸ್ಥಳಾವಕಾಶದ ಕೊರತೆ ಇದೆ. ಹಾಗಾಗಿ ವೇದಿಕೆ ಕಾರ್ಯಕ್ರಮವನ್ನು ಬೆಟ್ಟದ ತಪ್ಪಲಿನಲ್ಲಿ ಸೂಕ್ತವಾದ ಸ್ಥಳದಲ್ಲಿ ಅದ್ಧೂರಿಯಾಗಿ ಆಯೋಜನೆ ಮಾಡಲಾಗುವುದು. ಈ ಬಾರಿಯ ಮಹಿಷ ದಸರಾ ಆಚರಣೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಇತರೆ ಕಡೆಗಳಿಂದ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಲಿದ್ದಾರೆ. ಮಹಿಷ ದಸರಾ ಆಚರಣೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಪೊಲೀಸ್ ಇಲಾಖೆ ಕೂಡ ಸಹಕಾರ ಕೊಡುವ ನಿರೀಕ್ಷೆಯಿದೆ. ಮಹಿಷ ದಸರಾಗೂ, ನಾಡಹಬ್ಬ ದಸರಾಗೂ ಸಂಬಂಧವಿಲ್ಲ ಎಂದರು.

ಮಹಿಷ ದಸರಾ ಆಚರಣೆಗೆ ಪೂರ್ವಭಾವಿಯಾಗಿ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಆಯೋಜನೆ ಮಾಡಲಾಗಿದೆ. ಮಹಿಷ ದಸರಾ ಆಚರಣಾ ಸಮಿತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದಿಂದ ಆಯೋಜನೆ ಮಾಡಲಾಗಿದೆ. ಅಕ್ಟೋಬರ್ 10ರಂದು ಬೆಳಗ್ಗೆ 11ರಿಂದ ಸಂಜೆ 6ರವರೆಗೆ ಮೂರು ಗೋಷ್ಠಿ ನಡೆಯಲಿವೆ. ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ 28 ಮಂದಿ ಪ್ರಗತಿಪರ ಚಿಂತಕರು ವಿಚಾರ ಸಂಕಿರಣದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಹೇಳಿದರು.

ನಾಳೆ ಮೈಸೂರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಭೀಮೋತ್ಸವ ಕಾರ್ಯಕ್ರಮ



ಮೈಸೂರು, ಸೆ.7(ಜಿಎ)–ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳು ಮತ್ತು ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸೆ.9ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಭೀಮೋತ್ಸವ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 1.30ಕ್ಕೆ ನಗರದ ಪುರಭವನದಿಂದ ಮೆರವಣಿಗೆ ಮೂಲಕ ಜಗನ್ಮೋಹನ ಅರಮನೆಗೆ ತೆರಳಿ 2.30ಕ್ಕೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ. ಉರಿಲಿಂಗಿ ಪೆದ್ದೀಶ್ವರ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮತ್ತು ಚಾಮರಾಜನಗರದ ನಳಂದ ಬುದ್ಧ ವಿಹಾರದ ಭೋದಿರತ್ನ ಬಂತೇಜಿ ಅವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮವನ್ನು ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗ ರೆಡ್ಡಿ ಉದ್ಘಾಟಿಸಲಿದ್ದು, ಭಾವಚಿತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅನಾವರಣಗೊಳಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಹರೀಶ್ ಗೌಡ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಪಾಲಿಕೆ ಸದಸ್ಯ ಜಿ.ಎಸ್.ಸತ್ಯರಾಜ್, ರಾಜ್ಯ ಸಮಿತಿ ಗೌರವಾಧ್ಯಕ್ಷ ಡಾ.ಆರ್.ಮೋಹನ್ ರಾಜ್ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು ಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಸೇರಿದಂತೆ ವಿವಿಧ ಅಧಿಕಾರಿಗಳನ್ನು ವಿಶೇಷವಾಗಿ ಆಹ್ವಾನಿಸಲಾಗಿದೆ ಕಾರ್ಯಕ್ರಮದಲ್ಲಿ 120ಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು 20ಕ್ಕೂ ಹೆಚ್ಚು ನಿವೃತ್ತ ನೌಕರರಿಗೆ ಅಭಿನಂದಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸ್ವಾಮಿ, ಕಾರ್ಯಾಧ್ಯಕ್ಷ ಎಂ.ಶಂಕರ್, ಕಾನೂನು ಸಲಹೆಗಾರ ಕೆ.ಮಹದೇವಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಸ್‌ಗಾಗಿ ಆಗ್ರಹಿಸಿ ಮಹಾರಾಣಿ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ಸೆ.7(ಜಿಎ)–ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜಿಗೆ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸದಿರುವುದನ್ನು ಖಂಡಿಸಿ, ವಿದ್ಯಾರ್ಥಿನಿಯರು ಗುರುವಾರ ಪ್ರತಿಭಟನೆ ನಡೆಸಿದರು.

ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿಗಳ ಒಕ್ಕೂಟ (ಎನ್‌ಎಸ್‌ಯುಐ)ದ ನೇತೃತ್ವದಲ್ಲಿ ಕಾಲೇಜಿನ ಮುಂಭಾಗವಿರುವ ಬಸ್ ನಿಲ್ದಾಣದ ಮುಂಭಾಗ ಜಮಾಯಿಸಿದ ಕಾಲೇಜಿನ ನೂರಾರು ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿ ಮಾತನಾಡಿ, ಬಸ್ ವ್ಯವಸ್ಥೆ ಇಲ್ಲದಿರುವುದರಿಂದ ಕಾಲೇಜಿನ ವಿದ್ಯಾರ್ಥಿಗಳು ಸಾಕಷ್ಟು ಸಂಕಷ್ಟ ಎದುರಿಸುವಂತಾಗಿದೆ. ನಿತ್ಯವೂ ಎರಡು ಕಿಮೀ ನಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಸಂಜೆಯೂ ಸಮಯಕ್ಕೆ ಸರಿಯಾಗಿ ಬಸ್‌ಗಳು ಬಾರದ ಕಾರಣ ವಿದ್ಯಾರ್ಥಿಗಳು ಮನೆಗೆ ತೆರಳುವುದೇ ಕಷ್ಟಕರವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸ್ಥಳಕ್ಕೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಕಲಾಶ್ರೀ ಆಗಮಿಸಿ, ಮನವಿ ಸ್ವೀಕರಿಸಿ ನಿಮ್ಮ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಕೈ ಬಿಟ್ಟರು. ಪ್ರತಿಭಟನೆಯಲ್ಲಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿಗಳ ಒಕ್ಕೂಟ (ಎನ್‌ಎಸ್‌ಯುಐ) ಜಿಲ್ಲಾಧ್ಯಕ್ಷ ಮನೋಜ್ ಕುಮಾರ್, ಕಾಂಗ್ರೆಸ್ ಮುಖಂಡ ಡಾ.ಸುಶ್ರುತ್, ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಭಾಗಿಯಾಗಿದ್ದರು.

ಇಂದು ಪೌರಾಣಿಕ ನಾಟಕ

ತುರುಗನೂರು, ಸೆ.7– ತಿ.ನರಸೀಪುರ ತಾಲೂಕಿನ ಗಾಣಿಗನಕೊಪ್ಪಲು ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಕಾಳಮ್ಮದೇವಿಯ ಹಬ್ಬದ ಪ್ರಯುಕ್ತ ಶ್ರೀ ಬೋರಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ನಾಳೆ (ಸೆ.8) ಶಿವಕುಮಾರ ಅಥವಾ ವಲ್ಲಿ ಪರಿಣಯ ಎಂಬ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ

ನಾಳೆಯಿಂದ ಕೀಟಗಳ ಪ್ರಣಯ ಪ್ರಪಂಚದ ವಿಶೇಷ ಛಾಯಾಚಿತ್ರಗಳ ಪ್ರದರ್ಶನ, ಮಾರಾಟ



ಮೈಸೂರು, ಸೆ.7(ಜಿಎ)– ಕೀಟಗಳ ಪ್ರಣಯ ಪ್ರಪಂಚದ ಮ್ಯಾಕ್ರೋ ಛಾಯಾಚಿತ್ರ ಪ್ರದರ್ಶನ ಮತ್ತು ಮಾರಾಟವನ್ನು ಸೆ.9ರಿಂದ 17ರವರೆಗೆ ಆಯೋಜಿಸಲಾಗಿದೆ ಎಂದು ಅರಣ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಹಾಗೂ ಹವ್ಯಾಸಿ ಛಾಯಾಗ್ರಾಹಕರೂ ಆದ ವಿ.ಕೆ.ವಿನೋದ್ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಗಂಟೆಗೆ ಮೈಸೂರಿನ ವಿಜಯನಗರದಲ್ಲಿ ಕಾಫಿ ಸಿಟಿ ನೆರಳು ಗ್ಯಾಲರಿಯಲ್ಲಿ ಏರ್ಪಡಿಸಿದ್ದು, ನಿವೃತ್ತ ಪ್ರಾಂಶುಪಾಲರು ಮತ್ತು ಛಾಯಾಗ್ರಾಹಕರಾದ ಲೀಲಾ ಅಪ್ಪಾಜಿ ಮತ್ತು ಮ್ಯಾಕ್ರೋ ಛಾಯಾಗ್ರಾಹಕ ಗಿರೀಶ್ ಗೌಡ ಉದ್ಘಾಟಿಸಲಿದ್ದಾರೆ ಎಂದರು.

ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿಕೊಂಡು ಕಳೆದ 13 ವರ್ಷಗಳಿಂದ ಕುಶಾಲನಗರದಲ್ಲಿ ನಾ ಕಂಡಿರುವ ಕೀಟಗಳ ಪ್ರಣಯ ಪ್ರಪಂಚವನ್ನು ಕ್ಯಾಮರಾದ ಮೂಲಕ ಸೆರೆಹಿಡಿದಿರುವ ಫೋಟೋಗಳಲ್ಲಿ ಆಯ್ದ 21 ಫೋಟೋಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರೀಶ್ ಕ್ಯಬ್ಬಿ ಉಪಸ್ಥಿತರಿದ್ದರು.

ಇಂದಿನಿಂದ ಕೀಲು ಮೂಳೆ ತಜ್ಞರ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಸೆ.7(ಜಿಎ)–ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ಸೆ.8ರಿಂದ 10ರವರೆಗೆ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಕೀಲು ಮೂಳೆ ತಜ್ಞರ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ (ಕರ್ನಾಟಕಆರ್ಥೋಪೆಡಿಕ್ ಪ್ರೀಮಿಯರ್ ಲೀಗ್)ಯನ್ನು ಆಯೋಜಿಸಲಾಗುತ್ತಿದೆ ಎಂದು ಅಸೋಸಿಯೇಷನ್‌ನ ಕಾರ್ಯದರ್ಶಿ ಡಾ.ಶ್ರೇಯಸ್ ಆಳ್ವ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಮಹಾರಾಜ ಕಾಲೇಜು ಪೆವಿಲಿಯನ್ ಮೈದಾನದಲ್ಲಿ ಸಂಸದ ಪ್ರತಾಪ್ ಸಿಂಹ ಅವರು ಪಂದ್ಯಾವಳಿಗೆ ಚಾಲನೆ ನೀಡಲಿದ್ದು, ರಾಜ್ಯದ ನಾನಾ ಕಡೆಗಳಿಂದ 120ಕ್ಕೂ ಹೆಚ್ಚು ಕೀಲು ಮೂಳೆ ತಜ್ಞರು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಇದು ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಾಗಿದ್ದು, ತಲಾ 10 ಓವರ್ ನಿಗದಿಗೊಳಿಸಲಾಗಿದೆ. ಸೆ.8 ಮತ್ತು 9 ರಂದು ಲೀಗ್ ಪಂದ್ಯಾವಳಿಗಳು ನಡೆಯಲಿದ್ದು, ಸೆ10 ರಂದು ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆಯಲಿವೆ. ಸಾರ್ವಜನಿಕರಲ್ಲಿ ಕ್ರೀಡೆಯ ಮಹತ್ವ ಸಾರಲು, ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ ಈ ರಾಜ್ಯ ಮಟ್ಟದ ಪಂದ್ಯಾವಳಿ ಮೈಸೂರಿನಲ್ಲಿ ನಡೆಸಲು ಉದ್ದೇಶಿಸಿದೆ ಎಂದು ತಿಳಿಸಿದರು.ಸುದ್ದಿಗೋಷ್ಠಿಯಲ್ಲಿ ಜಂಟಿ ಕಾರ್ಯದರ್ಶಿ ಡಾ.ಎಸ್.ರಘುನಂದನ್ ಮತ್ತು ಡಾ.ಸುಧೀರ್ ಉಪಸ್ಥಿತರಿದ್ದರು.

ಸೆ.10ರಿಂದ ಮೈಸೂರಲ್ಲಿ ಶಾಮಿಯಾನ, ಡೆಕೋರೇಷನ್, ಧ್ವನಿ–ಬೆಳಕು ಸಂಸ್ಥೆ ಮಾಲೀಕರ ರಾಜ್ಯಮಟ್ಟದ ಮಹಾ ಅಧಿವೇಶನ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕಾರ್ಯಕ್ರಮ ಉದ್ಘಾಟನೆ



ಮೈಸೂರು,ಸೆ.7(ಎಂಟಿವೈ)– ಮೈಸೂರು ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಸೆ.10ರಿಂದ 12ರವರೆಗೆ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಸಂಸ್ಥೆಗಳ ಮಾಲೀಕರ ರಾಜ್ಯ ಮಟ್ಟದ 3ನೇ ಮಹಾ ಅಧಿವೇಶನ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ.

ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳ ಬಳಿಕ ಈ ಸಮ್ಮೇಳನ ನಡೆಸಲಾಗುತ್ತಿದ್ದು, ವೃತ್ತಿಯಲ್ಲಿ ಎದುರಾಗುವ ಸವಾಲುಗಳ ಬಗ್ಗೆ ಚರ್ಚಿಸಲಾಗುತ್ತದೆ.

ಸೆ.10ರಂದು ಮಧ್ಯಾಹ್ನ 12 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್. ಶಶಿಶೇಖರ್ ದೀಕ್ಷಿತ್, ಬೇಬಿ ಮಠದ ತ್ರಿನೇತ್ರ ಮಹಾಂತ ಸ್ವಾಮೀಜಿ, ಸರ್ಖಾಜಿ ಉಸ್ಮಾನ್ ಶರೀಫ್, ಹಾರ್ಡ್‌ವಿಕ್ ಚರ್ಚ್‌ನ ಫಾ.ಜಾನ್‌ಸನ್ ಪಾಲ್ ಸಾನ್ನಿಧ್ಯ ವಹಿಸಲಿದ್ದಾರೆ. ಮೇಯರ್ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಪ್ರತಾಪ ಸಿಂಹ ಹಾಗೂ ಶಾಸಕರು ಪಾಲ್ಗೊಳ್ಳುವ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಆರ್.ಲಕ್ಷ್ಮಣ್ ಹಾಗೂ ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ಅಧ್ಯಕ್ಷ ಶಿವಕುಮಾರ್ ವಹಿಸಲಿದ್ದಾರೆ ಎಂದು ತಿಳಿಸಿದರು.

ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕಿನ ಸಂಸ್ಥೆ ನಡೆಸುತ್ತಿರುವವರು ಹಾಗೂ ಅಲ್ಲಿ ಕೆಲಸ ಮಾಡುವವರ ಹಿತಕಾಯಲು ಸರ್ಕಾರಗಳು ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ನಮ್ಮನ್ನು ಅಸಂಘಟಿತ ವಲಯದಲ್ಲೂ ಸೇರಿಸಿಲ್ಲ. ಶಾಮಿಯಾನ ಹಾಕುವ ವೇಳೆ ಯಾವುದಾದರೂ ಅನಾಹುತ ನಡೆದರೂ ಸಂತ್ರಸ್ತ ನೌಕರರ ನೆರವಿಗೆ ಸರ್ಕಾರ ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಈ ಸಮ್ಮೇಳನದಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಸೆ.11ರಂದು ರಾಜ್ಯದ ವಿವಿಧ ಜಿಲ್ಲೆಗಳ ಶಾಮಿಯಾನ ಸಂಸ್ಥೆಗಳ ಮುಖಂಡರೊಂದಿಗೆ ಸಭೆ ನಡೆಸಲಾಗುತ್ತದೆ. ಈ ಸಭೆಯಲ್ಲಿ ನೌಕರರಿಗೆ ವಿಮೆ ಮಾಡಿಸುವುದು, ಜಿಎಸ್‌ಟಿಯಿಂದ ಆಗುತ್ತಿರುವ ಸಮಸ್ಯೆಗಳ ಚರ್ಚೆ ನಡೆಸಲಾಗುತ್ತದೆ. ಶಾಮಿಯಾನ ಉದ್ಯಮವನ್ನು ಯಶಸ್ವಿಯಾಗಿ ಮುನ್ನಡೆಸುವ ಬಗೆ ಕುರಿತು ಚರ್ಚಿಸಲಾಗುತ್ತದೆ. ಸೆ.12ರಂದು ಸಂಘಟನೆಯ ಪದಾಧಿಕಾರಿಗಳಿಗೆ ಸನ್ಮಾನ ಹಾಗೂ ವಿವಿಧ ವಿಷಯ ಕುರಿತು ಚರ್ಚಾ ಕಾರ್ಯಕ್ರಮ ನಡೆಯಲಿದೆ. ಸಮ್ಮೇಳನಕ್ಕೆ ಬರುವ ಶಾಮಿಯಾನ ಸಂಸ್ಥೆಯ ಪ್ರತಿನಿಧಿಗಳಿಗೆ ವಾಸ್ತವ್ಯ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

96 ಮಳಿಗೆ: ಸಮ್ಮೇಳನದ ಅಂಗವಾಗಿ ವಸ್ತು ಪ್ರದರ್ಶನದ ಆವರಣದಲ್ಲಿ 96 ಮಳಿಗೆ ಸ್ಥಾಪಿಸಲಾಗಿದ್ದು, ಅವುಗಳಲ್ಲಿ ದೆಹಲಿ, ಮುಂಬೈ, ಗುಜರಾತ್, ಕೇರಳ ಸೇರಿದಂತೆ ಇನ್ನಿತರೆಡೆಗಳಿಂದ ಶಾಮಿಯಾನ, ಖುರ್ಚಿ, ಧ್ವನಿ ಮತ್ತು ಬೆಳಕು ವ್ಯವಸ್ಥೆಗೆ ಬಳಸುವ ಲೈಟಿಂಗ್ಸ್ ಸೇರಿದಂತೆ ವಿವಿಧ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಏಕಕಾಲಕ್ಕೆ ಎಲ್ಲಾ ಬಗೆಯ ವಸ್ತುಗಳನ್ನು ಒಂದೇ ವೇದಿಕೆಯಲ್ಲಿ ಕಲ್ಪಿಸಿಕೊಡುವ ಉದ್ದೇಶದಿಂದ ಮಳಿಗೆಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಮುನ್ನ, ಅಬ್ದುಲ್ ರೆಹಮಾನ್ ವಾಂಜಿ, ಮೈಸೂರು ಜಿಲ್ಲಾ ಶಾಮಿಯಾನ ಮಾಲೀಕರ ಸಂಘದ ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷರಾದ ಲಿಂಗಪ್ಪ, ತಾಜ್ ಮೊಹಮದ್, ಪ್ರಧಾನ ಕಾರ್ಯದರ್ಶಿ ಶಂಶದ್ ರೆಹಮಾನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಪ್ರೀತಿ ಮಾಡೋರಿಗೆ ಮಾತ್ರ
ಒಲವೇ ಮಂದಾರ-2

ದಶಕಗಳ ಹಿಂದೆ ತೆರೆಕಂಡಿದ್ದ 'ಒಲವೇ ಮಂದಾರ' ಅದ್ಭುತ ಯಶಸ್ಸು ಕಂಡಿತ್ತು. ಇದೀಗ ಅದೇ ಹೆಸರಿನಲ್ಲಿ ಹೊಸ ಕಥೆಯೊಂದನ್ನಿಟ್ಟುಕೊಂಡು ಎಸ್.ಆರ್.ಪಾಟೀಲ್ ಅವರು "ಒಲವೇ ಮಂದಾರ-2" ಚಿತ್ರ ನಿರ್ದೇಶಿಸಿದ್ದಾರೆ. ಮೊನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರ ಕುರಿತಂತೆ ಮಾತನಾಡಿದ ಅವರು, ಇದೊಂದು ಪರಿಶುದ್ಧ ಪ್ರೇಮಕಥೆ. ಪ್ರೀತಿ ಮಾಡುವವರನ್ನು ಅವರ ಪೋಷಕರು, ತಮ್ಮ ಮಕ್ಕಳೇನೋ ಕ್ರೈಮ್ ಮಾಡಿದಂತೆ ನೋಡುತ್ತಾರೆ. ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳನ್ನು. ಇದು ತಪ್ಪು. ಒಬ್ಬರನೊಬ್ಬರು ಅರಿತು ಮಾಡುವ ಪ್ರೀತಿ ಯಾವತ್ತೂ ತಪ್ಪಲ್ಲ, ಹಾಗೆ ಪ್ರೀತಿಸುವವರು, ತಮ್ಮ ಪ್ರೀತಿಯನ್ನು ತಂದೆ, ತಾಯಿಗೆ ಒಪ್ಪಿಸಲು ಪ್ರಯತ್ನಿಸಬೇಕೇ ಹೊರತು, ಬೇರೆ ಯಾವುದೇ ಕೆಟ್ಟ ನಿರ್ಧಾರ ತೆಗೆದುಕೊಳ್ಳಬಾರದು ಎಂದು ನಮ್ಮ ಚಿತ್ರದ ಮೂಲಕ ಒಂದು ಸಂದೇಶ ನೀಡಿದ್ದೇವೆ. ಹಿಂದೆ ಬಂದಿದ್ದ 'ಒಲವೇ ಮಂದಾರ' ಚಿತ್ರ ತುಂಬಾ ಇಷ್ಟ, ಹಾಗಾಗಿ ನಮ್ಮ ಚಿತ್ರಕ್ಕೆ ಅದೇ ಶೀರ್ಷಿಕೆ ಇಟ್ಟಿದ್ದೇವೆಯೇ ಹೊರತು, ಆ ಚಿತ್ರದ ಕಥೆಗೂ, ನಮ್ಮ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ, ಸನತ್, ಪ್ರಜ್ಞಾ ಭಟ್ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದು, ಸೆ.15ರಂದು ರಿಲೀಸ್ ಮಾಡುತ್ತಿದ್ದೇವೆ ಎಂದರು. ನಾಯಕ ಸನತ್ ಮಾತನಾಡುತ್ತಾ, ಈ ಹಿಂದೆ 'ಕಮರೊಟ್ಟು ಚೆಕ್‌ಪೋಸ್ಟ್' ಚಿತ್ರದಲ್ಲಿ ಅಭಿನಯಿಸಿದ್ದೆ. ನನಗಿದು ಎರಡನೇ ಚಿತ್ರ ಒಂದು ಪರಿಶುದ್ಧವಾದ ಪ್ರೇಮಕಥೆಯನ್ನು ನಿರ್ದೇಶಕರು ಸೊಗಸಾಗಿ ಹೇಳಿದ್ದಾರೆ. ಜೊತೆಗೊಂದು ಸಂದೇಶವನ್ನೂ ಚಿತ್ರದಲ್ಲಿ ಇಟ್ಟಿದ್ದಾರೆ. ನನ್ನ ಪಾತ್ರವೂ ಚೆನ್ನಾಗಿದೆ ಎಂದು ತಿಳಿಸಿದರು.

ಚಿತ್ರದ ನಿರ್ಮಾಪಕರಾದ ರಮೇಶ್ ಮರಗೋಳ, ಬಿ.ಎಂ. ಸತೀಶ್ ಹಾಗೂ ಸಹ ನಿರ್ಮಾಪಕರಾದ ಯಲ್ಲಾಲಿಂಗ ಮುಗುಟಿ ಹಾಗೂ ರಾಮದೇವ್ ರಾಥೋಡ್ ಎಲ್ಲರೂ ಚಿತ್ರದ ಕುರಿತು ಮಾತನಾಡಿದರು. ಸಂಗೀತ ನಿರ್ದೇಶಕ ಡಾ ಕಿರಣ್ ತೋಟಂಬೈಲ್ ಅವರು ಹಾಡುಗಳ ಬಗ್ಗೆ ಹಾಗೂ ನಾಯಕಿ ಪ್ರಜ್ಞಾ ಭಟ್, ಅನುಪಾ ಸತೀಶ್, ಹಿರಿಯನಟಿ ಭವ್ಯ, ಡಿಂಗ್ರಿ ನಾಗರಾಜ್, ಕಾಮಿಡಿ ಕಿಲಾಡಿ ಖ್ಯಾತಿಯ ಮಡೆನೂರ ಮನು, ಶಿವಾನಂದ ಸಿಂದಗಿ ಸೇರಿದಂತೆ ಅನೇಕ ಕಲಾವಿದರು ತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು.




'ಗನ್ಸ್ ಅಂಡ್ ರೋಸಸ್' ಭೂಗತಲೋಕದಲ್ಲಿ ಪ್ರೀತಿಯ ಪಯಣ..

ಕಥೆಗಾರ ಅಜಯ್‌ಕುಮಾರ್ ಪುತ್ರ ಅರ್ಜುನ್ ಈಗ ಹೀರೋ ಆಗುತ್ತಿದ್ದಾರೆ. ಶ್ರೀನಿವಾಸಮೂರ್ತಿ ಅವರ ನಿರ್ದೇಶನದ 'ಗನ್ಸ್ ಅಂಡ್ ರೋಸಸ್' ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು. ಈ ಸಂದರ್ಭದಲ್ಲಿ ನಿರ್ಮಾಪಕ ಹೆಚ್.ಆರ್.ನಟರಾಜ್ ಮಾತನಾಡುತ್ತಾ, ನಿರ್ದೇಶಕರು ನನ್ನ ಸ್ನೇಹಿತ. ಅವರು ಈ ಕಥೆಯನ್ನು ಹೇಳಿದಾಗ ಕಂಟೆಂಟ್ ತುಂಬಾ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದೆ. ಜೊತೆಗೆ ನಿಗದಿತ ಸಮಯಕ್ಕೆ ಸಿನಿಮಾ ಮುಗಿಸಬೇಕು ಎಂದು ಕಂಡೀಷನ್ ಹಾಕಿದ್ದೇನೆ. ಅಂದುಕೊಂಡಂತೆ ಆದರೆ, ಈ ವರ್ಷದ ಕೊನೆಗೆ ಚಿತ್ರವನ್ನು ರಿಲೀಸ್ ಮಾಡುವ ಪ್ಲಾನಿದೆ ಎಂದರು.

ನಿರ್ದೇಶಕ ಶ್ರೀನಿವಾಸಕುಮಾರ್ ಮಾತನಾಡಿ, ಚಿತ್ರರಂಗದಲ್ಲಿ ಸಾಕಷ್ಟು ವರ್ಷಗಳಿಂದ ಸಹನಿರ್ದೇಶಕನಾಗಿ ಕೆಲಸ ಮಾಡಿದ ಅನುಭವದ ಮೇಲೆ ಈ ಸಿನಿಮಾ ಮೂಲಕ ನಿರ್ದೇಶಕನಾಗುತ್ತಿದ್ದೇನೆ. ಶೀರ್ಷಿಕೆಯೇ ಹೇಳುವಂತೆ ಇದೊಂದು ಮಾಸ್ ಎಂಟರ್‌ಟೈನರ್ ಸಬ್ಜೆಕ್ಟ್, ಜೊತೆಗೊಂದು ಲವ್‌ಸ್ಟೋರಿ ಕೂಡ ಸಾಗುತ್ತದೆ. ಯಶ್ವಿಕ ನಿಷ್ಕಲ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಹಾಡುಗಳಿಗೆ ಶಶಿಕುಮಾರ್ ಅವರ ಸಂಗೀತ ಸಂಯೋಜನೆಯಿದ್ದು, ಜನಾರ್ದನ್ ಛಾಯಾಗ್ರಹಣ ಮಾಡುತ್ತಿದ್ದಾರೆ. ಸಂಜೀವ್ ರೆಡ್ಡಿ ಅವರ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದ್ದು, ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಶರತ್ ಬರೆದಿದ್ದಾರೆ ಎಂದು ತಿಳಿಸಿದರು.

ನಾಯಕ ಅರ್ಜುನ್ ಮಾತನಾಡಿ ನನ್ನ ತಂದೆ ಹಲವಾರು ವರ್ಷಗಳಿಂದ ಚಿತ್ರರಂಗದಲ್ಲಿದ್ದಾರೆ, ಅಭಿನಯದ ಬಗ್ಗೆ ತರಬೇತಿ ಪಡೆದುಕೊಂಡು ಈ ಚಿತ್ರದ ಮೂಲಕ ನಾಯಕನಾಗುತ್ತಿದ್ದೇನೆ. ಕಥೆ ಹಾಗೂ ನನ್ನ ಪಾತ್ರ ಎರಡೂ ಚೆನ್ನಾಗಿದೆ ಎಂದರು. ನಾಯಕಿ ಯಶ್ವಿಕ ನಿಷ್ಕಲ ತಮ್ಮ ಪಾತ್ರದ ಕುರಿತಂತೆ ಮಾತನಾಡಿದರು. 'ಗನ್ಸ್ ಅಂಡ್ ರೋಸಸ್' ಚಿತ್ರದಲ್ಲಿ ಅಂಡರ್‌ವರ್ಲ್ಡ್ ಹಾಗೂ ಪ್ರೇಮಕಥೆ ಎರಡೂ ಇರುತ್ತದೆ ಎಂದು ಕಥೆಗಾರ ಶರತ್ ಹೇಳಿದರು. ಅಜಯ್‌ಕುಮಾರ್, ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು, ಸಂಗೀತ ನಿರ್ದೇಶಕ ಶಶಿಕುಮಾರ್, ಛಾಯಾಗ್ರಹಕ ಜನಾರ್ದನ್ ಮಾತ್ತು ನಟರಾದ ಜೀವನ್ ರಿಚಿ ಹಾಗೂ ಹರೀಶ್ ಚಿತ್ರದ ಕುರಿತಂತೆ ಮಾತನಾಡಿದರು.

ಅ.19ಕ್ಕೆ ಬಹು ನಿರೀಕ್ಷಿತ 'ಘೋಸ್ಟ್'
ವಿದೇಶದಲ್ಲೂ ಬಿಗ್‌ಡ್ಯಾಡಿ ಹವಾ



ಆರಂಭದಿಂದಲೂ ಸದಭಿರುಚಿಯ ಸಿನಿಮಾಗಳನ್ನೇ ನೀಡುತ್ತಾ ಬಂದಿರುವ ಪ್ರತಿಷ್ಠಿತ ಚಿತ್ರ ನಿರ್ಮಾಣ ಸಂಸ್ಥೆ ಸಂದೇಶ್ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ಮಾಣವಾಗಿರುವ ಮತ್ತೊಂದು ಚಿತ್ರ 'ಘೋಸ್ಟ್' ಬಿಡುಗಡೆಯ ದಿನಾಂಕ ಇದೀಗ ಘೋಷಣೆಯಾಗಿದೆ. ಸಂದೇಶ್ ನಾಗರಾಜ್ (ಮಾಜಿ ಎಂಎಲ್‌ಸಿ) ಅರ್ಪಿಸಿ, ಸಂದೇಶ್ ಎನ್. ನಿರ್ಮಾಣದ ಹಾಗೂ ಶ್ರೀನಿ ಕಥೆ-ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ, ಶಿವರಾಜಕುಮಾರ್ ನಾಯಕರಾಗಿ ನಟಿಸಿರುವ ಬಹುನಿರೀಕ್ಷಿತ 'ಘೋಸ್ಟ್' ಚಿತ್ರ ಅ.19ಕ್ಕೆ ಅದ್ದೂರಿಯಾಗಿ ಬಿಡುಗಡೆಯಾಗಲಿದೆ, ಹಾರರ್ ಹಿನ್ನೆಲೆಯ ಕಥಾಹಂದರ ಹೊಂದಿರುವ 'ಘೋಸ್ಟ್' ಚಿತ್ರವು ಭಾರತ ಮಾತ್ರವಲ್ಲದೆ ವಿದೇಶದಲ್ಲೂ ಏಕಕಾಲಕ್ಕೆ ರಿಲೀಸಾಗಲಿದೆ. ಶಿವಣ್ಣ ಅವರ ಹುಟ್ಟುಹಬ್ಬದ ಸಮಯದಲ್ಲಿ ಬಿಡುಗಡೆಯಾಗಿದ್ದ 'ಬಿಗ್‌ಡ್ಯಾಡಿ' ಟೀಸರ್ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗುವ ಮೂಲಕ ಜನಪ್ರಿಯವಾಗಿದೆ. ಬಾಲಿವುಡ್ ಹಿರಿಯನಟ ಅನುಪಮ್ ಖೇರ್ ಅವರು ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸುವ ಮೂಲಕ ಕನ್ನಡಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಹೀಗೆ ಸಾಕಷ್ಟು ವಿಶೇಷತೆಗಳಿಂದ ಸುದ್ದಿಯಾಗಿರುವ 'ಘೋಸ್ಟ್' ಚಿತ್ರವನ್ನು ನೋಡಲು ಬರೀ ಭಾರತೀಯರಷ್ಟೇ ಅಲ್ಲ. ವಿದೇಶಿಗರು ಸಹ ಕಾತುರದಿಂದ ಕಾಯುತ್ತಿದ್ದಾರೆ. ಲಂಡನ್‌ನಿಂದ ಶಿವಣ್ಣ ಅಭಿಮಾನಿಗಳು ತಾವು ಈ ಚಿತ್ರದ ಬಿಡುಗಡೆಗೆ ಕಾಯುತ್ತಿರುವುದಾಗಿ ವಿಡಿಯೋ ಮೂಲಕ ಹೇಳಿಕೊಂಡು, ಚಿತ್ರ ಯಶಸ್ವಿಯಾಗಲೆಂದು ಶುಭ ಹಾರೈಸಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್, ನಿರ್ದೇಶಕ ಶ್ರೀನಿ ಸೇರಿದಂತೆ ಇನ್ನೂ ಮುಂತಾದವರು 'ಘೋಸ್ಟ್' ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಜಲಪಾತದಿಂದ ಹರಿದು ಬಂತು ಪರಿಸರ ಗೀತೆ...



ಅರಣ್ಯ ಸಂಪತ್ತು ಹಾಗೂ ಪರಿಸರ ಸಂರಕ್ಷಣೆಯ ಸಂದೇಶ ಇಟ್ಟುಕೊಂಡು ರವೀಂದ್ರ ತುಂಬರಮನೆ ಅವರು 'ಜಲಪಾತ' ಎನ್ನುವ ಚಿತ್ರವನ್ನು ನಿರ್ಮಿಸಿದ್ದಾರೆ, ಈ ಹಿಂದೆ 'ವೈಶಂಪಾಯನ ತೀರ' ಚಿತ್ರ ನಿರ್ದೇಶಿಸಿದ್ದ, ರಮೇಶ್ ಬೇಗಾರ್ ಅವರು ಚಿತ್ರಕ್ಕೆ ಕಥೆ-ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು, "ಎದೆಯ ದನಿಯ ಹಾಡು ಕೇಳು" ಸಾಹಿತ್ಯವಿರುವ ಈ ಹಾಡಿಗೆ ಗಾಯಕ ವಿಜಯ್ ಪ್ರಕಾಶ್ ದನಿಯಾಗಿದ್ದಾರೆ. ಸಾದ್ವಿನಿ ಕೊಪ್ಪ ಅವರ ಸಂಗೀತ ಸಂಯೋಜನೆಯಲ್ಲಿ ಈ ಹಾಡು ಮೂಡಿಬಂದಿದೆ. ಗಾಯಕಿಯಾಗಿದ್ದ ಸಾದ್ವಿನಿ, ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕಿಯಾಗಿದ್ದಾರೆ. ಹಿರಿಯ ಗಾಯಕ ನಗರ ಶ್ರೀನಿವಾಸ ಉಡುಪ ಅವರು ಈ ಹಾಡನ್ನು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

'ಜಲಪಾತ' ನನ್ನ ನಿರ್ದೇಶನದ ಎರಡನೇ ಚಿತ್ರ, ಪರಿಸರದ ಕುರಿತು ಜಾಗೃತಿ ಮೂಡಿಸುವ ಹಾಡುಗಳು ಸಾಕಷ್ಟು ಬಂದಿವೆ. ಆದರೆ ಈ ಹಾಡು ಸ್ವಲ್ಪ ವಿಭಿನ್ನ, ಮೊದಲ ನುಡಿಯಲ್ಲಿ ಪರಿಸರ ನಮಗೆ ಏನೆಲ್ಲಾ ನೀಡಿದೆ ಎಂದಿದ್ದು, ಎರಡನೇ ನುಡಿಯಲ್ಲಿ ನಮ್ಮಿಂದ ಪರಿಸರ ಏನಾಗುತ್ತಿದೆ ಎಂದು ವಿವರಿಸಿದ್ದೇನೆ. ಈ ಚಿತ್ರದಲ್ಲಿ ರಜನೀಶ್,

ನಾಗಶ್ರೀ ಬೇಗಾರ್ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಮೋದ್ ಶೆಟ್ಟಿ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಳಿದಂತೆ ಮಲೆನಾಡ ರಂಗಭೂಮಿ ಪ್ರತಿಭೆಗಳು ಚಿತ್ರದಲ್ಲಿ ನಟಿಸಿದ್ದಾರೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವುದಾಗಿ ನಿರ್ದೇಶಕ ರಮೇಶ್ ಬೇಗಾರ್ ತಿಳಿಸಿದರು.

ನಿರ್ಮಾಪಕ ರವೀಂದ್ರ ತುಂಬರಮನೆ ಮಾತನಾಡಿ ಜನರಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸುವ ಚಿತ್ರ ಮಾಡಬೇಕೆಂದು ಬಹಳ ದಿನಗಳಿಂದ ಅಂದುಕೊಂಡಿದ್ದೆ. ಅದು ಈ ಚಿತ್ರದ ಮೂಲಕ ಈಡೇರಿದೆ. ಮಲೆನಾಡಿನ ಸುಂದರ ಸೊಬಗನ್ನು ನಮ್ಮ ಚಿತ್ರದಲ್ಲಿ ಚೆನ್ನಾಗಿ ತೋರಿಸಿದ್ದೇವೆ, ಚಿತ್ರ ನೋಡುಗರ ಮನಸ್ಸಿಗೆ ಹತ್ತಿರವಾಗಲಿದೆ ಎಂದರು. ನಾಯಕ ರಜನೀಶ್ ಹಾಗೂ ನಾಯಕಿ ನಾಗಶ್ರೀ ಬೇಗಾರ್ ಜಲಪಾತ ಚಿತ್ರದಲ್ಲಿನ ತಮ್ಮ ಪಾತ್ರದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-490

■	1			2		■	3		4	
■		■	■		■	■		■		■
5			■	6				■		■
■		■	7	■	■	■		■	8	
9				■	10	■		■		■
■	■	■	11					■	■	■
■	12	■		■		■	13		14	
15		■		■	■	■		■		■
■		■	16			17	■	18		
■		■		■	■		■	■		■
19				■	20					■

ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಉಮೇಶ್ ಕುಲಕರ್ಣಿ ನಿರ್ದೇಶನದಲ್ಲಿ ದಕ್ಷಿಣ ದಿಕ್ಕಿಗೆ ವಿರುದ್ಧ ಬಂದವನು 5
3.ನಕ್ಷತ್ರಗಳೊಳಗೆ ಇರುವ ಕ್ಯಾಬರೆ ತಾರೆ 4
5.ರವಿಶಂಕರ್ – ರಮಣಿತು ಚೌಧರಿ ಅಭಿನಯದ "ಜರ್ನಿ" 3
6 ._ _ _ _ ನೈದಿಲೆ 4
8 'ರಾಜನರಸಿಂಹ' ಚಿತ್ರದ ನಾಯಕಿ 2
9. ಕಚ್ಚುವ ಹುಳುಗಳು ಕಟ್ಟಿದ ಸಿಹಿ ಪಂಜರ 4
11. ಪಂಚಭೂತಗಳೊಂದರಿಂದ ನಿರ್ಮಿಸಿದ ಶಿಖರ 5
13. ಕನ್ನಡದ "ಲವ್ ಸ್ಟೋರಿ" 4
15.ಕಲಾವಿದ ಚಿತ್ರದ ನಾಯಕಿ 2
16. ಗಣೇಶ್ – ರೇಖಾ ಆಡಿದ್ದು ಚೆಲ್ಲಾಟವಲ್ಲ.... 4
18.ಹಾಸ್ಯ, ಕುಚೋದ್ಯ, ನಕಲಿಗೆ ಮತ್ತೊಂದು ಪದ 3
19.ಶಿವಣ್ಣ ಅಭಿನಯದಲ್ಲಿ ಪವನನ ಮಗ ತುಂಬಾ ಬಲಶಾಲಿ 4
20."ಆ ರವಿ ಜಾರಿದ ಬಾ ಶಶಿ ಮೂಡಿದ....., " ಗೀತೆಯ ಚಿತ್ರ 5

ವಿಜೇತರು: ವಿ.ದೇವರಾಜು ಅಳಗಂಚಿ ಗ್ರಾಮ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ-571119


ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 489ರ ಉತ್ತರ

■	ಅ	ಜ್ಞಾ	ತ	ವಾ	ಸ	■	ಪ್ರೊ	ಫೆ	ಸ	ರ್
■	ಮೃ	■	■	ನ	■	■	ಫೆ	■	ಮ	■
ಜಾ	ತ	ಕ	■	ಮ	ಧು	ಮಾ	ಸ	■	ರ	■
■	ಸಿಂ	■	ಜ	■	■	■	ರ್	■	ಸಿಂ	ಧು
ಮ	ಧು	ಬಾ	ಲ	■	ಆ	■	ಹು	■	ಹ	■
■	■	■	ಲ	ವ್	ಯು	ರ	ಚ್ಚು	■	■	■
■	ಪ	■	ಜ	■	ಧ	■	ರಾ	ಮ	ನಾ	ಥ
ವ	ರ	■	ಲ	■	■	■	ಯ	■	ತಿ	■
■	ಶು	■	ಲ	ವ	ಕು	ಶ	■	@	ಚ	@
■	ರಾ	■	ಜ	■	■	ಪ	■	■	ರಾ	■
ಪ್ರೇ	ಮ	ಜಾ	ಲ	■	ರ	ಥ	ಸ	ಪ್ತ	ಮಿ	■

ಮೇಲಿನಿಂದ ಕೆಳಕ್ಕೆ

1ಜೇನಿನ ಹೊಳೆ ಚಿತ್ರದ ಹೀರೋಯಿನ್ 5
2. ಕುಮಾರತ್ರಯರು ಅಭಿನಯಿಸಿರುವ ಚಿತ್ರ 3
3.ಶಾಶ್ವತ-ಸಿಹಿ-ಪ್ರೀತಿ 8
4. ರಾಕ್ಷಸರ ನಾಡು 5
7.ಶ್ರೀನಾಥ್ –ಮಂಜುಳಾ ಅಭಿನಯಕ್ಕೆ ಅಮೃತಂ ನಿರ್ದೇಶಕ 8
10.ಸುಮಂತ್ – ರುಚಿತಾ ಪ್ರಸಾದ್ ಬಿಡಿಸಿದ ಚಿತ್ತಾರ 3
12. ವಿಷ್ಣುವರ್ಧನ್ – ರೂಪಿಣಿ ಅಭಿನಯಕ್ಕೆ ಭಾರ್ಗವ ನಿರ್ದೇಶನವಿದೆ 5
14. ಶಶಿಕುಮಾರ್ – ಮಾಲಾಶ್ರೀಗೆ ಕಂಕಣ ಬಲವಿದೆ 5
17. ಶಿವರಾಜ್ ಕುಮಾರ್ ಅಭಿನಯದಲ್ಲಿ ಬಂದ ಮೇಷ ಬಳಗದ ಪ್ರಾಣಿ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಹಿಂದುಳಿದಿರುವ ಕೋಟೆಯಲ್ಲಿ ಶಿಕ್ಷಣದ ಪ್ರಗತಿ ಅಗತ್ಯ

ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಕರೆ



ಸರಗೂರು, ಸೆ.7– ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೊಂದಿರುವ ಕೋಟೆ ಕ್ಷೇತ್ರದಲ್ಲಿ ಶಿಕ್ಷಣದಲ್ಲಿ ಪ್ರಗತಿ ಸಾಧಿಸುವ ಮೂಲಕ ಉತ್ತಮ ಸಾಧನೆ ಮಾಡಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ಗುರುವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘ ಎಚ್.ಡಿ.ಕೋಟೆ, ಸರಗೂರು ತಾಲೂಕು ವತಿಯಿಂದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ 135ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಿಗೆ ಅಭಿನಂದನೆ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

"ಕ್ಷೇತ್ರದಲ್ಲಿ ಉತ್ತಮ ಶಿಕ್ಷಕರಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಉತ್ತಮ ಸೇವೆ ಮಾಡುತ್ತಿದ್ದಾರೆ. ಉತ್ತಮ ಶಿಷ್ಯಂದಿರು ಗುರುಗಳ ಆದರ್ಶಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯನಿಂದ ಹಿಡಿದು ಪ್ರಧಾನಮಂತ್ರಿವರೆಗೂ ಗುರುಗಳ ಮಾರ್ಗದರ್ಶನ ಇರಲಿದೆ. ನಾನೂ ವಿಧಾನಸಭೆಯಲ್ಲಿ ಕುಳಿತು ಅಧಿವೇಶನದಲ್ಲಿ ಭಾಗಿಯಾಗಲೂ ವಿದ್ಯೆಯೇ ಕಾರಣ. ಹೀಗಾಗಿ ಸಾಧಕರ ಹಿಂದೆ ಗುರುಗಳು ಇರುತ್ತಾರೆ. ಇಂಥ ಗುರುಗಳು ಮಕ್ಕಳನ್ನು ಭಾರತದ ಭವಿಷ್ಯವನ್ನಾಗಿ ಮಾಡಬೇಕು" ಎಂದು ಅವರು ಸಲಹೆ ನೀಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಚ್.ಕೆ.ಪಾಂಡು ಮಾತನಾಡಿ, "ಕೋಟೆ ಶಿಕ್ಷಕರ ಪರಿಶ್ರಮದಿಂದಾಗಿ 'ನಲಿ–ಕಲಿ' ಶಿಕ್ಷಣ ರಾಷ್ಟ್ರ ಮಟ್ಟದಲ್ಲಿ ಪ್ರಗತಿ ಸಾಧಿಸಿದೆ. ಹೀಗಾಗಿ ಎಚ್.ಡಿ.ಕೋಟೆ, ಸರಗೂರು ಶಿಕ್ಷಕರು ಉತ್ತಮ ಸೇವೆ ಮಾಡುವಲ್ಲಿ ಮುಂಚೂಣಿಯಲ್ಲಿದ್ದು, ಮಕ್ಕಳ ಕಲಿಕೆಗೆ ನೆರವಾಗುತ್ತಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಾರಯ್ಯ ಮಾತನಾಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಎಚ್.ಎಸ್. ಉಮೇಶ್ ಪ್ರಧಾನ ಭಾಷಣ ಮಾಡಿದರು. ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ರಾಮಚಂದ್ರ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಸರಗೂರು ತಾಲೂಕು ಅಧ್ಯಕ್ಷ ಎಂ. ಕೆಂಡಗಣ್ಣಸ್ವಾಮಿ, ಪಟ್ಟಣ ಪಂಚಾಯಿತಿ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ ಸಣ್ಣತಾಯಮ್ಮ, ಹೇಮಾವತಿ ರಮೇಶ್, ನೂರಾಳಸ್ವಾಮಿ, ಶಿವಕುಮಾರ್, ನಾಮಧಾರಿಗೌಡ ಸಮಾಜದ ಅಧ್ಯಕ್ಷ ಭೀಮರಾಜ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸರಗೂರು ಅಧ್ಯಕ್ಷ ಬಿ.ಎನ್.ಸತೀಶ್, ಜಿ.ಎಸ್.ರಾಮೇಗೌಡ, ಚಂದ್ರಕುಮಾರ್, ಎಚ್.ಬಿ.ಜ್ಯೋತಿ, ವಸಂತ್‌ಕುಮಾರ್, ಸಿದ್ದರಾಜು, ಕೆಂಪೇರಾಮೇಗೌಡ, ಸುರೇಶ್ ಕುಮಾರ್, ಯಶ್ವಂತ್‌ಕುಮಾರ್, ಎ.ಎಸ್. ಮಹದೇವು, ಗಿರೀಶ್‌ಮೂರ್ತಿ, ಸೋಮಸುಂದರ್, ಸುರೇಶ್, ಗುರುಸ್ವಾಮಿ, ರವಿ, ಮಹೇಂದ್ರ, ರವೀಂದ್ರಬಾಬು ಸೇರಿದಂತೆ ಸಂಘದ ನಿರ್ದೇಶಕರು, ಪದಾಧಿಕಾರಿಗಳು, ಶಿಕ್ಷಕರು, ಜ್ಯೋತಿ ಬಾಫುಲೆ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಇದೇ ಸಂದರ್ಭದಲ್ಲಿ 24 ಮಂದಿ ನಿವೃತ್ತ ಶಿಕ್ಷಕರನ್ನು ಅಭಿನಂದಿಸಲಾಯಿತು. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉತ್ತಮ ಶಾಲೆಗಳನ್ನು ಗುರುತಿಸಿ, ಪ್ರಶಸ್ತಿ ಪುರಸ್ಕಾರ ನೀಡಲಾಯಿತು.

> ಸಿಎಂ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಮೊದಲ ಸ್ಥಾನಕ್ಕೆ ತರಲು ಪಣ ತೊಟ್ಟಿದ್ದಾರೆ. ಅದೇ ರೀತಿ ಎಚ್.ಡಿ. ಕೋಟೆ, ಸರಗೂರು ತಾಲೂಕನ್ನು ಜಿಲ್ಲೆಯಲ್ಲಿಯೇ ಮೊದಲ ಸ್ಥಾನದಲ್ಲಿ ತರಬೇಕು. ಶಿಕ್ಷಕರು ರಾಜಕಾರಣ ಮಾಡದಂತೆ ಶಿಕ್ಷಣ ಇಲಾಖೆಯೂ ಮೂಲಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಮುಂದಾಗಬೇಕು. ಶಿಕ್ಷಕರ ಭವನ ಆಗಬೇಕಿದೆ. ಇದಕ್ಕೆ ಪೂರಕವಾಗಿ ಸರಕಾರದ ಗಮನಕ್ಕೆ ತರಲಾಗುವುದು.
> –ಅನಿಲ್ ಚಿಕ್ಕಮಾದು

ನಾಳೆ ಚುಂಚನಕಟ್ಟೆಯಲ್ಲಿ ಚಿಕ್ಕಜಾತ್ರೆ



ಚುಂಚನಕಟ್ಟೆ, ಸೆ.7–ಪುರಾಣ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಕಡೇ ಶ್ರಾವಣ ಶನಿವಾರದ ಪ್ರಯುಕ್ತ ಸೆ.9ರ ಶನಿವಾರ ಚಿಕ್ಕಜಾತ್ರೆ ನಡೆಯಲಿದೆ.

ಜಾತ್ರಾ ಪ್ರಯುಕ್ತ ದೇವಾಲಯದ ಅಂಗಳದಲ್ಲಿ ಇರುವ ಚಿಕ್ಕ ತೇರಿನಲ್ಲಿ ಸೀತಾರಾಮಾ ಮೂರ್ತಿಗಳ ಸಮೇತ ಉತ್ಸವ 11.15ಕ್ಕೆ ಜರುಗಲಿದ್ದು, ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಲಾಗುವುದು. ಜನವರಿಯಲ್ಲಿ ಜರಗುವ ರಥೋತ್ಸವದ ಮಾದರಿಯಲ್ಲೇ ಚಿಕ್ಕಜಾತ್ರೆಯೂ ನಡೆಯಲಿದೆ, ಚಿಕ್ಕಜಾತ್ರೆ ಅಂಗವಾಗಿ ದೇವಾಲಯದಲ್ಲಿ ವಿಶೇಷ ಅಲಂಕಾರ, ಪೂಜೆ, ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ.

ಪ್ರಚಾರದ ಕೊರತೆ : ಕಡೇ ಶ್ರಾವಣದ ಪ್ರಯುಕ್ತ ಶ್ರೀರಾಮ ದೇವಾಲಯದಲ್ಲಿ ಬಹಳ ಹಿಂದಿನಿಂದಲೂ ಬ್ರಹ್ಮರಥೋತ್ಸವದ ಮಾದರಿಯಲ್ಲೇ ಭಕ್ತಾದಿಗಳು ಆಗಮಿಸುತ್ತಿದ್ದರೂ ದೇವಾಲಯದ ಆಡಳಿತ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಪ್ರಚಾರದ ಕೊರತೆಯಿಂದ ಚಿಕ್ಕಜಾತ್ರೆಯ ಮಾಹಿತಿಯು ಜನರಿಗೆ ತಿಳಿಸದೇ ಇರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಜಾತ್ರೆಯ ಅಂಗವಾಗಿ ಜಾತ್ರಾ ಮಾಳದಲ್ಲಿ ಹಾಕಲಾಗುವ ಅಂಗಡಿ ಮುಂಗಟ್ಟುಗಳ ಸುಂಕ ಹರಾಜನ್ನು ಮಾಡಿ ದೇವಾಲಯದ ಆದಾಯವನ್ನು ಮಾತ್ರ ಪರಿಗಣಿಸುವ ಮುಜರಾಯಿ ಇಲಾಖೆಯ ಅಧಿಕಾರಿಗಳು ದೇವಾಲಯದಲ್ಲಿ ಜರುಗುವ ಉತ್ಸವ, ವಿಶೇಷ ಪೂಜೆಗಳ ಬಗ್ಗೆ ಪ್ರಚಾರ ಮಾಡಿ ಭಕ್ತಾದಿಗಳನ್ನು ಸೆಳೆಯುವ ಈ ಕುರಿತು ಮಾಹಿತಿ ನೀಡುವ ಗೋಜಿಗೇ ಹೋಗದಿರುವುದು ಆಸ್ತಿಕರ ಕೆಂಗಣ್ಣಿಗೆ ಗುರಿಯಾಗುವಂತಾಗಿದೆ.

ಇಪ್ಪತ್ನಾಲ್ಕು ಮನೆ ತೆಲುಗು ಶೆಟ್ಟರ ಜನಾಂಗದ ಸಂಘ ಅಸ್ತಿತ್ವಕ್ಕೆ



ಹೆಚ್.ಡಿ.ಕೋಟೆ, ಸೆ.7– ಇಪ್ಪತ್ನಾಲ್ಕು ಮನೆ ತೆಲುಗು ಶೆಟ್ಟರ ಸಮಾಜದ ವತಿಯಿಂದ ತಾಲೂಕು ಮಟ್ಟದ ಸಂಘವನ್ನು ಸ್ಥಾಪನೆ ಮಾಡಲು ನಾವು ಹಗಲಿರುಳು ಶ್ರಮಿಸಿದ್ದೇವೆ ಎಂದು ನೂತನ ಅಧ್ಯಕ್ಷ ಎನ್.ಎಸ್. ಮಂಜುನಾಥ್ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾದ ಇಪ್ಪತ್ನಾಲ್ಕು ಮನೆ ತೆಲುಗುಶೆಟ್ಟರ ಜನಾಂಗದ ನೂತನ ಸಂಘದ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಮ್ಮ ಸಮಾಜವನ್ನು ಸಂಘಟನೆಯತ್ತ ಕೊಂಡೊಯ್ಯಲು ಸಂಘದ ಅನಿವಾರ್ಯತೆ ಇತ್ತು, ಆದ್ದರಿಂದ ನೂತನ ಸಂಘವನ್ನು ಸ್ಥಾಪಿಸಲಾಗಿದೆ. ತಾಲೂಕಿನಲ್ಲಿ ತಮ್ಮ ಜನಾಂಗದ ವತಿಯಿಂದ ಹಲವಾರು ಸಮಾಜ ಸೇವೆಗಳು ನಡೆಯುತ್ತಿದ್ದವು, ಮುಂದಿನ ದಿನಗಳಲ್ಲಿ ಸಂಘದ ಹೆಸರಿನಲ್ಲಿ ಸಮಾಜ ಸೇವೆಗಳ ನಡೆಯಲಿವೆ ಎಂದರು.

ಇದೇ ವೇಳೆ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಾಲೂಕು ಅಧ್ಯಕ್ಷರಾಗಿ ಎನ್.ಎಸ್. ಮಂಜುನಾಥ್, ಗೌರವಾಧ್ಯಕ್ಷರಾಗಿ ಶಿವನಾಗಶೆಟ್ಟಿ, ಉಪಾಧ್ಯಕ್ಷರಾಗಿ ಹೆಚ್.ಆರ್.ಶೇಖರ್, ಕಾರ್ಯದರ್ಶಿಯಾಗಿ ಮೃತ್ಯುಂಜಯ, ಸಹ ಕಾರ್ಯದರ್ಶಿಯಾಗಿ ವೀರಭದ್ರಶೆಟ್ಟಿ, ಖಜಾಂಚಿ ಭಾಸ್ಕರ್ ಶೆಟ್ಟಿ, ನಿರ್ದೇಶಕರಾಗಿ ಮಂಚಶೆಟ್ಟಿ, ಮಹದೇವು, ಬಂಗಾರಶೆಟ್ಟಿ, ಮಹದೇವಶೆಟ್ಟಿ, ಎಚ್.ಸಿ.ಗಣೇಶ್, ಕೆ.ಜಗದೀಶ್, ನಂಜುಂಡಸ್ವಾಮಿ, ಮಹದೇವಶೆಟ್ಟಿ, ಆರ್.ಆರ್. ಮುರಳಿಕೃಷ್ಣ ಎಚ್.ಎನ್.ಬಸವರಾಜು, ರವಿ, ಎಚ್.ವಿ. ವೆಂಕಟೇಶ್, ಪ್ರಸನ್ನಶೆಟ್ಟಿ ಆಯ್ಕೆಯಾದರು.

ಮೈಸೂರಿನ ಸಂಗಶೆಟ್ಟಿ, ಇಂದ್ರಶೆಟ್ಟಿ, ಪ್ರಭಾಕರ್, ಜಗದೀಶ್, ರವಿ, ಕಳಸೂರಿನ ವೆಂಕಟರಮಣಶೆಟ್ಟಿ, ದೇವಲಾಪುರ ನಂಜಪ್ಪಶೆಟ್ಟಿ, ಮುಳ್ಳೂರಿನ ವಾಸರಾಜು, ಶಿವಪ್ಪಶೆಟ್ಟಿ ಶ್ರೀರಂಗಸ್ವಾಮಿ, ಕೃಷ್ಣಶೆಟ್ಟಿ, ಜನಾರ್ಧನಶೆಟ್ಟಿ, ರಾಮಶೆಟ್ಟಿ, ಮಹದೇವಶೆಟ್ಟಿ, ಗೋಪಾಲಶೆಟ್ಟಿ, ನಾಗಶೆಟ್ಟಿ, ಪ್ರಕಾಶ್, ಲಕ್ಷ್ಮಣ್ ಶೆಟ್ಟಿ, ನಾಗರಾಜು, ಶ್ರೀನಿವಾಸಶೆಟ್ಟಿ ಶಿವಪ್ಪಶೆಟ್ಟಿ ಇದ್ದರು.

ಹುಣಸೂರಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ

ಮುಸ್ಲಿಂ, ಕ್ರಿಶ್ಚಿಯನ್ ಧರ್ಮದ ಮಕ್ಕಳು ಸೇರಿ 80ಕ್ಕೂ ಹೆಚ್ಚು ರಾಧಾ–ಕೃಷ್ಣೆಯರು ಭಾಗಿ



ಹುಣಸೂರು,ಸೆ.7– ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಹುಣಸೂರು ರೋಟರಿ ಸಂಸ್ಥೆ ಹಾಗೂ ಪೃಥ್ವಿ ಜ್ಯುವೆಲರಿ ಸಹಯೋಗದಲ್ಲಿ, ಎರಡು ವರ್ಷದಿಂದ ಐದು ವರ್ಷದ ಮಕ್ಕಳಿಗೆ ರಾಧಾ–ಕೃಷ್ಣ ವೇಷಭೂಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ ಸುಮಾರು 80ಕ್ಕೂ ಹೆಚ್ಚು ಮಕ್ಕಳು ರಾಧಾಕೃಷ್ಣ ವೇಷಧಾರಿಯಾಗಿ ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಧರ್ಮದ ಮಕ್ಕಳು ಕೂಡ ಭಾಗವಹಿಸಿ ಗಮನ ಸೆಳೆದರು. ಈ ಸ್ಪರ್ಧೆಯ ತೀರ್ಪುಗಾರರಾಗಿ ಹುಣಸೂರಿನ ಲೋಕೇಶ್ ಬಾಬು, ಬ್ರಹ್ಮಕುಮಾರಿ ಸಮಾಜದ ನಾಗಶ್ರೀ ಮತ್ತು ಪೂಜಾ ಫ್ಯಾಶನ್ ಸ್ಟುಡಿಯೋದ ಪೂಜಾರವರು ಭಾಗವಹಿಸಿದ್ದರು.

ಪ್ರಥಮ ಬಹುಮಾನವನ್ನು ವಿಧಾತ್ ಡಿಸಿ, ದ್ವಿತೀಯ ಬಹುಮಾನವನ್ನು ಜಸ್ವಂತ್, ಮೂರನೇ ಬಹುಮಾನವನ್ನು ಚಿರಂತ್ ಪಡೆದರು. ಸಮಾಧಾನಕರವಾಗಿ ನಾಲ್ಕನೇ ಮತ್ತು ಐದನೇ ಬಹುಮಾನವನ್ನು ಇಂಪನ ಮತ್ತು ಗುಣಸ್ಮಿತಾ ಎಂಬ ಮಕ್ಕಳು ಪಡೆದರು.

ರೋಟರಿ ಕ್ಲಬ್ ಅಧ್ಯಕ್ಷ ಚನ್ನಕೇಶವ, ಕಾರ್ಯದರ್ಶಿ ಪ್ರಸನ್ನ, ಇನ್ನರ್‌ವೀಲ್ ಅಧ್ಯಕ್ಷೆ ಸ್ಮಿತಾ ದಯಾನಂದ್, ರೋಟರಿ ಸದಸ್ಯರಾದ ಸರೋಜಿನಿ ವಿಕ್ರು, ಗಿರೀಶ್, ಆನಂದ್, ಶಾಮಣ್ಣ, ಪಾಂಡುಕುಮಾರ್ ಮತ್ತು ಪೃಥ್ವಿ ಜ್ಯುವೆಲ್ಲರಿನ ಸಿಬ್ಬಂದಿಗಳು, ರೋಟರಿ ಶಾಲೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಹೋಂಗಾರ್ಡ್ ಮೇಲೆ ಹಲ್ಲೆ : ಆರೋಪಿ ಬಂಧನ



ಹುಣಸೂರು, ಸೆ.7– ಕರ್ತವ್ಯ ನಿರತ ಹೋಂಗಾರ್ಡ್ ಮೇಲೆ ಹಲ್ಲೆ ನಡೆಸಿದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ನರಸಿಂಹಸ್ವಾಮಿ ತಿಟ್ಟು ಬಡಾವಣೆಯ ಮೂರ್ತಿರಾವ್ ಅವರ ಪುತ್ರ ಅರವಿಂದ್ ಬಂಧಿತ ಆರೋಪಿ. ಮಂಗಳವಾರ ಸಂಜೆ ಸ್ನೇಹಿತನೊಂದಿಗೆ ಬಂದಿದ್ದ ಅರವಿಂದ್ ನೋ ಪಾರ್ಕಿಂಗ್ ಸ್ಥಳದಲ್ಲಿ ತನ್ನ ಬೈಕ್ ನಿಲ್ಲಿಸಿದ್ದಾನೆ. ಇದನ್ನು ಕಂಡ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಭದ್ರತಾ ಕರ್ತವ್ಯದಲ್ಲಿದ್ದ ಹೋಂಗಾರ್ಡ್ ಅವಿನಾಶ್ ನೋ ಪಾರ್ಕಿಂಗ್‌ನಲ್ಲಿ ಬೈಕ್ ನಿಲ್ಲಿಸದಂತೆ ಸೂಚಿಸಿದರು.

ಮದ್ಯಸೇವಿಸಿದ್ದ ಅವರಿಂದ ಹೋಂಗಾರ್ಡ್ ಜೊತೆ ವಾಗ್ಯುದ್ಧಕ್ಕಿಳಿದು ಹಲ್ಲೆ ನಡೆಸಿದ ಅನ್ನಲಾಗಿದೆ. ನಿಲ್ದಾಣದ ಉಸ್ತುವಾರಿ ಅಧಿಕಾರಿಗಳು ತಕ್ಷಣವೇ 112ಗೆ ಕರೆಮಾಡಿದ ಮೇರೆಗೆ ಪೊಲೀಸರು ಆಗಮಿಸಿ ಆರೋಪಿ ಅರವಿಂದನನ್ನು ಬಂಧಿಸಿದ್ದಾರೆ. ವಾರದ ಹಿಂದಷ್ಟೆ ನಿಲ್ದಾಣದಲ್ಲಿ ಬೈಕ್‌ನಲ್ಲಿ ಬಂದಿದ್ದ ಯುವಕನೋರ್ವನ ಮೇಲೆ ಬಸ್ ಹರಿದು ಯುವಕನ ಕಾಲು ತುಂಡಾಗಿತ್ತು. ಇದರಿಂದ ನಿಲ್ದಾಣದಲ್ಲಿ ಖಾಸಗಿ ವಾಹನಕ್ಕೆ ನಿರ್ಬಂಧ ಹೇರಿರುವ ಫಲಕ ಅಳವಡಿಸಿದ್ದರೂ ನಿಲ್ದಾಣದಲ್ಲಿ ಪುಂಡ ಯುವಕರ ಹಾವಳಿ ಹೆಚ್ಚಿದ್ದು, ಪೊಲೀಸರು ನಿಯಂತ್ರಿಸಬೇಕೆಂದು ಮದಕರಿನಾಯಕರ ಯುವ ವೇದಿಕೆ ಅಧ್ಯಕ್ಷ ಮಯೂರ ಆಗ್ರಹಿಸಿದ್ದಾರೆ.

ತಿ.ನರಸೀಪುರ ಚೆಸ್ಕಾಂ ಕಚೇರಿ ಮುಂದೆ ದಸಂಸ ಪ್ರತಿಭಟನೆ

ತುರ್ತು ಸೇವಾ ವಾಹನದ ಬಾಡಿಗೆ ಹಣ ನೀಡುವಂತೆ ಆಗ್ರಹ



ತಿ.ನರಸೀಪುರ,ಸೆ.7– ಚೆಸ್ಕಾಂ ಸೇವೆಗೆ ನೀಡಲಾಗಿದ್ದ ತುರ್ತು ಸೇವಾ ವಾಹನದ ದುಡಿಮೆ ಬಾಕಿ ಹಣವನ್ನು ತುರ್ತಾಗಿ ಬಿಡುಗಡೆ ಮಾಡುವಂತೆ ಒತ್ತಾಯಿಸಿ ತಾಲೂಕು ದಲಿತ ಸಂಘರ್ಷ ಸಮಿತಿ ಸದಸ್ಯರು ಚೆಸ್ಕಾಂ ಕಚೇರಿ ಮುಂದೆ ಅನಿರ್ದಿಷ್ಟ ಕಾಲ ಪ್ರತಿಭಟನಾ ಧರಣಿ ಆರಂಭಿಸಿದ್ದಾರೆ.

ತುರ್ತು ಸೇವಾ ವಾಹನ ದುಡಿಮೆ ಬಾಕಿ ಹಣ ನೀಡದ ಅಂಜನಾದ್ರಿ ಟ್ರಾನ್ಸ್‌ಪೋರ್ಟ್ ಸಲ್ಯೂಷನ್ ಮಾಲೀಕರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಹೊರಗುತ್ತಿಗೆ ಆಧಾರದ ಮೇಲೆ ಚೆಸ್ಕಾಂಗೆ ವಿದ್ಯುತ್ ತುರ್ತು ಸೇವೆಗಾಗಿ ನಿಯೋಜನೆ ಮಾಡಿದ್ದ ಬಸವಣ್ಣ ಎಂಬುವರಿಗೆ ವಾಹನದ ಬಾಡಿಗೆ ಹಣ ನೀಡದೇ ಅಂಜನಾದ್ರಿ ಟ್ರಾನ್ಸ್‌ಪೋರ್ಟ್ ಸಲ್ಯೂಷನ್ ಮಾಲೀಕರಾದ ನಾಗೇಶ್ ಮತ್ತು ಶೇಖರ್ ಎಂಬುವರು ಉದ್ಧಟತನ ತೋರುತ್ತಿದ್ದು, ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆಂದು ಆರೋಪಿಸಿದರು.

2014ನೇ ಸಾಲಿನಲ್ಲಿ ಅಂಜನಾದ್ರಿ ಟ್ರಾನ್ಸ್‌ಪೋರ್ಟ್ ಸಲ್ಯೂಷನ್ ಮತ್ತು ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಅವರ ನಡುವೆ ತುರ್ತು ಸೇವಾ ವಾಹನದ ಬಗ್ಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ವರುಣ ಮತ್ತು ನರಸೀಪುರ ಉಪ ವಿಭಾಗಕ್ಕೆ ಎರಡು ವಾಹನಗಳನ್ನು ನಿಯೋಜನೆ ಮಾಡಲಾಗಿತ್ತು. ಕರಾರಿನ ನಿಯಮದಂತೆ ಮಾಸಿಕ ಬಾಡಿಗೆಯಾಗಿ 32 ಸಾವಿರ ರೂ.ಗಳನ್ನು ನಿಗದಿಪಡಿಸಿ ಪ್ರತಿ ವಾಹನ ಚಾಲಕರಿಗೆ ಇ.ಎಸ್.ಐ ಮತ್ತು ಪಿಎಫ್ ನೀಡುವ ಷರತ್ತು ನಿಬಂಧನೆಗಳಿಗೆ ಒಳಪಟ್ಟಿತ್ತು.ಆದರೆ ಈ ವರೆವಿಗೂ ವಾಹನ ಚಾಲಕರಿಗೆ ಸೌಲಭ್ಯ ನೀಡದೇ ಕಾರ್ಮಿಕ ಕಾನೂನನ್ನು ಸಂಪೂರ್ಣವಾಗಿ ಏಜೆನ್ಸಿ ಮಾಲೀಕರು ಉಲ್ಲಂಘನೆ ಮಾಡಿದ್ದಾರೆ ಎಂದು ಅವರು ಕಿಡಿಕಾರಿದರು.

ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು ಮಾತನಾಡಿ, ಮಾಸಿಕ ಬಾಡಿಗೆ ಹಣವನ್ನು ನೀಡದೇ ಮತ್ತು ವಾಹನ ಸೇವೆಯನ್ನು ತೆಗೆದು ಹಾಕಿರುವುದರಿಂದ ವಾಹನ ಮಾಲೀಕರು ಸಾಲದ ಸಂಕಷ್ಟಕ್ಕೆ ಸಿಲುಕಿ ಆರ್ಥಿಕ ನಷ್ಟ ಹೊಂದಿರುವ ಬಸವಣ್ಣರಿಗೆ 10 ತಿಂಗಳ ಹಣದ ಬಾಬ್ತು 3.20 ಲಕ್ಷ ರೂ. ಮತ್ತು ಎಇಇ ತುರ್ತು ಸೇವಾ ವಾಹನದ 2 ತಿಂಗಳ ಬಾಬ್ತು ರೂ.56 ಸಾವಿರ ಸೇರಿದಂತೆ 3.75 ಲಕ್ಷ ರೂ.ಗಳನ್ನು ತುರ್ತಾಗಿ ಮಂಜೂರು ಮಾಡುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಜಿಲ್ಲಾ ವಿಭಾಗೀಯ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ಸಂಘಟನಾ ಸಂಚಾಲಕ ಮನೋಜ್ ಕುಮಾರ್, ನಿಲಸೋಗೆ ಕುಮಾರ್, ಕೊಳತ್ತೂರು ಪ್ರಭಾಕರ್, ಮಾರನಪುರ ಕೇಶವಮೂರ್ತಿ, ಯಡದೊರೆ ಚಂದ್ರಪ್ಪ,ಕೆಂಪಯ್ಯನಹುಂಡಿ ಜಯಣ್ಣ,ಬೈರಾಪುರ ಅರ್ಜುನ್,ಉಕ್ಕಲಗೆರೆ ಮಂಜುನಾಥ್, ಕುರುಬೂರು ಶಿವು, ಕೊಳತ್ತೂರು ಮಹದೇವಯ್ಯ, ಕೆಂಪಯ್ಯನಹುಂಡಿ ಸಿದ್ದರಾಜು ಮುರುಳಿ, ಡಣಾಯಕನಪುರ ಶಶಿಕಾಂತ್, ರವಿಕಾಂತ್, ಮಹದೇವಸ್ವಾಮಿ ಭಾಗವಹಿಸಿದ್ದರು.

ಹಿಟ್ಟುವಳ್ಳಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣನಿಗೆ ಅಭಿಷೇಕ



ತಿ.ನರಸೀಪುರ, ಸೆ.7– ಕೃಷ್ಣ ಗೋಕುಲಾಷ್ಟಮಿ ಅಂಗವಾಗಿ ಹಿಟ್ಟುವಳ್ಳಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಶ್ರೀ ಕೃಷ್ಣನಿಗೆ ಅಭಿಷೇಕ, ವಿಶೇಷ ಪೂಜೆ ನಡೆದು ನೂರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ದೇವಸ್ಥಾನದ ಪ್ರಧಾನ ಆರಾಧಕರಾದ ಟಿ.ಎನ್.ಅಭಿಜಿತ್ ಮಾತನಾಡಿ, ಭಗವಾನ್ ಶ್ರೀಕೃಷ್ಣನ ಸಂದೇಶ ನಮ್ಮೆಲ್ಲರ ಬದುಕಿಗೂ ಸ್ಫೂರ್ತಿ, ಬೆಳಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ನೀಡಿದ ಜ್ಞಾನದ ಸಾರ ಜೀವನ ಮೌಲ್ಯವನ್ನು ಕಟ್ಟಿಕೊಡುತ್ತದೆ. ನಮ್ಮ ಕರ್ತವ್ಯಗಳನ್ನು ನಮಗೆ ನೆನಪಿಸುತ್ತದೆ ಎಂದರು.

ಶ್ರೀ ಕೃಷ್ಣ ಸತ್ಯ, ನ್ಯಾಯಕ್ಕಾಗಿ ಹೋರಾಟ ನಡೆಸಿದ ಸಮಾಜದಲ್ಲಿ ಇಂದಿಗೂ ಕಂಸ ದುರ್ಯೋಧನರು ಇದ್ದಾರೆ. ಅಂತಹ ಶಕ್ತಿಯ ನಾಶಕ್ಕೆ ಪ್ರಯತ್ನ ಮಾಡುವ ಚಿಂತನೆ ಭಕ್ತರಲ್ಲಿ ಬರಬೇಕು ಎಂದರು. ಈ ಸಂದರ್ಭದಲ್ಲಿ ದೇವಸ್ಥಾನದ ಆರಾಧಕರಾದ ಟಿ.ಎನ್.ಅಜಯ್, ಟಿ.ಎಸ್. ಅರುಣ್ ಇಟ್ಟುವಳ್ಳಿ ಮೂರ್ತಿ, ರಾಜು, ರವಿ ಇನ್ನಿತರರು ಉಪಸ್ಥಿತರಿದ್ದರು.

ಕಂಪಲಾಪುರ ಸಹಕಾರ ಸಂಘಕ್ಕೆ ನಾಗೇಗೌಡ ಅಧ್ಯಕ್ಷ, ತಮ್ಮಯ್ಯ ಉಪಾಧ್ಯಕ್ಷ



ಕಂಪಲಾಪುರ, ಸೆ.7– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತರಾದ ನಾಗೇಗೌಡ, ಉಪಾಧ್ಯಕ್ಷರಾಗಿ ಬಿ.ಕೆ. ತಮ್ಮಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ – ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ನಾಗೇಗೌಡ ಹಾಗೂ ತಮ್ಮಯ್ಯ ಇಬ್ಬರನ್ನು ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಕಾರಣ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಬಿ.ಅಶ್ವಿನ್ ಕುಮಾರ್ ಅಧಿಕೃತವಾಗಿ ಘೋಷಿಸಿದರು.

ಸಹಕಾರ ಸಂಘದ ಆಡಳಿತ ಮಂಡಳಿಗೆ ಇತ್ತೀಚೆಗೆ ಚುನಾವಣೆ ನಡೆದು ಇರುವ 12 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತರು 11 ಹಾಗೂ ಕಾಂಗ್ರೆಸ್ ಬೆಂಬಲಿತ ಒಬ್ಬರು ಜಯಗಳಿಸಿದ್ದರು.

ಇದೇ ಸಂದರ್ಭ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎನ್.ಹರ್ಷ ಮತ್ತು ಸಿಬ್ಬಂದಿ, ನಿರ್ದೇಶಕರಾದ ಕೆ.ಕುಮಾರ್, ಮಹದೇವ್,ಕೆ.ಎಂ.ಲಕ್ಷ್ಮಣ್, ಕೆ.ಆರ್. ಸಂತೋಷ್, ರವಿ, ಎಂ.ಮಹದೇವ್, ಗಿರೀಶ್, ಮಣಿ ಮಹೇಶ್, ಭಾಗ್ಯ ರಾಜೇಗೌಡ, ಉದ್ಯಮಿ ಕೆ.ಎಸ್.ರಮೇಶ್, ವೆಂಕಟೇಶ್, ಬೀರೇಶ್, ವಿಜಿ, ರಾಮು, ಸೂರಿ, ನಾಗರಾಜ್, ಪುಟ್ಟೇಗೌಡ, ಮಂಜು ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಿಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.20ಕ್ಕೆ, ಮ.1.10ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ಲೂಸಿಯಾ (ಕ): ಬೆ.10.05ಕ್ಕೆ, ಜೈಲರ್ (ಕ): ಮ.12.45ಕ್ಕೆ, ಜೈಲರ್ (ತ): ಮ.3.55ಕ್ಕೆ, ಖುಷಿ (ತೆ): ರಾ.7.10ಕ್ಕೆ, ಜವಾನ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಬೆ.10.55ಕ್ಕೆ, ರಾ.10.10ಕ್ಕೆ, ಟೋಬಿ (ಕ): ಮ.1.10ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಸಂ.4.05ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ಸಂ.6.55ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಸ್ಸಿ, ಎಸ್ಟಿ ಅನುದಾನ ದುರ್ಬಳಕೆ; ಕರ್ನಾಟಕ ಅಂಬೇಡ್ಕರ್ ಸೇನೆ ಪ್ರತಿಭಟನೆ



ನಂಜನಗೂಡು, ಸೆ7– ಎಸ್ಸಿ ಎಸ್ಟಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಕೋಣನೂರು ಗ್ರಾಮ ಪಂಚಾಯಿತಿಯ ಮುಂದೆ ಕರ್ನಾಟಕ ಅಂಬೇಡ್ಕರ್ ಸೇನೆ ಪ್ರತಿಭಟನೆ ನಡೆಸಿತು.

ನಂಜನಗೂಡು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರದ ಕೋಣನೂರು ಗ್ರಾಮ ಪಂಚಾಯಿತಿ ಮುಂದೆ ಜಮಾಯಿಸಿದ ಕರ್ನಾಟಕ ಅಂಬೇಡ್ಕರ್ ಸೇನೆಯ ಪದಾಧಿಕಾರಿಗಳು, ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಕರ್ನಾಟಕ ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷ ಬಸವಟ್ಟಿಗೆ ನಾಗೇಂದ್ರ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನವನ್ನು ಅಭಿವೃದ್ಧಿಗೆ ಬಳಸದೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮೀಸಲಾತಿ ಹಣವನ್ನು 2020–21ನೇ ಸಾಲಿನಿಂದ 2023–24ನೇ ಸಾಲಿನವರೆಗೆ ಸಂಪೂರ್ಣವಾಗಿ ದುರ್ಬಳಕೆ ಮಾಡಿ ಇತರೆ ಕಾಮಗಾರಿಗಳಿಗೆ ಬಳಸಿದ್ದಾರೆ ಎಂದು ಆಪಾದಿಸಿದರು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಛಲವಾದಿ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಬದನವಾಳು ಪ್ರಶಾಂತ್, ಕರ್ನಾಟಕ ಅಂಬೇಡ್ಕರ್ ಸೇನೆಯ ತಾಲೂಕು ಅಧ್ಯಕ್ಷ ಹುಸ್ಕೂರು ಸಿದ್ದರಾಜು, ಹಲವರು ಭಾಗವಹಿಸಿದ್ದರು.

ಶ್ರೀಕೃಷ್ಣ ಜಯಂತಿ ಆಚರಣೆ ಅಂಗವಾಗಿ ವಿವಿಧ ಸ್ಪರ್ಧೆ

ಕೆ.ಆರ್.ನಗರ, ಸೆ.7– ಇಲ್ಲಿನ ಸಿಎಂ ರಸ್ತೆಯಲ್ಲಿರುವ ಶ್ರೀ ಕೃಷ್ಣ ಸೇವಾ ಪ್ರತಿಷ್ಠಾನದ ಆಶ್ರಯದಲ್ಲಿ ಶ್ರೀ ಕೃಷ್ಣ ಜಯಂತಿ ಆಚರಣೆ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸೆ.9 ಶನಿವಾರ ಮಧ್ಯಾಹ್ನ 2 ಗಂಟೆಗೆ ಶಾಲಾ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದ್ದು, ಸಬ್ ಜೂನಿಯರ್: 1ನೇ ತರಗತಿಯಿಂದ 4ನೇ ತರಗತಿವರೆಗೆ, ಜೂನಿಯರ್ ವಿಭಾಗ 5ನೇ ತರಗತಿಯಿಂದ 7ನೇ ತರಗತಿವರೆಗೆ, ಸೀನಿಯರ್ ವಿಭಾಗ 8ನೇ ತರಗತಿಯಿಂದ 10ನೇ ತರಗತಿಯವರೆಗೆ, ಸಂಜೆ 5:00 ಗಂಟೆಗೆ ದಾಸರ ಪದಗಳ ಸ್ಪರ್ಧೆ ಜೂನಿಯರ್ ವಿಭಾಗ: 1ನೇ ತರಗತಿಯಿಂದ 6ನೇ ತರಗತಿವರೆಗೆ, ಸೀನಿಯರ್ ವಿಭಾಗ: 7ನೇ ತರಗತಿಯಿಂದ 10ನೇ ತರಗತಿವರೆಗೆ. ಸೆ.10ರ ಭಾನುವಾರ ಮಧ್ಯಾಹ್ನ 3 ಗಂಟೆಗೆ "ಬಾಲ ಗೋಕುಲ" ಶ್ರೀ ಕೃಷ್ಣ ಮತ್ತು ರಾಧೆ ವೇಷ ಸ್ಪರ್ಧೆ. ಪ್ರತಿ ಸ್ಪರ್ಧೆಗೆ ಶುಲ್ಕ 10 ರೂ., ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ಹಾಗೂ ಬಹುಮಾನ ವಿತರಣೆ. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಶ್ರೀ ಟಿಫಾನಿಸ್, ಸಿಎಂ ರಸ್ತೆ, ಕೆ.ಆರ್. ನಗರ. ಪಿ.ಕೃಷ್ಣಮೂರ್ತಿ, ಶ್ರೀಕೃಷ್ಣ ಮಂದಿರ, ಕೆ.ಆರ್.ನಗರ ಇವರಲ್ಲಿ ಹೆಸರುಗಳನ್ನು ನೋಂದಾಯಿಸಬಹುದಾಗಿದೆ.

೮ನೇ ವರ್ಷದ ಪುಣ್ಯಸ್ಮರಣೆ



ಆತ್ಮಕ್ಕೆ ಶಾಂತಿ ಕೋರುವವರು
ಪತ್ನಿ : ಗೀತಾ
ಅಣ್ಣ : ರಾಮಕೃಷ್ಣ, ಮೋಹನ್ ಕುಮಾರ್ ಮತ್ತು ಕುಟುಂಬವರ್ಗದವರು
1127, ಸಾತಗಳ್ಳಿ, ಬಿ ಜೋನ್, 3ನೇ ಕ್ರಾಸ್, ಮೈಸೂರು

ಜಯಪ್ರಕಾಶ್

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ




ಶ್ರೀಮತಿ ಸುನಂದ ರವರು

ಇವರು ದಿನಾಂಕ: 29-08-2023ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 08-09-2023 ಶುಕ್ರವಾರ ಬೆಳಿಗ್ಗೆ 11.30ರಿಂದ ಗಂಟೆಯಿಂದ 12.00 ಗಂಟೆಗೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಮನುಗನಹಳ್ಳಿ ಸ್ವಗೃಹದಲ್ಲಿ ಹಾಲು-ತುಪ್ಪ ಹಾಗೂಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿ.

ದುಃಖತಪ್ತರು: ಶ್ರೀ ಕಾಳೇಗೌಡರು ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಶ್ರೀಮತಿ ರಾಜಲಕ್ಷ್ಮಿ ಮತ್ತು ಶ್ರೀ ಚಂದ್ರೇಗೌಡರು ಹಾಗೂ ಕುಟುಂಬವರ್ಗದವರು ಮತ್ತು ಮನುಗನಹಳ್ಳಿ ಗ್ರಾಮಸ್ಥರು.

13ನೇ ವರ್ಷದ ಸವಿನೆನಪು



ದಿ|| ಜೆ.ನಂಜಯ್ಯ (ಪಾಪಣ್ಣ)ರವರು
ಕುರುಬಾರಹಳ್ಳಿ

ನೀವು ನಮ್ಮನ್ನಗಲಿ ಹದಿಮೂರು ವರ್ಷವಾದರೂ ಸಹ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿ ಉಳಿದಿದೆ

ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ಕೋರುವ:
ಪತ್ನಿ–ಶ್ರೀಮತಿ ಕೆ.ಪುಟ್ಟತಾಯಮ್ಮ ಹಾಗೂ ಕುಟುಂಬವರ್ಗ

ಟೆಂಡರ್ ಪ್ರಕಟಣೆ

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
01	KMF/2023-24/IND0262	ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ 439 ಸಂಖ್ಯೆ ಫ್ಯಾಟೋಮ್ಯಾಟಿಕ್ ಯಂತ್ರಗಳ ಹಾಗೂ 609 ಎ.ಎಂ.ಸಿ.ಯು ಯಂತ್ರಗಳ ದ್ವೈವಾರ್ಷಿಕ ನಿರ್ವಹಣೆ ವಹಿಸಿಕೊಡಲು ಹಾಗೂ ಸಿವಿಲ್ ಕಾಮಗಾರಿ ಕೆಲಸಗಳಿಗೆ ತಾಂತ್ರಿಕ ಸಲಹೆಗಾರರನ್ನು ನೇಮಕ ಮಾಡುವ ಬಗ್ಗೆ.	14.09.2023 ಮಧ್ಯಾಹ್ನ 12.00 ಗಂಟೆಯವರೆಗೆ
02	KMF/2023-24/IND0261	ಒಕ್ಕೂಟಕ್ಕೆ ಅವಶ್ಯವಿರುವ ಮ್ಯಾಪ್ ಟೇಬಲ್ ಟಾಪ್, ಡಬಲ್ ಹೆಡ್ ಹೈ ಸ್ಪೀಡ್ ಪ್ಯಾಕಿಂಗ್ ಯಂತ್ರವನ್ನು ಖರೀದಿಸಿ ಅಳವಡಿಸುವ ಹಾಗೂ ಗೋಡಂಬಿಯನ್ನು ಅರ್ಧವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	
03	KMF/2023-24/SE0616	ಒಕ್ಕೂಟಕ್ಕೆ ಅವಶ್ಯವಿರುವ ಡಬಲ್ ಹೆಡ್ ಹೈ ಸ್ಪೀಡ್ ಮಿಲ್ಕ್ ಪ್ಯಾಕಿಂಗ್ ಯಂತ್ರವನ್ನು ಖರೀದಿಸಿ ಅಳವಡಿಸಲು ಹಾಗೂ ದಿನಸಿ ಸಾಮಾಗ್ರಿಗಳನ್ನು ಅರ್ಧವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು,
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ಜಿಲ್ಲೆ, ಬೈರಾಪುರ ಅಂಚೆ, ಟಿ. ನರಸೀಪುರ ಟೌನ್, ವಾರ್ಡ್ ನಂ. 8, ನಂಜನಗೂಡು ರಸ್ತೆ, ಮನೆ ಸಂಖ್ಯೆ 491 ರಲ್ಲಿ ವಾಸವಾಗಿರುವ ಲೇಟ್. ಲಚ್ಚಾರಾಂಜಿ ರವರ ಮಗ ಶ್ರೀ. **ಹೇಮಾರಾಂ** ರವರಿಂದ ಷೆಡ್ಯೂಲ್ ಜಮೀನನ್ನು ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ.

ಸದರಿ ಜಮೀನಿನಲ್ಲಿ ಯಾರಿಗಾದರೂ ಯಾವುದೇ ಹಕ್ಕಾಗಲೀ, ಹಿತಾಸಕ್ತಿಯಾಗಲೀ ಇದ್ದ ಪಕ್ಷದಲ್ಲಿ ಮತ್ತು ಸದರಿ ಜಮೀನಿನ ಕ್ರಯದ ವಿಚಾರದಲ್ಲಿ ಯಾವುದಾದರೂ ಆಕ್ಷೇಪಣೆ ವಗೈರೆಗಳಿದ್ದಲ್ಲಿ ತಮ್ಮಗಳ ಹಿತಾಸಕ್ತಿ ಮತ್ತು ಆಕ್ಷೇಪಣೆಗಳನ್ನು ಪೂರಕವಾದ ದಾಖಲಾತಿಗಳ ಮತ್ತು ಮಾಹಿತಿಗಳೊಡನೆ ನಮ್ಮ ಕಕ್ಷಿಗಾರರಿಗಾಗಲೀ, ಈ ಆಫೀಸಿಗಾಗಲೀ ಲಿಖಿತ ಮೂಲಕ ವಾಗಿ ಈ ತಿಳುವಳಿಕೆ ನೋಟೀಸು ಪ್ರಚುರವಾದ 14 (ಹದಿನಾಲ್ಕು) ದಿನಗಳೊಳಗೆ ತಿಳಿಯ ಪಡಿಸತಕ್ಕದ್ದು. ಅಂತಹ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸದ ಪಕ್ಷದಲ್ಲಿ ಸದರಿ ಜಮೀನಿನ ಎಲ್ಲಾ ವಿಧವಾದ ವಿಲ್ಲಂಗುಗಳಿಗೂ ಹೊರತಾಗಿರುತ್ತೆಂದು ನಮ್ಮ ಕಕ್ಷಿದಾರರು ತೀರ್ಮಾನಿಸಿ ಸದರಿ ಜಮೀನನ್ನು ಕ್ರಯಕ್ಕೆ ಪಡೆಯುವ ವಿಚಾರದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವವರಾಗಿರುತ್ತಾರೆ. ತದಾ, ನಂತರ ಬರಬಹುದಾದ ಯಾವ ಆಕ್ಷೇಪಣೆಗಳು ನಮ್ಮ ಕಕ್ಷಿಗಾರರನ್ನು ಬದ್ಧಪಡಿಸುವುದಿಲ್ಲವೆಂದು ಸಂಬಂಧಪಟ್ಟವರಿಗೆಲ್ಲ ಈ ಮೂಲಕ ಶೃತಪಡಿಸಿರುತ್ತೆ.

ಷೆಡ್ಯೂಲ್

ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಸಂತೇಮರಹಳ್ಳಿ ಹೋಬಳಿ, ಬಾಣಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 31/1 ವಿಸ್ತೀರ್ಣ 0–30 ಗುಂಟೆ, ಸರ್ವೆ ನಂ.31/3 ವಿಸ್ತೀರ್ಣ 01 ಎಕರೆ ಮತ್ತು ಸರ್ವೆ ನಂ.31/2ಬಿ ವಿಸ್ತೀರ್ಣ 01 ಎಕರೆ 19 ಗುಂಟೆ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ. 31/2ಎ ರ ಜಮೀನು, ಉತ್ತರಕ್ಕೆ : ಸರ್ವೆ ನಂ. 30 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 32 ರ ಜಮೀನು ಈ ಮಧ್ಯೆಯಿರುವ ಒಟ್ಟು 03 ಎಕರೆ 09 ಗುಂಟೆ ಜಮೀನು

ಎ.ಎನ್. ಪುಟ್ಟಸ್ವಾಮಿಗೌಡ ಬಿ.ಎ., ಎಲ್.ಎಲ್.ಬಿ
ವಕೀಲರು ಮತ್ತು ನೋಟರಿ, ನಂ. 324/1,
ಡಿ. ಸುಬ್ಬಯ್ಯ ರಸ್ತೆ, ಮೈಸೂರು – 570004
ಮೊ.ನಂ. 9620562745

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಕೆ. ಶ್ರೀನಿವಾಸ ರವರ ಮಗ ಶ್ರೀ. ಎಸ್. ಬಸವರಾಜು ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಕುವೆಂಪುನಗರ ತೊಣಚಿಕೊಪ್ಪಲು–ಜಯನಗರ, ಸಿ & ಡಿ ಬ್ಲಾಕ್ ನಲ್ಲಿರುವ ಖಾಲಿ ನಿವೇಶನ ಸಂಖ್ಯೆ. 1038, ಹಾಲಿ ಮೈಸೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ. 57 ಪಿಐಡಿ ಸಂಖ್ಯೆ. 146752 ರ ವ್ಯಾಪ್ತಿಯಲ್ಲಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ 80.00 ಅಡಿಗಳು ಮತ್ತು ಉತ್ತರ–ದಕ್ಷಿಣ 50 ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ. ಪೂರ್ವಕ್ಕೆ: ನಿವೇಶನ ಸಂಖ್ಯೆ. 1071 ಮತ್ತು 1072, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ. 1039 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ. 1037.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು–570001.
ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ ಎನ್. ವಿ. ನಾರಾಯಣಪ್ಪ ರವರ ಮಗ ಶ್ರೀ. ಕೆ. ಎನ್. ಪ್ರಸನ್ನ ಕುಮಾರ್ ರವರು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್ ಬಡಾವಣೆಯ ಖಾಲಿ ನಿವೇಶನ ಸಂಖ್ಯೆ 2520ರ ವಿಸ್ತೀರ್ಣ ಪೂರ್ವ–ಪಶ್ಚಿಮ 24.00 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ 15.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 360 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ನಿವೇಶನ ಸಂಖ್ಯೆ 2501, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 2521 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 2519.

ಸಹಿ/–ಶ್ರೀಲತಾ ದೀಕ್ಷಿತ್, ವಕೀಲರು,
ಎಸ್.ಎಲ್.ಡಿ. ಲಾ ಫರ್ಮ್,
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

PUBLIC NOTICE

The Public in general is here by informed that, THE JPN PROPERTIES, A Partnership Firm registered under Indian Partnership Act 1932 (Certificate of Firm No. MYS-F-288-2021-2022 dated 10.02.2022) Principal place of business at; Survey No. 35/1/2 36/2,3. Situated at Madagalli Village, Yelawala Hobli, Mysuru Taluk, represented by its authorized partner, Sri. P. NAGENDRA, S/o Late. Puttaswamy gowda decided to purchase below mentioned property from its owner/vendor Mr. ASHOK KUMAR RAI, S/o. Late K.Sanjeeva rai, R/at Door No. 13/10, New Sayyaji Rao Road, Bamboo Bazar, Mysuru and entered written sale agreement.

If any persons having any title, claim or interest in this property in any where what so ever shall intimate the same by raising objection in writing along with supporting documents within 7 days from the date of this publication before office of the advocate or else any such claims by any one shall be deemed to have been waved or abandoned and my clients shall proceeded to concluded the sale transaction with its owner/vendor.

SCHEDUEL PROPERTIES: ITEM No. 01: All the piece and parcel of commercial converted property bearing Survey No. 324 (Old Survey No. 48), measuring an extent of 26 Guntas, situated at Belavatha Village, Kasaba Hobli, Mysuru Taluk, Mysuru District. Bounded on: East: Land in Survey No. 325, West: Land in Survey No. 48, North :Land in Survey No. 42, South: Ring Road

ITEM No. 02: All that piece and parcel of commercial converted property bearing Survey No. 325 (Old Survey No. 48) measuring an extent of 12 Guntas, situated at Belwatha Village, Kasaba Hobli, Mysuru Taluk, Mysuru District. East: Land in Survey No. 326, West: Land in Survey No.324, North :Land in Survey No. 42, South: Ring Road

ITEM No. 03: All that piece and parcel of commercial converted property bearing Survey No. 326 (Old Survey No. 48) measuring an extent of 04 Guntas, situated at Belwatha Village, Kasaba Hobli, Mysuru Taluk, Mysuru District. East: Part of Survey No. 48 West: Land in Survey No. 325, North : Land in Survey No. 48 and Survey No. 42, South: Ring Road.

Sd/- C.N.Mahesh, BA LLB, Advocate, Office: No.1, Bajjanna Lane, Behind Maramma Temple, Chamarajapura, Mysore, Mob: 99004 81244 E-mail: cnmmysore@gmail.com
Place: Mysore, Date: 07.09.2023

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.

ನಂ. 105, 'ಕ್ಷೇಮಧಾಮ', ಎಲ್ ಐ ಸಿ ಕಾಲೋನಿ,
ಶ್ರೀರಾಂಪುರ 2ನೇ ಹಂತ, ಮೈಸೂರು –570034. ಫೋ: 0821–2362369

ಎಲ್ಲಾ ಸದಸ್ಯರ ಗಮನಕ್ಕೆ

ಮೇಲ್ಕಂಡ ನಮ್ಮ ಸಂಘದ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 10–09–2023 ರ ಭಾನುವಾರದಂದು ನಮ್ಮ ಸ್ವಂತ ಕಛೇರಿಯಾದ ಕ್ಷೇಮಧಾಮ ಸಭಾಭವನದಲ್ಲಿ ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಿದ್ದು, ಈ ಸಂಬಂಧ ತಿಳುವಳಿಕೆ ಪತ್ರಗಳನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮುಖಾಂತರ ಕಳುಹಿಸಿದ್ದೇವೆ. ಯಾರಿಗಾದರೂ ತಲುಪದಿದ್ದಲ್ಲಿ ಈ ತಿಳುವಳಿಕೆ ಮೇರೆಗೆ ಮಹಾಸಭೆಗೆ ಬರಬೇಕೆಂದು ಕೋರುತ್ತೇವೆ. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸುವುದು.

ದಿನಾಂಕ: 07–09–2023
ಸ್ಥಳ: ಮೈಸೂರು
ಎನ್ ಎಲ್ ಶೇಖರ್
ಅಧ್ಯಕ್ಷರು

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ಆಲನಹಳ್ಳಿ, ನೇತಾಜಿನಗರ, ಮೈಸೂರು
ರಿಜಿಸ್ಟರ್ ನಂ: ಎ.ಆರ್.ಎಂ/ಪಿ.ಎಲ್.ಎನ್/ರಿಜನ್/7965/80–81
ದಿನಾಂಕ: 30–7–1980

ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ನೇತಾಜಿನಗರ ಮೈಸೂರು. ಈ ಸಂಘದ 2022–23ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 10–09–2023ರಂದು ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ 4ನೇ ಹಂತದ ಬಡಾವಣೆಯ ಜಮೀನು ಸ್ಥಳದಲ್ಲಿ ದಾರಿಪುರ ಗ್ರಾಮ. ಹೆಚ್.ಡಿ.ಕೋಟೆ ರಸ್ತೆ, ಮೈಸೂರು ಜಿಲ್ಲೆ ಜಾಗದಲ್ಲಿ ಏರ್ಪಡಿಸಲಾಗಿದೆ. ಆಹ್ವಾನವನ್ನು ಸದಸ್ಯರೆಲ್ಲಾರಿಗೂ ಅಂಚೆ ಮುಖಾಂತರ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದೆ ಇರುವವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಸಭೆಗೆ ಹಾಜರಾಗಬೇಕೆಂದು ತಮ್ಮಲ್ಲಿ ಕೋರಿದೆ.

ಸಹಿ/– **ಟಿ.ಎನ್. ನಾಗೇಶ್**
ಅಧ್ಯಕ್ಷರು, ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಮನ್‌ಮುಲ್
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ–571428

2022–23ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಒಕ್ಕೂಟದ 2022–23ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 22–09–2023ರ ಶುಕ್ರವಾರ ಬೆಳಿಗ್ಗೆ 10.25 ಗಂಟೆಗೆ "ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ ಕಚೇರಿ ಆವರಣ"ದಲ್ಲಿ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಿ.ಬೋರೇಗೌಡ ರವರ ಘನ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿರುತ್ತದೆ.

ಸದಸ್ಯ ಸಂಘಗಳ ಪ್ರತಿನಿಧಿಗಳು ವಾರ್ಷಿಕ ಸಾಮಾನ್ಯ ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸನ್ನು ಎಲ್ಲಾ ಸದಸ್ಯ ಸಂಘಗಳಿಗೂ ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಅಂಚೆ ಮೂಲಕ ನೋಟೀಸು ತಲುಪದೇ ಇದ್ದ ಪಕ್ಷದಲ್ಲಿ ಇದನ್ನೇ ಅಧೀಕೃತ ನೋಟೀಸು ಎಂದು ಪರಿಗಣಿಸುವುದು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿಗಳು ಕಡ್ಡಾಯವಾಗಿ ಸಂಘದ ನಿರ್ಣಯದ ಪ್ರತಿಯೊಂದಿಗೆ ಹಾಜರಾಗಲು ಈ ಮೂಲಕ ಕೋರಲಾಗಿದೆ.

ಸ್ಥಳ : ಗೆಜ್ಜಲಗೆರೆ
ದಿನಾಂಕ : 07–09–2023
ಸಹಿ/– ವ್ಯವಸ್ಥಾಪಕ ನಿರ್ದೇಶಕರು